Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ 16 | ಸಂಚಿಕೆ 33 | ಆಗಸ್ಟ್ 8–14, 2022 | ಪುಟ 16 | ರೂ.10/-

Volume: 16 Issue: 33 August 8-14, 2022 Pages: 16 Price: 10/-

https://janashakthi.wordpress.com e-mail : js_weekly@yahoo.com





ಸಮಾನತೆ ಮತ್ತು ಸೌಹಾರ್ದತೆಗಾಗಿ ಮಹಿಳಾ ಆಂದೋಲನ

ಸಮ್ಮೇಳನದ ಸಂಕಲ್ಪ



ದಾವಣಗೆರೆ ಸಂಭ್ರಮ: ಕಾಂಗ್ರೆಸ್ ನಡೆ ಯಾವ ಕಡೆ?



ತೈವಾನ್ ವಿವಾದ: ಪೆಲೋಸಿ ಭೇಟಿ ಈಗೇಕೆ?



ನಾಲಗೆ ನಾಗರ ಮಾಡಿಕೊಂಡ ರಾಜಕಾರಣದಿಂದ ಪ್ರಜಾಪ್ರಭುತ್ವಕ್ಕೆ ಅಪಾಯ –ಬರಗೂರು

ಆನೆ ಮತ್ತು ಮಾನವ ಸಂಘರ್ಷ ಕಾರಣ – ಪರಿಹಾರ







ಆಗಸ್ಟ್ 1-15: ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವದ ಆಚರಣೆ -ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಸಪ್ಟಂಬರ್ 14-24: ಮೋದಿ ಸರಕಾರದ ಧೋರಣೆಗಳ ವಿರುದ್ಧ ಪ್ರಚಾರಾಂದೋಲನ

ಸಿಪಿಐ(ಎಂ) ಆಗಸ್ಟ್ 1-15 ರಿಂದ ಭಾರತದ ಸ್ವಾತಂತ್ರ್ಯದ 75 ನೇ ವಾರ್ಷಿಕೋತ್ಸವವನ್ನು ಆಚರಿಸುತ್ತದೆ, ಪಕ್ಷದ ಎಲ್ಲಾ ಕಚೇರಿಗಳಲ್ಲಿ ರಾಷ್ಟ್ರೀಯ ಧ್ವಜಾರೋಹಣ ಮತ್ತು ಸಂವಿಧಾನದ ಪೀಠಿಕೆಯ ಮೇಲೆ ಪ್ರತಿಜ್ಞೆ ಮಾಡುವುದರೊಂದಿಗೆ ಇದು ಸಮಾಪನಗೊಳ್ಳುತ್ತದೆ. ಸ್ವಾತಂತ್ರ್ಯ ಹೋರಾಟ, ಪ್ರಜಾಪ್ರಭುತ್ವದ ರಕ್ಷಣೆ, ಪ್ರಜಾಸತ್ತಾತ್ಮಕ ಹಕ್ಕುಗಳು, ನಾಗರಿಕ ಸ್ವಾತಂತ್ರ್ಯಗಳು ಮತ್ತು ಭಾರತದ ಜಾತ್ಯತೀತ, ಪ್ರಜಾಸತ್ತಾತ್ಮಕ, ಸಾಂವಿಧಾನಿಕ ಮೌಲ್ಯಗಳಲ್ಲಿ ಕಮ್ಯೂನಿಸ್ಟರ ಭವ್ಯ ಪಾತ್ರವನ್ನು ಈ ಅಭಿಯಾನವು ಎತ್ತಿ ತೋರಿಸುತ್ತದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಇದಲ್ಲದೆ, ಸೆಪ್ಟೆಂಬರ್ 14 ರಿಂದ 24 ರವರೆಗೆ, ಜನರ ಜೀವನೋಪಾಯದ ಮೇಲೆ ಬಿಜೆಪಿ ಕೇಂದ್ರ ಸರ್ಕಾರದ ಹೆಚ್ಚುತ್ತಿರುವ ದಾಳಿಗಳ ಕುರಿತು ಪ್ರಚಾರಾಂದೋಲನವನ್ನು ನಡೆಸಲಾಗುವುದು. ಈ ಕುರಿತ ಪ್ರತಿ ರಾಜ್ಯದಲ್ಲಿನ ಕ್ರಿಯಾ ಯೋಜನೆಯನ್ನು ರಾಜ್ಯ ಸಮಿತಿಗಳು ಯೋಜಿಸುತ್ತವೆ. ಈ ಅಭಿಯಾನವು ರಾಜ್ಯಗಳ ರಾಜಧಾನಿಗಳಲ್ಲಿ ರಾಜ್ಯಮಟ್ಟದ ಸಾರ್ವಜನಿಕ ಸಭೆಯೊಂದಿಗೆ ಮುಕ್ತಾಯಗೊಳ್ಳಲಿದೆ.

ಇವುಗಳೊಂದಿಗೆ ಕೇರಳ ಎಲ್‌ಡಿಎಫ್ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನಗಳ ವಿರುದ್ಧ ದೇಶಾದ್ಯಂತ ಅಭಿಯಾನಗಳನ್ನು ನಡೆಸಲು ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧರಿಸಿದೆ. ಈ ಅಭಿಯಾನವು ಎಲ್‌ಡಿಎಫ್ ಸರ್ಕಾರ ಅನುಸರಿಸುತ್ತಿರುವ ಜನಪರ ಪರ್ಯಾಯ ನೀತಿಗಳನ್ನು ಎತ್ತಿ ತೋರಿಸಲಾಗುವುದು ಎಂದು ಅದು ಹೇಳಿದೆ.

ಜುಲೈ 30 ಮತ್ತು 31ರಂದು ನವದೆಹಲಿಯಲ್ಲಿ ಸಭೆ ಸೇರಿದ ಕೇಂದ್ರ ಸಮಿತಿಯ ಸಭೆಯ ನಂತರ ಕೇಂದ್ರ ಸಮಿತಿ ನೀಡಿರುವ ಹೇಳಿಕೆಯಲ್ಲಿ ಈ ಕರೆಗಳನ್ನು ಕೊಡಲಾಗಿದೆ. ಈ ಹೇಳಿಕೆಯ ಪೂರ್ಣ ಪಾಠ ಹೀಗಿದೆ:

ಸಿಪಿಐ(ಎಂ)ನ 23ನೇ ಮಹಾಧಿವೇಶನದ ಮುಕ್ತಾಯದ ನಂತರ ಕಳೆದ ನಾಲ್ಕು ತಿಂಗಳುಗಳು ನವ-ಉದಾರವಾದಿ ಸುಧಾರಣೆಗಳ ಆಕ್ರಮಣಕಾರಿ ಅನುಸರಣೆಯಿಂದ ಬಂಟ ಬಂಡವಾಳಶಾಹಿ ಮತ್ತು ಕೋಮುವಾದಿ-ಕಾರ್ಪೊರೇಷನ್ ಬಂಡವಾಳಶಾಹಿ ನಂಟನ್ನು ಬಲಪಡಿಸಿ ಭಾರತದ ಅರ್ಥವ್ಯವಸ್ಥೆಯನ್ನು ದುರ್ಬಲಗೊಳಿಸುವ ಮತ್ತು ಜನರ ಮೇಲೆ ಅಭೂತಪೂರ್ವ ಹೊರೆಗಳನ್ನು ಹೇರುವ ಜೊತೆಗೆ ಫ್ಯಾಸಿಸ್ಟ್ ತೆರನ ಆರ್‌ಎಸ್‌ಎಸ್‌ನ ಹಿಂದುತ್ವ ಅಜೆಂಡಾವನ್ನು ಆಕ್ರಾಮಕ ರೀತಿಯಲ್ಲಿ ಮುಂದೊತ್ತಲಾಗುತ್ತಿದೆ ಎಂಬುದನ್ನು ಮೈನಡುಗಿಸುವ ರೀತಿಯಲ್ಲಿ ದೃಢೀಕರಿಸುತ್ತಿವೆ.

ಹಣದುಬ್ಬರದ ನಾಗಾಲೋಟ

ಅಭೂತಪೂರ್ವ ಬೆಲೆಯೇರಿಕೆ, ಇದರಿಂದಾಗಿ ಸಗಟು ಬೆಲೆ ಸೂಚ್ಯಂಕ ಮತ್ತು ಗ್ರಾಹಕ ಬೆಲೆ ಸೂಚ್ಯಂಕಗಳೆರಡೂ ದಾಖಲೆಯ ಎತ್ತರಕ್ಕೆ ಜಿಗಿದಿರುವುದು , ಜನರ ಜೀವನೋಪಾಯವನ್ನು ಧ್ವಂಸಗೊಳಿಸುತ್ತಿದೆ, ಅವರ ಖರೀದಿ ಸಾಮರ್ಥ್ಯವನ್ನು ಕಡಿಮೆ ಮಾಡುತ್ತಿದೆ, ಇದರಿಂದಾಗಿ ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯ ಮಟ್ಟಗಳನ್ನು ಮತ್ತಷ್ಟು ಇಳಿಯುವಂತಾಗುತ್ತಿದೆ. ಕುಗ್ಗುತ್ತಿರುವ ಆಂತರಿಕ ಬೇಡಿಕೆಯು ಉತ್ಪಾದನಾ ಚಟುವಟಿಕೆಯನ್ನು ಕೆಳಕ್ಕೆ ತಳ್ಳುತ್ತಿದೆ, ಇದು ಅರ್ಥವ್ಯವಸ್ಥೆಯಲ್ಲಿ ಮತ್ತಷ್ಟು ನಿಧಾನಗತಿ ಮತ್ತು ಉದ್ಯೋಗ ನಷ್ಟಕ್ಕೆ ಕಾರಣವಾಗುತ್ತಿದೆ.

ಈ ಹಣದುಬ್ಬರದಲ್ಲಿ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯೊಂದಿಗೆ. ಆಹಾರ ಮತ್ತು ಇಂಧನ ಬೆಲೆಗಳೇ ಮುಖ್ಯ ಅಂಶಗಳಾಗಿವೆ. ಇದರ ಮೇಲೆ ಇತ್ತೀಚಿನ ಸುತ್ತಿನ ಜಿಎಸ್‌ಟಿ ಹೆಚ್ಚಳ ಬಂದಿರುವುದು ದೈನಂದಿನ ಬಳಕೆಯ ಎಲ್ಲಾ ಅಗತ್ಯ ವಸ್ತುಗಳ ಬೆಲೆಯನ್ನು ಮತ್ತಷ್ಟು ಹೆಚ್ಚಿಸಿದೆ. ಸಿಪಿಐ(ಎಂ) ಕೇಂದ್ರ ಸಮಿತಿಯು ಜಿಎಸ್‌ಟಿಯಲ್ಲಿ ಹೆಚ್ಚಳ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸೆಸ್/ಸರ್‌ಚಾರ್ಜ್‌ಗಳನ್ನು ಹಿಂಪಡೆಯಬೇಕು ಎಂದು ಆಗ್ರಹಿಸುತ್ತದೆ.

ಮೋದಿ ಸರ್ಕಾರವು ಜನರ ಮೇಲೆ ಹೊರೆ ಹೇರುವ ಬದಲು ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳಲು ಮಹಾ ಶ್ರೀಮಂತರ ಮೇಲೆ ತೆರಿಗೆ ವಿಧಿಸಬೇಕು.

ದಾಖಲೆ ನಿರುದ್ಯೋಗ

20-24 ವರ್ಷ ವಯಸ್ಸಿನವರಲ್ಲಿ ನಿರುದ್ಯೋಗ ದರ 42%ದಷ್ಟು ಭಾರೀ ಪ್ರಮಾಣದಲ್ಲಿದೆ. ಇದರ ಜೊತೆಗೇ, ನಮ್ಮ 90 ಕೋಟಿ ದುಡಿಯುವ ವಯಸ್ಸಿನ ಜನಸಂಖ್ಯೆಯಲ್ಲಿ (2020ರಲ್ಲಿ)) 61.2% ದಷ್ಟು ಜನರು ಉದ್ಯೋಗಗಳನ್ನು ಹುಡುಕುವುದನ್ನೇ ನಿಲ್ಲಿಸಿದ್ದಾರೆ. ಶ್ರಮ ಬಲದ ಭಾಗವಹಿಸುವಿಕೆಯ ಪ್ರಮಾಣವು ಅತ್ಯಂತ ಕೆಳಮಟ್ಟದಲ್ಲಿ, 38.8% ರಷ್ಟಿದೆ. ಇದು ಅತಿ ಹೆಚ್ಚಾಗಿ ತಟ್ಟಿರುವುದು ಮಹಿಳೆಯರನ್ನು. ಕಳೆದ ಎಂಟು ವರ್ಷಗಳಲ್ಲಿ ಮೋದಿ ಸರ್ಕಾರವು ಅತ್ಯಲ್ಪ ಪ್ರಮಾಣದಲ್ಲಿ, ಶೇಕಡಾ 0.33 ಅರ್ಜಿದಾರರಿಗೆ ಮಾತ್ರ ಸರ್ಕಾರಿ ಉದ್ಯೋಗಗಳನ್ನು ಒದಗಿಸಿದೆ ಎಂಬುದನ್ನು ಸಂಸತ್ತಿನಲ್ಲಿ ಒಪ್ಪಿಕೊಂಡಿದೆ.. ಹತ್ತು ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ.

ಮೋದಿ ಸರ್ಕಾರವು ತಕ್ಷಣವೇ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು ಮತ್ತು MGNREGS ಗಾಗಿ ಹಂಚಿಕೆಯನ್ನು ಗಣನೀಯವಾಗಿ ಹೆಚ್ಚಿಸಬೇಕು ಮತ್ತು ನಮ್ಮ ಯುವಜನತೆ ಹಾಗೂ ಜನಸಂಖ್ಯಾ ಲಾಭಾಂಶವನ್ನು ವ್ಯರ್ಥ ಮಾಡುವುದನ್ನು ನಿಲ್ಲಿಸಬೇಕು.

ಆದಿವಾಸಿಗಳ ಹಕ್ಕುಗಳ ಮೇಲೆ ದಾಳಿ

ಅರಣ್ಯ ಸಂರಕ್ಷಣಾ ಕಾಯಿದೆಯಡಿಯಲ್ಲಿ ತಿದ್ದುಪಡಿ ಮಾಡಲಾದ ನಿಯಮಗಳನ್ನು ತಕ್ಷಣವೇ ಹಿಂಪಡೆಯಬೇಕು ಎಂದು ಕೇಂದ್ರ ಸಮಿತಿ ಒತ್ತಾಯಿಸುತ್ತದೆ. ಅರಣ್ಯ ಭೂಮಿಯನ್ನು ಬೇರೆ ಉದ್ದೇಶಕ್ಕೆ ತಿರುಗಿಸುವ ಮೊದಲು ಗ್ರಾಮ ಸಭೆಗಳು, ಬುಡಕಟ್ಟು ಸಮುದಾಯಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿಗಳ ಪೂರ್ವ-ಸಮ್ಮತಿಯನ್ನು ಕಡ್ಡಾಯವಾಗಿ ಪಡೆಯಬೇಕು. ಅವರ ಈ ಹಕ್ಕುಗಳನ್ನು ಕಸಿದುಕೊಳ್ಳುವ ಮೂಲಕ ಖಾಸಗಿ ಕಾರ್ಪೊರೇಟ್‌ಗಳಿಗೆ ಗರಿಷ್ಠ ಲಾಭ ಪಡೆಯಲು ಮತ್ತು ಅರಣ್ಯಗಳ ನಾಶಕ್ಕೆ ಈ ತಿದ್ದುಪಡಿಗಳು ಅನುಕೂಲ ಮಾಡಿ ಕೊಡುತ್ತದೆ. ಇದು ಹವಾಮಾನ ಬದಲಾವಣೆಯ ಮೇಲೆ ಹಾನಿಕಾರಕ ಪರಿಣಾಮಗಳನ್ನು ಬೀರುತ್ತದೆ.

ಪೂರ್ಣಪ್ರಮಾಣದ ಸರ್ವಾಧಿಕಾರ

ಇ.ಡಿ.(ಜಾರಿ ನಿರ್ದೇಶನಾಲಯ) ಮತ್ತು ಸಿಬಿಐ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ರಾಜ್ಯ ಸರ್ಕಾರಗಳನ್ನು ಅಸ್ಥಿರಗೊಳಿಸುವ ಮತ್ತು ವಿರೋಧ ಪಕ್ಷದ ನಾಯಕರನ್ನು ಗುರಿಯಾಗಿಸುವ ಮೋದಿ ಸರ್ಕಾರದ ರಾಜಕೀಯ ಅಂಗವಾಗಿ ಕಾರ್ಯನಿರ್ವಹಿಸುತ್ತಿವೆ. ಇನ್ನೇನು ನಿವೃತ್ತಿಯಾಗಲಿದ್ದ ನ್ಯಾಯಾಧೀಶರ ನೇತೃತ್ವದ ಸುಪ್ರೀಂ ಕೋರ್ಟ್ ಪೀಠ, ಅವರ ನಿವೃತ್ತಿಯ ಸ್ವಲ್ಪವೇ ಮೊದಲು ನೀಡಿದ ತೀರ್ಪು ಇ.ಡಿ. ಯನ್ನು ಮತ್ತಷ್ಟು ಮಾರಕವಾಗಿ ಸಜ್ಜುಗೊಳಿಸುವ ಹಣ ಮಡಿಗೊಳಿಸುವುದಕ್ಕೆ ತಡೆ ಕಾಯ್ದೆ(ಕಒಐಂ)ಗೆ 2019ರ ಎಲ್ಲಾ ತಿದ್ದುಪಡಿಗಳನ್ನು ಎತ್ತಿಹಿಡಿದಿದೆ. ಇದು ಪ್ರಜಾಪ್ರಭುತ್ವದ ಮೇಲೆ ಅತ್ಯಂತ ಹಾನಿಕಾರಕ ಏಟು.

ಸಂಸತ್ತಿನ ಮೇಲೆ ಪ್ರಹಾರ: ಬೆಲೆ ಏರಿಕೆ, ನಿರುದ್ಯೋಗ ಮುಂತಾದ ಜನರ ಜ್ವಲಂತ ಸಮಸ್ಯೆಗಳ ಕುರಿತು ಯಾವುದೇ ಮಹತ್ವದ ನಿರ್ಣಯವನ್ನು ಚರ್ಚಿಸಲು ನಿರಾಕರಿಸುವ ಮೂಲಕ ಮೋದಿ ಸರ್ಕಾರ ಸಂಸತ್ತಿನ ಮೇಲೆ ಅಭೂತಪೂರ್ವ ದಾಳಿ ನಡೆಸುತ್ತಿದೆ. 27 ಸಂಸತ್ ಸದಸ್ಯರನ್ನು ಈ ಅಧಿವೇಶನದ ಅವಧಿಗೆ ಅಮಾನತುಗೊಳಿಸಲಾಗಿದೆ. ಸ್ವತಂತ್ರ ಭಾರತದಲ್ಲಿ ಇದು ಅಭೂತಪೂರ್ವ.

ಮಾನವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಖ್ಯಾತ ಪ್ರತಿಪಾದಕಿ ಮತ್ತು ಕೋಮುವಾದದ ವಿರುದ್ಧ ಧೀರ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಅವರನ್ನು ಬಂಧಿಸಿದ ವಿಧಾನವನ್ನು ಕೇಂದ್ರ ಸಮಿತಿ ಖಂಡಿಸುತ್ತದೆ. ಈ ಬಂಧನವನ್ನು ಮತ್ತೆ ಅದೇ ನ್ಯಾಯಾಧೀಶರ ನೇತೃತ್ವದ ಪೀಠದ ಸುಪ್ರಿಂ ಕೋರ್ಟ್ ತೀರ್ಪು ಸುಗಮಗೊಳಿಸಿತು.

ಜುಬೇರ್ ಅಹ್ಮದ್ ಅವರನ್ನು ಕ್ಷುಲ್ಲಕ ಆಧಾರದ ಮೇಲೆ ಬಂಧಿಸಿದ ರೀತಿ, ಈ ಮೋದಿ ಸರ್ಕಾರದಲ್ಲಿ ಹಿಂಸಾಚಾರಕ್ಕೆ ಕಾರಣವಾಗುವ ದ್ವೇಷ ಭಾಷಣ ಮಾಡುವವರನ್ನು ಮತ್ತು ಪ್ರಚೋದಿಸುವವರನ್ನು ಪ್ರಭುತ್ವ ರಕ್ಷಿಸುತ್ತದೆ, ಆದರೆ ಅಂತಹ ಭಾಷಣಗಳನ್ನು ಬಯಲಿಗೆಳೆದು ಸತ್ಯವನ್ನು ಜನರ ಎದುರು ತರುವವರನ್ನು ಬಂಧಿಸಲಾಗುತ್ತದೆ, ಕಂಬಿ ಎಣಿಸುವಂತೆ ಮಾಡಲಾಗುತ್ತದೆ.

ಭೀಮಾ ಕೋರೆಗಾಂವ್ ಕೈದಿಗಳು ಮೂರು ವರ್ಷಗಳಿಂದ ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಪತ್ರಕರ್ತರು ಮತ್ತು ವಿದ್ಯಾರ್ಥಿಗಳು ಸೇರಿದಂತೆ ಹಲವರನ್ನು ಕರಾಳ ನಿರ್ಬಂಧ ಕಾಯ್ದೆಗಳಡಿ ಬಂಧಿಸಲಾಗಿದೆ.

ತೀಸ್ತಾ ಸೆಟಲ್ವಾಡ್, ಆರ್.ಬಿ.ಶ್ರೀಕುಮಾರ್, ಭೀಮಾ ಕೋರೆಗಾಂವ್ ಬಂಧಿಗಳು ಮತ್ತಿತರರನ್ನು ಕೂಡಲೇ ಬಿಡುಗಡೆ ಮಾಡುವಂತೆ ಕೇಂದ್ರ ಸಮಿತಿ ಒತ್ತಾಯಿಸುತ್ತದೆ.

ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಪಿಡುಗು

ಆಳುವ ಪಕ್ಷದ ಕೃಪಾಪೋಷಣೆಯಲ್ಲಿ ಹಿಂದುತ್ವ ಸಂಘಟನೆಗಳಿಂದ ಕೋಮು ಧ್ರುವೀಕರಣದ ಘಟನೆಗಳು ಪಿಡುಗಿನಂತೆ ಹೆಚ್ಚುತ್ತಿರುವುದನ್ನು, ಇದರಿಂದಾಗಿ ಹಲವು ರಾಜ್ಯಗಳಲ್ಲಿ ಹಿಂಸಾಚಾರದ

ಪುಟ 7 ಕ್ಕೆ

ಕೇಂದ್ರ ಸಮಿತಿ ಕರೆಗಳು:

1. ಆಗಸ್ಟ್ 1-15, ಭಾರತದ ಸ್ವಾತಂತ್ರ್ಯದ 75 ನೇ ವಾರ್ಷಿಕೋತ್ಸವವನ್ನು ಆಚರಿಸುವುದು, ಪಕ್ಷದ ಎಲ್ಲಾ ಕಚೇರಿಗಳಲ್ಲಿ ರಾಷ್ಟ್ರೀಯ ಧ್ವಜಾರೋಹಣ ಮತ್ತು ಸಂವಿಧಾನದ ಪೀಠಿಕೆಯ ಮೇಲೆ ಪ್ರತಿಜ್ಞೆ ಮಾಡುವುದರೊಂದಿಗೆ ಅದು ಸಮಾಪನಗೊಳ್ಳುತ್ತದೆ. ಸ್ವಾತಂತ್ರ್ಯ ಹೋರಾಟ, ಪ್ರಜಾಪ್ರಭುತ್ವದ ರಕ್ಷಣೆ, ಪ್ರಜಾಸತ್ತಾತ್ಮಕ ಹಕ್ಕುಗಳು, ನಾಗರಿಕ ಸ್ವಾತಂತ್ರ್ಯಗಳು ಮತ್ತು ಭಾರತದ ಜಾತ್ಯತೀತ, ಪ್ರಜಾಸತ್ತಾತ್ಮಕ, ಸಾಂವಿಧಾನಿಕ ಮೌಲ್ಯಗಳಲ್ಲಿ ಕಮ್ಯುನಿಸ್ಟರ ಭವ್ಯ ಪಾತ್ರವನ್ನು ಅಭಿಯಾನವು ಎತ್ತಿ ತೋರಿಸುತ್ತದೆ.
2. ಸೆಪ್ಟೆಂಬರ್ 14 ರಿಂದ 24 ರವರೆಗೆ, ಜನರ ಜೀವನೋಪಾಯದ ಮೇಲೆ ಬಿಜೆಪಿ ಕೇಂದ್ರ ಸರ್ಕಾರದ ಹೆಚ್ಚುತ್ತಿರುವ ದಾಳಿಗಳ ಕುರಿತು ಪ್ರಚಾರಾಂದೋಲನವನ್ನು ನಡೆಸುವುದು. ಪ್ರತಿ ರಾಜ್ಯದಲ್ಲಿನ ಕ್ರಿಯಾ ಯೋಜನೆಯನ್ನು ರಾಜ್ಯ ಸಮಿತಿಗಳು ಯೋಜಿಸುತ್ತವೆ. ಈ ಅಭಿಯಾನವು ರಾಜ್ಯ ರಾಜಧಾನಿಗಳಲ್ಲಿ ರಾಜ್ಯಮಟ್ಟದ ಸಾರ್ವಜನಿಕ ಸಭೆಯೊಂದಿಗೆ ಮುಕ್ತಾಯಗೊಳ್ಳುತ್ತದೆ.
3. ಕೇರಳ ಎಲ್‌ಡಿಎಫ್ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನಗಳ ವಿರುದ್ಧ ದೇಶಾದ್ಯಂತ ಅಭಿಯಾನಗಳನ್ನು ನಡೆಸುವುದು. ಈ ಅಭಿಯಾನವು ಎಲ್‌ಡಿಎಫ್ ಸರ್ಕಾರ ಅನುಸರಿಸುತ್ತಿರುವ ಜನಪರ ಪರ್ಯಾಯ ನೀತಿಗಳನ್ನು ಎತ್ತಿ ತೋರಿಸುತ್ತದೆ.

ಸಂಪಾದಕೀಯ

ಚುನಾವಣಾ ಸಿದ್ಧತೆಯಲ್ಲಿನ ತಾಲೀಮುಗಳು

ಚುನಾವಣೆಯ ನಿರೀಕ್ಷೆಯಲ್ಲಿ ಎಲ್ಲಾ ಪಕ್ಷಗಳಲ್ಲಿ ರಾಜಕೀಯ ರಂಗ ತಾಲೀಮು ಆರಂಭಗೊಂಡಿದೆ. ವಿಧಾನಸಭಾ ಚುನಾವಣೆ ಇನ್ನೂ ವರ್ಷ ಇರುವಾಗಲೇ ಈ ಪ್ರಮಾಣದ ಸಿದ್ಧತೆ ಆರಂಭಗೊಂಡಿರುವುದು ಇದೇ ಮೊದಲ ಸಲ ಇರಬೇಕು. ಬಹುಶಃ ಜನತೆಯನ್ನು ಅಷ್ಟು ಸುಲಭದಲ್ಲಿ ಮನವೊಲಿಸಿಕೊಳ್ಳಲು ಆಗುವುದಿಲ್ಲ ಎನ್ನುವ ಗ್ರಹಿಕೆಯ ಅಂಶವು ಕಾರಣವಾಗಿರಬೇಕು. ಹೀಗಾಗಿ ಜನರನ್ನು ಮನವೊಲಿಸಿಕೊಳ್ಳಲು ಅನೇಕ ಕಸರತ್ತಿಗೆ ಪ್ರಮುಖ ರಾಜಕೀಯ ಪಕ್ಷಗಳು ಇಳಿದಂತೆ ಕಾಣುತ್ತಿದೆ. ಪ್ರಜಾಪ್ರಭುತ್ವದಲ್ಲಿ ಜನತೆಯೇ ಸರ್ವೋಚ್ಛರು. ಅವರ ಮನವೊಲಿಸುವುದು, ಮನ ಗೆಲ್ಲುವುದು ಅತ್ಯಂತ ಸಹಜವಾದ ಕ್ರಿಯೆಗಳಾಗಿವೆ. ಆದರೆ ಅದಕ್ಕಾಗಿ ಅನುಸರಿಸುವ ಮಾರ್ಗಗಳು ನ್ಯಾಯ ಸಮ್ಮತವಾಗಿರಬೇಕು, ಪಾರದರ್ಶಕವಾಗಿಯೂ ಇರಬೇಕು. ಇಲ್ಲವಾದಲ್ಲಿ ಅವು ಪ್ರಶ್ನಾರ್ಹ ಮತ್ತು ವಿಮರ್ಶಾರ್ಹವಾಗಿವೆ.

ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ನಂತಹ ಪಕ್ಷಗಳು ಜನ ಸೇವೆ, ತಮ್ಮ ಸಾಧನೆ, ಕಾರ್ಯ ಯೋಜನೆಗಳಿಗಿಂತ ಹೆಚ್ಚಾಗಿ ಇತರೆ ಪಕ್ಷಗಳನ್ನು ಟೀಕಿಸುವುದರಲ್ಲಿ ಅತಿ ಹೆಚ್ಚು ಕಾಲ ಕಳೆಯುತ್ತಿವೆ. ಅಧಿಕಾರದಲ್ಲಿರುವ ಆಡಳಿತ ಪಕ್ಷ, ಸರಕಾರ ತನ್ನ ಹೊಣೆ ನಿಭಾಯಿಸುವಲ್ಲಿ ವಿಫಲವಾಗಿರುವಾಗ ವಿರೋಧ ಪಕ್ಷಗಳು ಅಥವಾ ವ್ಯಕ್ತಿಗಳೂ ಟೀಕಿಸುವುದು ಮತ್ತು ಹೋರಾಡುವುದುಅವರ ಅಗತ್ಯ ಹಕ್ಕಾಗಿದೆ. ಪ್ರಸಕ್ತವಾಗಿ ಆಡಳಿತ ಪಕ್ಷ, ಸರಕಾರ ಜನರ ನೆರವಿಗೆ ಧಾವಿಸುತ್ತಿಲ್ಲ. ಬದಲಾಗಿ ಸಂಕಷ್ಟಗಳ ಹೊರೆ ಹೊರಿಸುತ್ತಿದೆ. ಜನ ತೀವ್ರ ಅತೃಪ್ತಗೊಂಡಿದ್ದಾರೆ. ಅವರಲ್ಲಿ ಅತೃಪ್ತಿ, ಕೋಪ ಕುದಿಯುತ್ತಿದೆ. ಇದನ್ನರಿತು ಆಡಳಿತ ರೂಢ ಬಿಜೆಪಿ ಜನರ ನಡುವೆ ಎಲ್ಲ ಪಕ್ಷಗಳಿಗಿಂತಲೂ ಇನ್ನಿಲ್ಲದ ಕಸರತ್ತಿಗೆ ಇಳಿದಿದೆ. ಅದು ತನ್ನ ಆರ್ಥಿಕ, ಸಾಮಾಜಿಕ, ರಾಜಕೀಯ ನೀತಿಗಳನ್ನು ಬದಲಾಯಿಸಿಕೊಳ್ಳಲು ಸುತಾರಾಂ ಸಿದ್ಧವಿಲ್ಲ. ಬದಲು ಜನರನ್ನು ಯಾಮಾರಿಸಲು ಹಲವು ವಿಭಜಕ ಅಸ್ತ್ರಗಳನ್ನು ಕಾರ್ಯಯೋಜನೆಯಾಗಿ ಸಿದ್ಧಗೊಳಿಸಿಕೊಂಡಿದೆ. ಈ ಅತೃಪ್ತಿ ಒಂದೆಡೆ ಕೂಡದಂತೆ ವಿಭಜಿಸಲು ಹಲವಾರು ತಂತ್ರಗಳನ್ನು ನಡೆಸಿದೆ. ಜಾತಿಗಳ, ಒಳ ಜಾತಿಗಳ ಕ್ರೋಡೀಕರಣಕ್ಕೆ ಅವಕಾಶ ಮಾಡಿಕೊಡುತ್ತಲೇ ಅವು ಒಂದಾಗದಂತೆ ನೋಡಿಕೊಳ್ಳುವುದು, ವಿಭಜಿಸಿ ಒಂದನ್ನು ಇನ್ನೊಂದರ ವಿರುದ್ಧ ಎತ್ತಿಕಟ್ಟುವುದು, ಇಲ್ಲವಾದರೆ ಅದರ ಶಕ್ತಿಯನ್ನು ಹರಿದು ಹಂಚಿಹೋಗುವಂತೆ ಮಾಡುವುದು ಅದರ ಕಾರ್ಯತಂತ್ರದಂತೆ ಕಾಣುತ್ತಿದೆ. ಅಂತಹ ಪ್ರಯತ್ನಕ್ಕೆ ಆರ್.ಎಸ್.ಎಸ್.ನ ಅತ್ಯುನ್ನತ ನಾಯಕ ಮೋಹನ್ ಭಾಗವತರೇ ಇಳಿದಿದ್ದಾರೆ. ಅಲ್ಪಸಂಖ್ಯಾತ ಮೂಲಭೂತವಾದಿ ಶಕ್ತಿಗಳನ್ನು ಬಳಸುವುದತ್ತಲೂ ಬಿಜೆಪಿಯ ಕಾರ್ಯತಂತ್ರವಿದೆ. ಮತ್ತೊಂದೆಡೆ, ವಿರೋಧಿ ಶಕ್ತಿಗಳನ್ನು ಬಗ್ಗು ಬಡಿಯಲು ರಾಜಕೀಯ ಬುಡಮೇಲುತನಕ್ಕೆ ಕೇಂದ್ರ ಸರಕಾರದ ಏಜೆನ್ಸಿಗಳ ಮೂಲಕ ಅದರ ನಾಯಕರು ಇಳಿದಿದ್ದಾರೆ.

ದಾವಣಗೆರೆಯಲ್ಲಿ ಕಾಂಗ್ರೆಸ್ಸಿನ ಬೃಹತ್ ಸಮಾವೇಶದಿಂದ ಬಿಜೆಪಿ ಈಗ ತಾನು ಒಂದು ಅಂತಹ ಜನ ಪ್ರದರ್ಶನ ಮಾಡಲು ಯೋಜನೆ ಹಾಕುತ್ತಿದೆ. ಅಂದರೆ ತಾನು ಯಾವುದೇ ಪಕ್ಷಕ್ಕಿಂತ ಯಾವ ರೀತಿಯಲ್ಲಿಯೂ ಹಿಂದೆ ಬೀಳುವುದಿಲ್ಲ ಎನ್ನುವುದನ್ನು ತೋರಿಸುತ್ತಿದೆ. ಯಡಿಯೂರಪ್ಪ ಅವರು ನಿವೃತ್ತಿ ಘೋಷಣೆ ಮಾಡಿರುವುದು ಮತ್ತು ಹಾಗೆ ಮಾಡಿಸಿದ್ದು ಮುಂದಿನ ಚುನಾವಣೆಯಲ್ಲಿ ಯಾರೂ ಭಿನ್ನ ದನಿ ಎತ್ತಬಾರದು. ಸಂಘ ಪರಿವಾರಕ್ಕೆ ದುರ್ಬಲ ನಾಯಕನ ಆಯ್ಕೆಯ ಹಾದಿ ಸುಗಮವಾಗಿ ಇರಬೇಕೆನ್ನುವ ಕ್ರಮವೇ ಆಗಿದೆ. ರಾಜ್ಯಗಳಲ್ಲಿನ ವರ್ಚಸ್ವಿ ನಾಯಕತ್ವ ಉಳ್ಳವರನ್ನು, ಜನ ಸಮೂಹ ಆಕರ್ಷಿಸುವ ಸ್ವಶಕ್ತಿ ಉಳ್ಳವವರನ್ನು ಮೂಲೆಗುಂಪು ಮಾಡಿ ಹೈಕಮಾಂಡ್ ಮೇಲುಗೈ ಸಾಧಿಸಲು ಸಂವಿಧಾನಿತರ ಸಂಸ್ಥೆಗೆ ಪೂರ್ಣಾವಕಾಶವು ಇದರಿಂದಾಗಿ ದೊರೆಯಲಿದೆ. ದಿನ ದಿನವೂ ಜನಪ್ರಿಯತೆ ಕುಗ್ಗುತ್ತಿರುವಾಗ ಮತ್ತದು ವಿಸ್ತರಿಸುವ ಮೊದಲೇ ಡಿಸೆಂಬರ್ ಹೊತ್ತಿಗೆ ಚುನಾವಣೆ ನಡೆಸಬೇಕು ಎನ್ನುವ ಯೋಚನೆಯೂ ಸಹ ಆಳುವ ಬಿಜೆಪಿ ವಲಯದಲ್ಲಿದೆ ಎನ್ನುವ ವದಂತಿಗಳೂ ಇವೆ. ಅದಕ್ಕಾಗಿ ಮಧ್ಯಂತರ ಬಜೆಟ್ ಮಂಡಿಸಿ ಜನಪ್ರಿಯಗೊಳ್ಳುವ ಯೋಜನೆಯೂ ಅದರ ಭಾಗ ಎನ್ನಲಾಗುತ್ತಿದೆ. ಈ ಅತೃಪ್ತಿ ಮತ್ತಷ್ಟು ಕ್ರೋಢೀಕರಣಗೊಳ್ಳಬಾರದು ಎನ್ನುವುದು ಅದರ ಲೆಕ್ಕಚಾರ. ಹೀಗಾಗಿಯೇ ಅದು ಸೋಶಿಯಲ್ ಇಂಜಿನಿಯರಿಂಗ್ ಹೆಸರಿನಲ್ಲಿ ಜಾತಿ ರಾಜಕಾರಣಕ್ಕೆ ತೀವ್ರವಾಗಿ ಇಳಿದಿದೆ.

ಅವಧಿಪೂರ್ವ ಚುನಾವಣೆಗಳ. ಸಂಭವದ ಸುಳಿವರಿತ ಜೆ.ಡಿ.ಎಸ್ ಮತ್ತು ಕಾಂಗ್ರೆಸ್ ನಂತಹ ವಿರೋಧ ಪಕ್ಷಗಳು ಸಹ ತಮ್ಮ ರಾಜಕೀಯ ನೆಲೆಗಳನ್ನು ಕ್ರೋಢೀಕರಿಸಲು ಮುಂದಾಗಿವೆ. ಹಾಗೆ ನೋಡಿದರೆ ಅದರ ಕಥೆ ಮುಗಿಯಿತು ಎಂಬ ಮಾತುಗಳು ಕೇಳುವಾಗಲೇ ರಾಜ್ಯ ಮಟ್ಟದ ಒಂದು ಬೃಹತ್ ರ್ಯಾಲಿ ನಡೆಸಿ ತನ್ನ ಅಸ್ತಿತ್ವ ಗಟ್ಟಿ ಎನ್ನುವುದನ್ನು ಜೆ.ಡಿ. ಎಸ್. ತೋರಿಸಿತು. ಸಿದ್ದರಾಮಯ್ಯನವರ ಹುಟ್ಟು ಹಬ್ಬದ ಸಮಾರಂಭ ವ್ಯಕ್ತಿಗತ ನೆಲೆಯಲ್ಲಿ ನಡೆದಿರುವಾಗಲೂ ಕಾಂಗ್ರೆಸ್ಸಿಗೆ ಒಂದಷ್ಟು ಚೈತನ್ಯವನ್ನು ತಂದುಕೊಟ್ಟಿದೆ.

ಪಂಜಾಬ್ ಚುನಾವಣಾ ಫಲಿತಾಂಶದ ಬಳಿಕ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ಆಮ್ ಆದ್ಮಿ ಪಕ್ಷ ಒಂದೆರಡು ಸ್ಥಾನಗಳನ್ನಾದರೂ ಪಡೆಯಬೇಕೆನ್ನುವ ಧಾವಂತದಲ್ಲಿದೆ. ಮತ್ತು ಹಲವು ಜನಪ್ರಿಯ ವ್ಯಕ್ತಿಗಳನ್ನು ಸೇರಿಸಿಕೊಳ್ಳುತ್ತಿದೆ. ಅದು ವಹಿಸುವ ಪಾತ್ರದ ಅಂದಾಜು ಸಿಗಬೇಕಷ್ಟೇ.

ಚುನಾವಣೆಯ ಸಿದ್ಧತೆ ಎನ್ನುವುದು ಕೂಡ ಬಹುಕೋಟಿ ರೂಪಾಯಿಗಳ ಹಣದ ಖರ್ಚಿನ ವ್ಯವಹಾರ ಎನ್ನುವುದು ಅಷ್ಟೇ ನಿಚ್ಚಳ. ಅದಕ್ಕಾಗಿ ಅನೇಕ ಮೂಲಗಳಿಂದಲೂ ಹೂಡಿಕೆ ಆಗುತ್ತದೆ.

ಈ ಪಕ್ಷಗಳು ನಡೆಸಿರುವ ಚುನಾವಣಾ ಸಿದ್ಧತೆ ಮತ್ತು ಅದರ ಕಾರ್ಯತಂತ್ರಗಳು ನಿಜಕ್ಕೂ ಕರ್ನಾಟಕದ ರಾಜಕೀಯದಲ್ಲಿ ಮೂಲಭೂತ ಬದಲಾವಣೆಯನ್ನು ತರಬಲ್ಲವೇ ಎನ್ನುವ ಪ್ರಶ್ನೆಯನ್ನು ಜೀವಂತವಾಗಿರಿಸಿವೆ.

ಇಂತಹ ಸ್ಪರ್ಧಾತ್ಮಕ ಸ್ಥಿತಿಯಲ್ಲಿಯೂ ಏಳು ಎಡಪಕ್ಷಗಳು ಒಗ್ಗೂಡಿ ಮಾಡಿದ ಪ್ರಯತ್ನಗಳು ಸ್ವಾಗತಾರ್ಹ. ಆ ಪಕ್ಷಗಳ ಮುತುವರ್ಜಿ ಜನದನಿಗೆ ಇಂಬು ನೀಡುತ್ತಾ ಆಂದೋಲನದ ಸ್ವರೂಪ ಪಡೆಯುತ್ತಿದೆ. ಜನ ಚಳುವಳಿಗಳು ಮಾತ್ರವೇ ಬಲಪಂಥೀಯ ಪಕ್ಷಗಳು ಸೃಷ್ಟಿಸುವ ಭ್ರಮೆಗಳ ಪೊರೆ ಹರಿಯಲು ಹಾಗೂ ನಿಜ ಪರ್ಯಾಯ ರೂಪಿಸಲು ಸಾಧ್ಯ. ಎಡ ಪಕ್ಷಗಳ ಈ ಪ್ರಯತ್ನಗಳು ಕತ್ತಲೆಯ ಪರದೆಯನ್ನು ಸೀಳುವಂತಾಗಲಿ.

ದಾವಣಗೆರೆ ಸಂಭ್ರಮ: ಕಾಂಗ್ರೆಸ್ ನಡೆ ಯಾವ ಕಡೆ?

ಈ ವಾರ

ಎಸ್.ವೈ. ಗುರುಶಾಂತ್

ಸಿದ್ಧರಾಮಯ್ಯನವರ 75 ನೆಯ ಹುಟ್ಟು ಹಬ್ಬದ ಆಚರಣೆ ಯಶಸ್ವಿಯಾಗಿದೆ. ದಾವಣಗೆರೆಗೆ ಅಭಿಮಾನಿ ಜನ ನಿರೀಕ್ಷೆಗೂ ಮೀರಿ ಹರಿದು ಬಂದು ಸಿದ್ದರಾಮಯ್ಯನವರಿಗೂ, ಕಾಂಗ್ರೆಸ್ ನಾಯಕರಿಗೂ ಆತ್ಮವಿಶ್ವಾಸ ತುಂಬಿದ್ದಾರೆ. ಹುಟ್ಟುಹಬ್ಬವನ್ನು ವಿಶಾಲವಾದ ನೆಲೆಯಲ್ಲಿ ಸಂಘಟಿಸಬೇಕು ಎನ್ನುವ ಸಂಘಟಕರ ಯೋಚನೆ ಒಳ್ಳೆಯದೇ. ಆದರೆ ಅಂತಿಮವಾಗಿ, ಅದು ಕೇವಲ ಕಾಂಗ್ರೆಸ್ಸಿನ ಸಭೆಯಾಗಿ ಅದರಲ್ಲೂ ಚುನಾವಣೆಯ ಪ್ರಚಾರದ ಸಭೆಯಾಗಿ ಮಾರ್ಪಾಡಾಗಿದ್ದು ಅದರ ಮಿತಿ. ಏಕೆಂದರೆ ಕನಿಷ್ಠ ಸಿದ್ದರಾಮಯ್ಯನವರು ಪ್ರತಿಪಾದಿಸುತ್ತಾ ಬಂದಿರುವ ಕೆಲವು ಮೌಲ್ಯಗಳು ಅದಕ್ಕೆ ಒದಗಿರುವ ಆಪತ್ತುಗಳ ಬಗ್ಗೆ ಚರ್ಚೆ ಮತ್ತು ಫೋಕಸ್ ಸಿಕ್ಕಿದ್ದರೆ ಅದಕ್ಕೊಂದು ಅರ್ಥವಿರುತ್ತಿತ್ತು. ಆದರೆ ಮೊದಲು ಸಂಘಟಕರಿಗೆ ಆ ಉದ್ದೇಶ ಇರಬೇಕಿತ್ತಲ್ಲವೇ.

ಇಲ್ಲಿ ನೆರೆದಿದ್ದ ಅಪಾರ ಜನಸ್ತೋಮದ ಎದುರಿನಲ್ಲಿ ಕಾಂಗ್ರೆಸ್ ನಾಯಕರು ತಮ್ಮಗಳ ಬಗ್ಗೆ, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಡುವಿನ ಭಿನ್ನಾಭಿಪ್ರಾಯಗಳ ಕುರಿತ ಮಾತುಗಳ ಬಗ್ಗೆ ಸ್ಪಷ್ಟನೆಯನ್ನು ನೀಡುವ ಮಾತುಗಳು ಮತ್ತು ಪ್ರದರ್ಶನವೇನೋ ನಡೆಯಿತು. ಸಿದ್ದರಾಮಯ್ಯ ಮತ್ತು ಡಿಕೆಶಿ ಇವರು ಪರಸ್ಪರ ಆಲಂಗಿಸಿಕೊಂಡರು, ಕೈ, ಕೈ ಹಿಡಿದು ಒಗ್ಗಟ್ಟಿನ ಸಂದೇಶ ಸಾರಿದರು. ಮಾತುಗಳ ಮೂಲಕವೂ ಸಹ 'ತಾವು ಜೊತೆಗಿದ್ದೇವೆ, ಅಂತಹ ಯಾವ ಭಿನ್ನಾಭಿಪ್ರಾಯಗಳು ಇಲ್ಲ' ಎನ್ನುವ ದನಿ ಹೊರಡಿಸಲು ಪ್ರಯತ್ನಿಸಿದರು. ಸ್ವತಃ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಹ ಇಲ್ಲಿನ ಸ್ಪರ್ದಾತ್ಮಕ ವಿದ್ಯಾಮಾನಗಳನ್ನು ಗಮನದಲ್ಲಿಟ್ಟೇ ಸಾಮೂಹಿಕ ನಾಯಕತ್ವದ ಪರಿಶ್ರಮದಿಂದ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು ಎನ್ನುವ ಒಗ್ಗಟ್ಟಿನ ಒಂದು ಸಂದೇಶವನ್ನು ಕೂಡ ನೀಡಿದರು. ನಾಯಕರಲ್ಲಿ ಎಷ್ಟೆಲ್ಲಾ ಭಿನ್ನಾಭಿಪ್ರಾಯಗಳು, ಬಿನ್ನ ಸ್ವರಗಳು ಇದ್ದರೂ ಇಲ್ಲಿ ದೊರೆತ ಜನಸ್ಪಂದನ ಕಾಂಗ್ರೆಸ್ಸಿನ ನಾಯಕರನ್ನು ಹುರಿ ದುಂಬಿಸಿರುವುದಂತೂ ನಿಜ.

ಈ ಸಮಾರಂಭದ ಯಶಸ್ಸು ಕೂಡ ಕಾಂಗ್ರೆಸ್ಸಿನೊಳಗೆ ಹೊಸ ಸವಾಲಿನ ಸನ್ನಿವೇಶಗಳನ್ನು ಸಹ ಸೃಷ್ಟಿಸಿದೆ. ಹೊರ ನೋಟದಲ್ಲಿ ಹುಮ್ಮಸ್ಸು, ಸ್ಫೂರ್ತಿ, ಒಗ್ಗಟ್ಟು ಕಂಡರೂ ಕಾಂಗ್ರೆಸ್ಸಿನ ಅಂತರಂಗದಲ್ಲಿನ ಭಿನ್ನಾಭಿಪ್ರಾಯ ಮತ್ತು ಮುಖ್ಯಮಂತ್ರಿ ಸ್ಥಾನಕ್ಕೆ ನಡೆಯುವ ಸ್ಪರ್ಧೆಯ ಆಕಾಂಕ್ಷೆ, ತಾಮಸಗಳು ಕಡಿಮೆಯೇನೂ ಆಗಿಲ್ಲ. ಬದಲಾಗಿ ಇದರ ಯಶಸ್ಸು ಸಿದ್ದರಾಮಯ್ಯನವರನ್ನು ಹೊರತುಪಡಿಸಿದ ಉಳಿದ ಆಕಾಂಕ್ಷಿ ನಾಯಕರಲ್ಲಿ ಅತೃಪ್ತಿ ಮತ್ತು ಅಂತರವನ್ನು ಹೆಚ್ಚಿಸಿದ ಸಾಧ್ಯತೆಗಳೇ ಅಧಿಕ. ಸಿದ್ದರಾಮಯ್ಯ ಮತ್ತು ಕೆ.ಪಿ.ಸಿ.ಸಿ. ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಸಹ ಸಿದ್ಧರಾಮಯ್ಯನವರಂತೆ ಹೈಕಮಾಂಡ್ ನ ಮೇಲೆ ಪ್ರಭಾವ ಬೀರಲು ಆ ಸಭೆಯಲ್ಲೇ ವಿಶೇಷ ಪ್ರಯತ್ನಗಳನ್ನು ನಡೆಸಿದರು ಕೂಡ. ಸಿದ್ದರಾಮಯ್ಯನವರಿಗೆ ಇಲ್ಲಿ ವ್ಯಕ್ತವಾದ ಅಪಾರ ಬೆಂಬಲ, ಜನ ಅಭಿಮಾನ ಹೈಕಮಾಂಡ್ ನ ಮೇಲೆ ಬಲವಾದ ಪ್ರಭಾವವನ್ನು ಉಂಟು ಮಾಡಿದೆ ನಿಜ. ಕಾಂಗ್ರೆಸ್ ನಲ್ಲಿ ಸಿದ್ದುವಿನ ಶಕ್ತಿಯನ್ನು ಹೈಕಮಾಂಡ್ ಗಣಿಸಿಯೇ ಇದೆ. ಈಗಲೂ ಸಹ ಅಷ್ಟು ಸುಲಭವಾಗಿ ತಳ್ಳಿ ಹಾಕುವಂತಿಲ್ಲ ಎನ್ನುವುದು ಪ್ರದರ್ಶನವೂ ಆಗಿದೆ. ಹೀಗೆ ಉಂಟಾದ ಪ್ರಭಾವ ಸಿ.ಎಂ. ಆಕಾಂಕ್ಷಿ ನಾಯಕರಲ್ಲಿ ಖಂಡಿತಕ್ಕೂ ಆತಂಕವನ್ನು ಉಂಟು ಮಾಡದೇ ಇಲ್ಲ. 'ಪಕ್ಷ ಅಧಿಕಾರಕ್ಕೆ ಬಂದ ನಂತರದಲ್ಲಿ ಮುಖ್ಯಮಂತ್ರಿ ಆಯ್ಕೆಯ ಪ್ರಶ್ನೆ' ಎಂದು ಹೇಳಿದ್ದ ಡಿ.ಕೆ. ಶಿವಕುಮಾರ್ ಅವರೇ ದಾವಣಗೆರೆ ಸಮಾರಂಭದ ನಾಲ್ಕು ದಿನಗಳಲ್ಲಿಯೇ 'ಸೋನಿಯಾ ಗಾಂಧಿಯವರ ಬೆಂಬಲವಿದ್ದರೆ ಸಿಎಂ ಆಗಬಹುದು' ಎನ್ನುವ ಮಾತುಗಳನ್ನೂ ಆಡಿದ್ದಾರೆ. ಕಾಂಗ್ರೆಸ್ಸಿನ ಹೈಕಮಾಂಡ್ ಡಿ.ಕೆ.ಶಿ. ಅವರನ್ನು ಸಹ ಸುಲಭವಾಗಿ ನಿರ್ಲಕ್ಷಿಸಲು ಸಾಧ್ಯವೂ ಇಲ್ಲ. ಹಾಗೆಯೇ ಈ ಹಿಂದಿನಿಂದಲೂ ನಿರಂತರ ಕಾಂಗ್ರೆಸ್ಸಿನೊಂದಿಗೆ ಇದ್ದು ಪಕ್ಷವನ್ನು ಕಟ್ಟಿ ಬೆಳೆಸಿದ ಬೆಂಬಲವಾಗಿ ನಿಂತಿರುವ ದಲಿತ ಸಮುದಾಯಗಳ ನಾಯಕರನ್ನೂ ತಳ್ಳಿ ಹಾಕುವಂತಿಲ್ಲ. ಬಿಜೆಪಿಯನ್ನು ಸೋಲಿಸಿ ಕಾಂಗ್ರೆಸ್ ಸದೃಢವಾಗಿ ಐಕ್ಯತೆಯಿಂದ ಜನತೆಯ ಪರವಾಗಿ ಕೆಲಸ ಮಾಡಬೇಕು ಎನ್ನುವ ಸಂದೇಶವನ್ನು ರಾಹುಲ್ ಗಾಂಧಿ ಒತ್ತಿ ಹೇಳಿದರಾದರೂ ಸಮಾರಂಭದ ಅಂತರಂಗದಲ್ಲೂ ಮತ್ತು ಬಹಿರಂಗದಲ್ಲಿ ಮುಖ್ಯಮಂತ್ರಿ ಸ್ಥಾನದ ವಿಷಯವೇ ಕೇಂದ್ರ ವಸ್ತುವಾಗಿ ಪರಿವರ್ತನೆ ಆದದ್ದು ಕಾಂಗ್ರೆಸ್ಸಿಗೆ ಒಂದು ನಕಾರಾತ್ಮಕ ಅಂಶ. ಕಾಂಗ್ರೆಸ್ಸಿನ ರಾಜ್ಯ ನಾಯಕರು ಘೋಷಿಸಿಕೊಂಡಂತೆ ಬಿಜೆಪಿಯನ್ನು ಸೋಲಿಸುವುದೇ ತಮ್ಮ ಮುಂದಿನ ಬಹು ಮುಖ್ಯ ಗುರು ಎಂದು ಪರಿಗಣಿಸಿದ್ದರೆ ಈ ಗುಂಪುಗಾರಿಕೆ, ಬಣ ರಾಜಕಾರಣ ಬಿಡಬೇಕಾಗುತ್ತದೆ. ಇಲ್ಲವಾದಲ್ಲಿ ಹಿಂದಿನ ಚುನಾವಣೆಗಳಲ್ಲಿ ಸಂಭವಿಸಿದಂತೆ ಕಾಂಗ್ರೆಸ್ಸಿನ ನಾಯಕರೇ ಪರಸ್ಪರ ಕನಿಷ್ಠ ಏನಿಲ್ಲವೆಂದರೂ 20 ಕ್ಕೂ ಹೆಚ್ಚಿನ ಸ್ಥಾನಗಳಲ್ಲಿ ತಮ್ಮನ್ನು ಸೋಲಿಸಿಕೊಂಡು ಬಿಜೆಪಿಗೆ ಸುಗಮ ಹಾದಿ ಕಲ್ಪಿಸಬೇಕಾಗುತ್ತದೆ. ಆದ್ದರಿಂದ ಬಿಜೆಪಿ ಆರ್.ಎಸ್.ಎಸ್. ನ ತಂತ್ರಗಾರಿಕೆ, ಆಕ್ರಮಣಕಾರಿ ನಡೆಗಳ ಎದುರಿನಲ್ಲಿ ಕಾಂಗ್ರೆಸ್ ಮಾಡಬೇಕಾದ ರಾಜಕೀಯ ಮತ್ತು ಸಂಘಟನಾ ಕೆಲಸಗಳ ನೆನಪು ಮಾಡಿಕೊಳ್ಳುವುದು ಒಳ್ಳೆಯದು. ಆದರೆ ಕಾಂಗ್ರೆಸ್ ಅಂತಹ ತಳ ಮಟ್ಟದ ಕಾರ್ಯಗಳಿಂದ ತನ್ನನ್ನು ದೂರಗೊಳಿಸಿಕೊಂಡು, ಬೀಸುವ ಗಾಳಿಯಲ್ಲಿ ತೇಲುವ ಕ್ರಮದಲ್ಲಿ ಎಂದೋ ಇದ್ದಾಗಿದೆ.

ಕಾಂಗ್ರೆಸ್ಸಿನೊಳಗಿನ ನಾಯಕರಲ್ಲಿ ಅಂತಹ ಒಂದು ರಾಜಕೀಯ ವಿವೇಕ ಮೂಡದಿದ್ದರೆ ಅಧಿಕಾರ ಅರಸಿ ಕೆಲ ನಾಯಕರು ಹೊಸ ಮೈತ್ರಿಗಳನ್ನು ಅರಿಸಿಕೊಂಡು ಹೋಗುವ ಸಾಧ್ಯತೆಗಳು ಇಲ್ಲದಿಲ್ಲ. ಏಕೆಂದರೆ ಕಾಂಗ್ರೆಸ್ಸಿನ



ಹಲವು ನಾಯಕರು ಬಿಜೆಪಿಯ ಕೆಲವು ನಾಯಕರೊಂದಿಗೆ ಒಂದಿಲ್ಲೊಂದು ಬಗೆಯ ಸಂಬಂಧಗಳನ್ನು ಇರಿಸಿಕೊಂಡಿರುವುದು ಗುಟ್ಟಿನ ವಿಷಯವೇನಲ್ಲ. ಇಂತಹವುಗಳನ್ನು ಮೀರಿ ಕಾಂಗ್ರೆಸ್ ಮುಂದಡಿ ಇಡುವುದೇ? ●

ಕುಂದಾಪುರದಲ್ಲಿ ಜಿ.ರಾಜಶೇಖರರಿಗೆ ನುಡಿನಮನ

ವರದಿ: ವಾಸುದೇವ ಉಚ್ಚಿಲ್

ಖ್ಯಾತ ಸಾಹಿತ್ಯ ವಿಮರ್ಶಕ, ಮಾನವ ಹಕ್ಕು ಹೋರಾಟಗಾರ, ಕೋಮುವಾದದ ವಿರುದ್ಧ ದಣಿವರಿಯದ ಪ್ರತಿಭಟನಕಾರರಾಗಿದ್ದ ಜಿ.ರಾಜಶೇಖರ ಜುಲೈ 20 ರಂದು ಉಡುಪಿಯಲ್ಲಿ ನಿಧನರಾಗಿದ್ದಾರೆ. ಜುಲೈ 31 ರಂದು ಸಮುದಾಯ ಕುಂದಾಪುರ ಮತ್ತು ಕುಂದಾಪುರ ತಾಲೂಕು ದಸಂಸ ಜಂಟಿಯಾಗಿ ಒಡನಾಡಿ ಜಿ.ರಾಜಶೇಖರರಿಗೆ ನುಡಿನಮನ ಏರ್ಪಡಿಸಿತ್ತು.

ಸಾಹಿತಿ, ರಂಗ ನಿರ್ದೇಶಕರಾದ ಪ್ರೊ.ವಸಂತ ಬನ್ನಾಡಿ, ಸಮುದಾಯ ಕರ್ನಾಟಕದ ರಾಜ್ಯ ಉಪಾಧ್ಯಕ್ಷ ವಾಸುದೇವ ಉಚ್ಚಿಲ, ಪತ್ರಕರ್ತ ಹಾಗೂ ಮಾನವ ಹಕ್ಕು ಹೋರಾಟಗಾರರಾದ ಶಶಿಧರ ಹೆಮ್ಮಾಡಿ ಅವರು ಜಿ.ರಾಜಶೇಖರರ ವ್ಯಕ್ತಿತ್ವ, ಸಾಧನೆ ಹಾಗೂ ಬಿಟ್ಟು ಹೋದ ಸಾಮಾಜಿಕ ಚಳುವಳಿ ಬಗ್ಗೆ ಮಾತನಾಡಿ ಗೌರವ ಸಲ್ಲಿಸಿದರು. ದಸಂಸ ಮುಖಂಡರು ಕೂಡಾ ದಲಿತ ಹಕ್ಕುಗಳಿಗಾಗಿ ಜಿ.ರಾಜಶೇಖರ ಮಾಡಿದ ಹೋರಾಟವನ್ನು ನೆನೆದರು.

ಆರಂಭದಲ್ಲಿ ಕುಂದಾಪುರ ಸಮುದಾಯದ ಹಾಡುಗಾರರ ತಂಡವು ರಂಗನಿರ್ದೇಶಕ ವಾಸುದೇವ ಗಂಗೇರ ಅವರ ನೇತೃತ್ವದಲ್ಲಿ 5 ಹಾಡುಗಳನ್ನು ಹಾಗೂ ಬಿರ್ತಿಯ ಕಲಾತಂಡ ಜಿ.ರಾಜಶೇಖರರ ಸಂಸ್ಮರಣೆಯೊಂದಿಗೆ ಹಾಡಿದರು.ಕಾರ್ಯಕ್ರಮದ ಕೊನೆಯಲ್ಲಿ ಹಿಂದಿ ನಾಟಕವೊಂದರ ಕನ್ನಡ ರೂಪಾಂತರದ ದೃಶ್ಯವನ್ನು ವಾಚಕಾಭಿನಯ ಮೂಲಕ ಪ್ರದರ್ಶಿಸಲಾಯಿತು.

ಸಿಐಟಿಯು ಉಳ್ಳಾಲ ವಲಯ ಸಮ್ಮೇಳನ:

ಜುಲೈ 31 ರಂದು ತೊಕ್ಕೊಟ್ಟಿನಲ್ಲಿ ಏರ್ಪಡಿಸಲಾಗಿದ್ದ ಉಳ್ಳಾಲ ವಲಯ ಸಿಐಟಿಯು ಸಮ್ಮೇಳನವನ್ನು ರಾಜ್ಯ ಸಮಿತಿ ಉಪಾಧ್ಯಕ್ಷರಾದ ವಸಂತ ಆಚಾರಿ ಉದ್ಘಾಟಿಸಿ ಮಾತನಾಡಿದರು.

ಸಿಐಟಿಯು ವಲಯ ಕಾರ್ಯದರ್ಶಿ ಯು.ಜಯಂತ ನಾಯ್ಕ್ 3 ವರ್ಷಗಳ ವರದಿ ಮಂಡಿಸಿದರು. ಅಧ್ಯಕ್ಷೆ ಪದ್ಮಾವತಿ ಶೆಟ್ಟಿಯವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಪ್ರಾಂತ ರೈತ ಸಂಘದ ದ.ಕ. ಜಿಲ್ಲಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ಸಿಐಟಿಯು ದ.ಕ. ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು. ಬೀಡಿ ಕಾರ್ಮಿಕ ಸಂಘಟನೆ, ಕಟ್ಟಡ ಕಾರ್ಮಿಕ ಸಂಘಟನೆ, ಬಿಸಿಯೂಟ ಕಾರ್ಮಿಕ ಸಂಘಟನೆಯ ಪ್ರತಿನಿಧಿಗಳು ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ಸಿಐಟಿಯು ಹಿರಿಯ ಜಿಲ್ಲಾ ಮುಖಂಡ ಯು.ಬಿ.ಲೋಕಯ್ಯ ಸಮಾರೋಪ ಭಾಷಣ ಮಾಡಿದರು.

ಸಮ್ಮೇಳನವು ಮುಂದಿನ ಅವಧಿಗೆ ನೂತನ ಸಿಐಟಿಯು ವಲಯ ಸಮಿತಿಯನ್ನು ಆಯ್ಕೆ ಮಾಡಿತು. ಅಧ್ಯಕ್ಷರಾಗಿ ಸುಂದರ ಕುಂಪಲ, ಕಾರ್ಯದರ್ಶಿಯಾಗಿ ರೋಹಿದಾಸ್ ಭಟ್ನಗರ ಮತ್ತು ಖಜಾಂಚಿಯಾಗಿ ವಿಲಾಸಿನಿ ಯವರನ್ನು ಆಯ್ಕೆ ಮಾಡಲಾಯಿತು.

ಸಿಐಟಿಯು ಕುಂದಾಪುರ ತಾಲೂಕು ಸಮ್ಮೇಳನ:

ಜುಲೈ 31 ರಂದು ಕುಂದಾಪುರದಲ್ಲೂ ಸಿಐಟಿಯು ತಾಲೂಕು ಸಮ್ಮೇಳನ ನಡೆದಿದ್ದು, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಕೆ.ಶಂಕರ್ ಮಾತನಾಡಿದರು. ಹಿರಿಯ ಕಾರ್ಮಿಕ ಮುಖಂಡ ಮಹಾಬಲ ವಡೇರಹೋಬಳಿ ಧ್ವಜಾರೋಹಣ ನಡೆಸಿದರು. ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಮುಖಂಡ ವೆಂಕಟೇಶ ಕೋಣಿ, ಅಕ್ಷರದಾಸೋಹ ನೌಕರ ಸಂಘದ ಜಯಶ್ರೀ, ಅಂಗನವಾಡಿ ನೌಕರರ ಸಂಘದ ಆಶಲತಾ ಶೆಟ್ಟಿ, ಆಟೋರಿಕ್ಷಾ ಚಾಲಕರ ಸಂಘದ ರಮೇಶ್ ವಿ.ಉಪಸ್ಥಿತರಿದ್ದರು. ಸಮ್ಮೇಳನದ ಅಧ್ಯಕ್ಷತೆಯನ್ನು ಬಲ್ಕೀಸ್ ಬಾನು ವಹಿಸಿದ್ದರು.

ಸಿಐಟಿಯು ಸಂಚಾಲನ ಸಮಿತಿ ಸಂಚಾಲಕ ಎಚ್.ನರಸಿಂಹ ಹಿಂದಿನ 3 ವರ್ಷಗಳ ವರದಿಯನ್ನು ಮಂಡಿಸಿದರು. ಸಮ್ಮೇಳನವು ನೂತನ ಸಿಐಟಿಯು ಕುಂದಾಪುರ ತಾಲೂಕು ಸಮಿತಿಯನ್ನು ಆಯ್ಕೆ ಮಾಡಿರುತ್ತದೆ. 15 ಮಂದಿಯುಳ್ಳ ಸಮಿತಿಗೆ ಚಂದ್ರಶೇಖರ ವಿ. ಅವರು ಸಂಚಾಲಕರಾಗಿ ಆಯ್ಕೆಯಾಗಿರುತ್ತಾರೆ.



ಮಂಡ್ಯ: ನಡೆಯಿತೊಂದು ಹೋರಾಟ ರಾರಾಜಿಸಿದ ಕೆಂಬಾವುಟ

ಮಂಡ್ಯ ಜಿಲ್ಲೆಯಲ್ಲಿ ಒಂದು ಲಕ್ಷ ಸದಸ್ಯತ್ವ ಮಾಡಿದ ಹುಮ್ಮಸ್ಸು, ಘಟಕ, ವಲಯ, ತಾಲ್ಲೂಕು ಸಮ್ಮೇಳನಗಳನ್ನು ಅಷ್ಟೇ ಉಲ್ಲಾಸದಿಂದ ನೂರಾರು, ಸಾವಿರಾರು ಕೃಷಿ ಕೂಲಿಕಾರರನ್ನು ಸೇರಿಸಿ ನಡೆಸಿದ ಸಂಭ್ರಮದಲ್ಲಿ ಆಗಸ್ಟ್ 1 ರ ಹೋರಾಟ ಅಭೂತಪೂರ್ವ ಯಶಸ್ವಿ ಸಾಧಿಸಿತು. ಆಳುವ ಪ್ರಭುಗಳು ಕೂಲಿಕಾರರು ಅಳುವ ರೀತಿಯಲ್ಲಿ ಕಡೆಗಣಿಸುತ್ತಿದ್ದಾರೆ. ಬಗೆಹರಿಯದೆ ಉಳಿದಿರುವ ಮನೆ, ನಿವೇಶನ, ಸರ್ಕಾರಿ ಭೂಮಿ, ಬ್ಯಾಂಕ್ ಸಾಲ, ಭಾಗ್ಯ ಜ್ಯೋತಿ ತಾರತಮ್ಯ, ಕುಡಿಯುವ ನೀರಿಗೆ ತತ್ವಾರ, ಅದಲ್ಲದೆ ಸಂಘಟಿತರಾಗುವುದನ್ನು ಕಂಡು ಒಂದಲ್ಲೊಂದು ದಿನಪ್ರಂತಿ ಉದ್ಯೋಗಖಾತ್ರಿಯಲ್ಲಿ ಕಿರುಕುಳ, ಸಿಳ್ಳೇಕ್ಯಾತರ ಬಗೆಹರಿಯದ ಸಮಸ್ಯೆಗಳ ಬಗ್ಗೆ ಎಲ್ಲಾ ಮಟ್ಟದ ಸಮ್ಮೇಳನಗಳಲ್ಲಿ ಪ್ರತಿನಿಧಿಗಳು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಕ್ರೋಢೀಕರಿಸಿಕೊಂಡು ಹೋರಾಟ ಮಾಡಲು ತೀರ್ಮಾನಿಸಲಾಯಿತು.

ಇದೇ ಸಂದರ್ಭಕ್ಕೆ ರಾಷ್ಟ್ರ ಮಟ್ಟದಲ್ಲಿ ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ಜೊತೆ ಇನ್ನೂ ನಾಲ್ಕು ಕೃಷಿ ಕೂಲಿಕಾರರ ಸಂಘಟನೆಗಳು 22 ಬೇಡಿಕೆಗಳನ್ನು ಬಗೆಹರಿಸಲು 500 ಜಿಲ್ಲಾ ಕೇಂದ್ರಗಳಲ್ಲಿ ಸಂಘರ್ಷಮಯ ಹೋರಾಟ ಮಾಡಲು ತೀರ್ಮಾನಿಸಲಾಗಿತ್ತು. ಅದರಂತೆ ಮಂಡ್ಯ ಜಿಲ್ಲೆಯಲ್ಲಿ ಈ ಎರಡೂ ತೀರ್ಮಾನಗಳನ್ನು ಸರಿಯಾದ ರೀತಿಯಲ್ಲಿ ಸಂಘಟನಾತ್ಮಕವಾಗಿ, ಕಾರ್ಯಬದ್ಧವಾಗಿಸಲು ಆಗಸ್ಟ್ 1 ನ್ನು ಸಮರ್ಪಕಗೊಳಿಸಲಾಯಿತು.

ಪುಟ್ಟಮಾದು

ಅಂದು ಜಿಲ್ಲೆಯ 92 ಹಳ್ಳಿಗಳಿಂದ ಮತ್ತು ಪಟ್ಟಣದ 5 ಕೇಂದ್ರಗಳಿಂದ ಬಸ್ಸು, ಲಾರಿ, ಟಾಟಾ ಏಸ್, ಇತರ ವಾಹನಗಳನ್ನು ಏರಿ ಮಂಡ್ಯ ನಗರದ ಸಿಲ್ವರ್ ಜ್ಯುಬಿಲಿ ಪಾರ್ಕ್‌ಗೆ ಗುಂಪು ಗುಂಪಾಗಿ ಸಾವಿರದ ಐದುನೂರಕ್ಕೂ ಹೆಚ್ಚು ಕೂಲಿಕಾರರು ಬಂದು ಸೇರಿಬಿಟ್ಟರು. ಇರುವೆಯ ಸಾಲಿನಂತೆ ಬಾವುಟ ಹಿಡಿದು ನಡೆದ ಕೂಲಿಕಾರರು ಡಿಸಿ ಕಚೇರಿಯ ಹತ್ತಿರ ಹೋದಂತೆ ಸಿಟ್ಟಿನ ಕಟ್ಟೆ ಒಡೆಯಿತು. ಹಾಕಿದ ಬೇಲಿಯನ್ನು ಕಿತ್ತೆಸೆದರು, ಕೂಲಿಕಾರರ ಮೇಲೆ ದರ್ಪ ತೋರಿದ ಪೋಲೀಸರನ್ನು ಎಳೆದಾಡಿದರು. ಪರಿಣಾಮ ಕೆ.ಹನುಮೇಗೌಡ, ಬಿ.ಎಂ.ಶಿವಮಲ್ಲಯ್ಯ, ಟಿ.ಹೆಚ್. ಆನಂದ್ ನೂಕುನುಗ್ಗಲು ಮತ್ತು ಪೋಲೀಸ್ ಬೆತ್ತದ ಹೊಡೆತದಿಂದ ನೆಲಕ್ಕೆ ಬಿದ್ದರು. ಅದೆಲ್ಲಿತ್ತೋ ಮಹಿಳಾ ಕೂಲಿಕಾರರ ಸಿಟ್ಟು, ಬರ್‍ರೋ ಲೇ ಎಂದು ಮುನ್ನುಗ್ಗಿ ಮೇಲೆರಗಿದ ಮಹಿಳಾ ಸಂಗಾತಿಗಳನ್ನು ಕಂಡು ಬೆಚ್ಚಿದ ಖಾಕಿ ಪುರುಷರು ದಿಢೀರನೆ ನೂರಾರು ಮಹಿಳಾ ಖಾಕಿಗಳನ್ನು ಕರೆಸಿ ಮೇಲೆರಗಿದರು. ಘೋಷಣೆಗಳು ಮುಗಿಲು ಮುಟ್ಟುತ್ತಿದ್ದು, ನೀವು ಬಂದ್ರಾ ಬರ್‍ರಿ, ನೀವ್ಯಾವ ಲೆಕ್ಕ ಎಂದು ಇಬ್ಬರು ಪೋಲೀಸರನ್ನು ಗುಂಪಿನೊಳಗೆಳೆದರು.

ತೀವ್ರಗೊಂಡಿದ್ದ ಕೂಲಿಕಾರರ ಆಕ್ರೋಶವನ್ನು ಅರಿತು ಓಡೋಡಿ ಬಂದ ಎಸ್ಪಿ, ಡಿಸಿ, ಮತ್ತವರ ಪರಿವಾರದವರು ಮನವಿ ಕೊಡಿ ಎಂದರು. ಆದರೆ ಮನವಿ ನೀಡಲು ನಿರಾಕರಿಸಿದ ಕೂಲಿಕಾರರು ಒಂದು ಗಂಟೆ ಕಾಲ ಸುಡು ಸೂರ್ಯನ ಬಿಸಿಲಿನಲ್ಲಿ ನಿಲ್ಲಿಸಿ, ಬೆವರಿಳಿಸಿ ಮನವಿಯನ್ನು ಕೊಟ್ಟರು. ಡಿಸಿ ಆಗಸ್ಟ್ 29 ಕ್ಕೆ ಸಭೆ ಕರೆಯಲು ಆದೇಶಿಸಿ ನಿಟ್ಟುಸಿರು ಬಿಟ್ಟು ತೆರಳಿದರು. ಕೂಲಿಕಾರರ ಸಂತೋಷಕ್ಕೆ ಪಾರವೇ ಇಲ್ಲದಂತೆ ಕೆಂಬಾವುಟ ಹಿಡಿದು ಕುಣಿದು ಕುಪ್ಪಳಿಸಿದರು. ಇದೇ ಸಮಯದಲ್ಲಿ ಮಂಗಳೂರಿನ ಪ್ರವೀಣ್ ಕೊಲೆಯ ಘಟನೆಯನ್ನು ಬಂಡವಾಳ ಮಾಡಿಕೊಳ್ಳಲು ಕಾವಿ ವಸ್ತ್ರವನ್ನು ಹೊದಿಸಿಕೊಂಡು ಹಣದ ಥೈಲಿ ಬಳಸಿ ಜನರನ್ನು ಸೇರಿಸಿದ್ದ ಸಂಘ ಪರಿವಾರದವರು ಮೆಳ್ಳುಗಣ್ಣು ಬಿಟ್ಟು ಮರೆಮರೆಯಲ್ಲಿ ನೋಡುತ್ತಿದ್ದರು. ಮಂಡ್ಯ ಜಿಲ್ಲೆ ಅಷ್ಟು ಸುಲಭವಲ್ಲ ಎಂಬಂತೆ ಕೆಂಬಾವುಟಗಳ ಸರದಾರರನ್ನು ನೋಡಿ ಅವರು ಹಾಗೇ ಮರೆಯಾದರು.

ಇಂತಹ ಸಂಘಟನೆಗಳನ್ನು ನಾಡಿನ ಮೂಲೆ ಮೂಲೆಗೆ ಕೊಂಡೊಯ್ಯೋಣವೇ !?

ಬಗರ್ ಹುಕ್ಕುಂ ಸಾಗುವಳಿದಾರರಿಗೆ ಹಕ್ಕುಪತ್ರ ವಿತರಣೆಗೆ ಆಗ್ರಹಿಸಿ ಪ್ರಾಂತ ರೈತ ಸಂಘ ಪ್ರತಿಭಟನೆ

ಕಳೆದ 50–60 ವರ್ಷಗಳಿಂದ ಗೋಮಾಳ, ಗುಂಡು ತೋಪು, ಅರಣ್ಯ ಭೂಮಿಗಳಲ್ಲಿ ಬಡ ಬಗರ್ ಹುಕುಂ ಸಾಗುವಳಿದಾರರು ಉಳುಮೆ ಮಾಡುತ್ತಾ ಬರುತ್ತಿದ್ದಾರೆ. ಆಳುವ ಸರಕಾರವು ಬಡ ಬಗರ್ ಹುಕ್ಕುಂ ಸಾಗುವಳಿದಾರರನ್ನು ಮರೆತಿವೆ. ಅಲ್ಲದೆ ಸಾಗುವಳಿ ಪತ್ರ ನೀಡದೆ ಇರುವ ಪರಿಣಾಮವಾಗಿ ಸರ್ಕಾರಿ ಸವಲತ್ತುಗಳು, ಸಾಲ ಸೌಲಭ್ಯ, ಬರ ಪರಿಹಾರ ಇತ್ಯಾದಿ ಸೌಲಭ್ಯಗಳು ಸಿಗದೇ ರೈತರು ವಂಚಿತರಾಗಿದ್ದಾರೆ. ಬಗರ್ ಹುಕ್ಕುಂ ಸಾಗುವಳಿದಾರರಿಗೆ ಹಕ್ಕುಪತ್ರ ವಿತರಿಸಬೇಕು. ಸಾಗುವಳಿ ಪತ್ರಕ್ಕೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಬೇಕು. ಗೊಬ್ಬರ ಅಭಾವ ನೀಗಿಸಬೇಕು ಸೇರಿದಂತೆ ವಿವಿಧ ಬೇಡಿಕೆ ಮುಂದಿಟ್ಟು ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ

ಪುಟ 12 ಕ್ಕೆ







"ಆನೆ ಮತ್ತು ಮಾನವ ಸಂಘರ್ಷ–ಕಾರಣ ಮತ್ತು ಪರಿಹಾರ"

ಹೆಚ್.ಆರ್. ನವೀನಕುಮಾರ್

'ಆನೆ ಬಂತೊಂದ್ ಆನೆ... ಯಾವೂರ್ ಆನೆ... ಬಿಜಾಪುರದ್ ಆನೆ... ಇಲ್ಲಿಗೇಕೆ ಬಂತು...' ಇದು ನಾವು ಚಿಕ್ಕವರಾಗಿದ್ದಾಗ ಕೇಳುತ್ತಿದ್ದ ಹಾಡು. ಆನೆಯನ್ನು ನೋಡುವುದೆಂದರೆ ಅದೊಂದು ರೀತಿಯ ಸಂಭ್ರಮ ಜಾತ್ರೆಯ ಸಂದರ್ಭದಲ್ಲೋ, ಸರ್ಕಸ್‌ನಲ್ಲೋ ಅಥವಾ ಮೃಗಾಲಯದಲ್ಲೋ ಆನೆಗಳನ್ನು ನೋಡುವುದು ಬಿಟ್ಟರೆ ಬೇರೆಲ್ಲಿಯೂ ಆನೆಗಳನ್ನು ನೋಡಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಇತ್ತೀಚಿನ ಕೆಲವು ವರ್ಷಗಳಲ್ಲಿ ಹಾಸನ ಜಿಲ್ಲೆಯ ಸಕಲೇಶಪುರ, ಅಲೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಆನೆಗಳು ಕಾಫಿ ತೋಟಗಳಲ್ಲಿ, ಬಾಳೆ ತೋಟಗಳಲ್ಲಿ, ಭತ್ತದ ಗದ್ದೆಗಳಲ್ಲಿ, ರಸ್ತೆಗಳಲ್ಲಿ, ಊರುಗಳಲ್ಲೂ ಕಾಣಿಸಿಕೊಳ್ಳುತ್ತಿವೆ. ಇವು ಒಂದು ಎರಡು ಆನೆಗಳಲ್ಲ 10–15 ಆನೆಗಳ ಹಿಂಡು ಹಿಂಡೇ ಎಲ್ಲಡೆ ಸಂಚರಿಸಲು ಪ್ರಾರಂಬಿಸಿವೆ. ಆನೆಗಳಿಗೆ ಸಧ್ಯ ಕಾಡು ಮತ್ತು ನಾಡಿನ ಯಾವ ವ್ಯತ್ಯಾಸಗಳು ತಿಳಿಯದಂತಾಗಿವೆ. ಈ ಆನೆಗಳಿಂದ ಭಯಗೊಂಡ ಜನ ಅವುಗಳನ್ನು ಓಡಿಸುವ ಪ್ರಯತ್ನ ಮಾಡಿದರೆ ಈ ಮಾನವನಿಂದ ಭಯಗೊಂಡ ಆನೆಗಳು ದಾಳಿಮಾಡಿ, ಬೆಳೆಗಳ ನಾಶದ ಜೊತೆಗೆ ಜೀವ ಹಾನಿಯೂ ಉಂಟಾಗಿದೆ.

ದಿನದಿಂದ ದಿನಕ್ಕೆ ಆನೆ ಮತ್ತು ಮಾನವನ ಸಂಘರ್ಷ ತೀವ್ರವಾಗುತ್ತಿರುವ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಪರಿಸರ ಮತ್ತು ಜನಪರ ಸಂಘಟನೆಗಳು ಸೇರಿ ಹಾಸನ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಸಂಘಟನೆಗಳ ಮುಖಂಡರುಗಳನ್ನು ಒಳಗೊಂಡ "ಆನೆ ಮತ್ತು ಮಾನವ ಸಂಘರ್ಷ" ಕಾರಣ ಮತ್ತು ಪರಿಹಾರಗಳು ಎಂಬ ಒಂದು ದಿನದ ಕಾರ್ಯಾಗಾರವನ್ನು ಜುಲೈ 29 ರಂದು ಸಕಲೇಶಪುರದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ತಜ್ಞರು, ರೈತರು, ಕೂಲಿ ಕಾರ್ಮಿಕ ಮುಖಂಡರು, ಪರಿಸರ ಪ್ರೇಮಿಗಳು ವ್ಯಕ್ತಪಡಿಸಿದ ಪ್ರಮುಖ ಅಂಶಗಳನ್ನು ನಿಮ್ಮ ಮುಂದಿಡುವ ಪ್ರಯತ್ನ ಮಾಡುತ್ತಿದ್ದೇನೆ. ಈ ಮೂಲಕ ಆನೆ ಮತ್ತು ಮಾನವ ಸಂಘರ್ಷದ ಕಾರಣಗಳನ್ನು ಅರ್ಥ ಮಾಡಿಕೊಳ್ಳಲು ಇದು ಸಹಾಯವಾಗುತ್ತದೆ ಎಂದು ಭಾವಿಸಿದ್ದೇನೆ.

ಮೂಲದಲ್ಲಿ ಸಕಲೇಶಪುರ, ಆಲೂರು, ಮತ್ತು ಕೊಡಗಿನ ಬಹುತೇಕ ಪ್ರದೇಶಗಳು ಕಾಡಿನಿಂದ ಆವರಿಸಿತ್ತು ಮತ್ತು ಈ ಪ್ರದೇಶಗಳೆಲ್ಲವೂ ಆನೆಗಳ ಆವಾಸಸ್ಥಾನಗಳೇ ಆಗಿದ್ದವು. ಈ ಪ್ರದೇಶಗಳಲ್ಲಿ ಕಾಡನ್ನು ನಾಶಮಾಡಿ ಕೃಷಿ ಚಟುವಟಿಕೆ ಪ್ರಾರಂಭವಾಗಿ ಕಾಫಿ ತೋಟಗಳು ನಿರ್ಮಾಣವಾದ್ದರಿಂದ ಆನೆಗಳು ಸಂಚರಿಸುವ ಜಾಗಗಳು (ಕಾರಿಡಾರ್) ಇಲ್ಲದಂತಾದವು. ಒಂದು ಅಧ್ಯಯನದ ಪ್ರಕಾರ ಒಂದು ಆನೆ ಒಂದು ಸಾವಿರ ಚದರ ಕಿಲೋಮೀಟರ್ ಸಂಚರಿಸುತ್ತದೆ. ಮಾತ್ರವಲ್ಲದೆ ಒಂದು ಆನೆಗೆ ಒಂದು ದಿನಕ್ಕೆ ಕನಿಷ್ಟ 350 ಕೆಜಿಯಷ್ಟು ಆಹಾರ ಬೇಕು ಮತ್ತು ಸುಮಾರು 150 ಲೀಟರ್ ಕುಡಿಯಲು ನೀರು ಬೇಕು. ಒಂದೆಡೆ ಕೃಷಿ ಚಟುವಟಿಕೆಗಳು ನಡೆಯುತ್ತಿದ್ದರೆ ಮತ್ತೊಂದೆಡೆ ಅವುಗಳಿಗಿಂತ ಹೆಚ್ಚಿನ ಅಪಾಯವನ್ನು ತಂದೊಡ್ಡಿದ್ದು ಅಭಿವೃದ್ಧಿಯ ಹೆಸರಿನಲ್ಲಿ ಕರಾವಳಿ ಮತ್ತು ಮಲೆನಾಡಿನ ಭಾಗದಲ್ಲಿ ಕಾಡನ್ನು ನಾಶಮಾಡಿ ನಿರ್ಮಾಣವಾಗುತ್ತಿರುವ ಹೊಸ ಹೊಸ ಯೋಜನೆಗಳು. ಉದಾಹರಣೆಗೆ ಗುಂಡ್ಯಾ ಜಲವಿದ್ಯುತ್ ಯೋಜನೆ, ಎತ್ತಿನ ಹೊಳೆ ಯೋಜನೆ, ಉಷ್ಣ ವಿದ್ಯುತ್ ಸ್ಥಾವರ, ರೈಲ್ವೇ ಟ್ರ್ಯಾಕ್, ಬೃಹತ್ ಹೆದ್ದಾರಿಗಳು. ಈ ಯೋಜನೆಗಳಿಗಾಗಿ ಅಗತ್ಯಕ್ಕಿಂತ ಹೆಚ್ಚಾಗಿ ಭೂಸ್ವಾಧೀನ ಮಾಡಿಕೊಂಡು ಕಾಡನ್ನು ಸಂಪೂರ್ಣ ನಾಶ ಮಾಡಲಾಗುತ್ತಿದೆ. ಇದೇ ಕಾಡನ್ನು ನಂಬಿ ಬದುಕುತ್ತಿದ್ದ ಕಾಡುಪ್ರಾಣಿಗಳು ಈ ಅಭಿವೃದ್ಧಿ ಕಾಮಗಾರಿಗಳಿಂದಾಗಿ ತಮ್ಮ ಆವಾಸಸ್ಥಾನಕ್ಕ ದಕ್ಕೆ ಬಂದಾಗ ಬದುಕಿನ ಅನಿವಾರ್ಯತೆಯಿಂದ ಕಾಡಿನಿಂದ ನಾಡಿನತ್ತ ಮುಖಮಾಡಿವೆ. ಇದೇ ಇಂದು ಕಾಡು ಪ್ರಾಣಿಗಳು ಮತ್ತು ಮಾನವನ ನಡುವಿನ ಸಂಘರ್ಷಕ್ಕೆ ಕಾರಣವಾಗಿದೆ. ಒಂದು ಅಂಕಿ ಅಂಶದ ಪ್ರಕಾರ ಭಾರತದ ಒಟ್ಟು ಭೂಪ್ರದೇಶದಲ್ಲಿ ಶೇಕಡ 80 ರಷ್ಟು ಮಾನವ ವಾಸ ಮಾಡುವ ಪ್ರದೇಶ, ಶೇಕಡಾ 20 ರಷ್ಟು ಕಾಡು, ಅದರಲ್ಲಿನ ಶೇಕಡಾ 5 ರಷ್ಟು ಕಾಡು ಪ್ರದೇಶದಲ್ಲಿ ಮಾತ್ರ ಕಾಡುಪ್ರಾಣಿಗಳು ವಾಸಿಸುತ್ತಿವೆ.

ಬೇರೆಲ್ಲಾ ಕಾಡು ಪ್ರಾಣಿಗಳಿಗಿಂತ ಆನೆ ಅತ್ಯಂತ ದೈತ್ಯಾಕಾರ ಮತ್ತು ಅತ್ಯಂತ ಬುದ್ದಿವಂತ ಪ್ರಾಣಿ. ಇದು ಜಗತ್ತಿನ ಎಲ್ಲಾ ರೀತಿಯ ವಾತಾವರಣದಲ್ಲೂ ಬದುಕಿ ಜೀವನವನ್ನು ಸಾಗಿಸುತ್ತದೆ. ಇವು ಮನುಷ್ಯನ ರೀತಿಯಲ್ಲಿಯೇ ಗುಂಪು ಜೀವನ ನಿರ್ವಹಿಸುತ್ತವೆ. ಆದರೆ ಕೃಷ್ಣಮೃಗದಂತಹಾ ಪ್ರಾಣಿಗಳು ಕೇವಲ ಹುಲ್ಲುಗಾವಲಿನಲ್ಲಿ ಮಾತ್ರ ವಾಸಿಸುತ್ತವೆ. ಜಗತ್ತಿನ 23 ದೇಶಗಳಲ್ಲಿ ಆನೆಗಳಿವೆ. 2014–15 ರಲ್ಲಿ ಭಾರತದಲ್ಲಿ 2000 ಜನ ಆನೆಗಳ ದಾಳಿಗಳಿಂದಾಗಿ ಸಾವನ್ನಪ್ಪಿದ್ದಾರೆ, ಹಾವುಗಳಿಂದ ವರ್ಷಕ್ಕೆ ಅಂದಾಜು ಒಂದು ಲಕ್ಷ ಜನ ಸಾವನಪ್ಪುತ್ತಿದ್ದಾರೆ. 2016–2019 ರ ನಡುವೆ ದೇಶದಲ್ಲಿ 36 ಸಾವಿರ ಕಾಡುಪ್ರಣಿಗಳು ಸಾವನ್ನಪ್ಪಿವೆ. ಇದರಲ್ಲಿ ಬಹುತೇಕ ಪ್ರಾಣಿಗಳು ಕಾಡಿನ ಒಳಗೆ ಸಂಚರಿಸುವ ರೈಲುಗಳಿಗೆ ಸಿಕ್ಕಿ ಮತ್ತು ರಸ್ತೆಗಳಲ್ಲಿ ಸಂಚರಿಸುವ ವಾಹನಗಳಿಗೆ ಸಿಕ್ಕಿ ಸಾವನಪ್ಪಿವೆ.

ಕರ್ನಾಟಕದಲ್ಲಿ ಒಂದು ಅಂದಾಜಿನ ಪ್ರಕಾರ 6700 ರಷ್ಟು ಆನೆಗಳಿವೆ. ಇವುಗಳಲ್ಲಿ ಶೇಕಡಾ 60 ರಷ್ಟು ಆನೆಗಳು ಆಹಾರವನ್ನು ಹುಡುಕಿಕೊಂಡು ಕಾಡಿನಿಂದ ಹೊರಬಂದು ಸಂಚರಿಸಿ ಮತ್ತೆ ಕಾಡಿಗೆ ಹೋಗುತ್ತವೆ. ಹಾಸನ, ಕೊಡುಗು ಪ್ರದೇಶದಲ್ಲಿ ಒಂದು ಆನೆ 700–800 ಚದರ ಕಿಲೋಮೀಟರ್ ಒಡಾಡುತ್ತದೆ. ಈ ಓಡಾಟದಲ್ಲಿ ದೊಡ್ಡಪ್ರಮಾಣದಲ್ಲಿ ಕಾಫಿ ತೊಟದ ನಾಶ, ಬತ್ತದ ಗದ್ದೆ, ಬಾಳೆ ತೋಟ, ಜೋಳ ಮುಂತಾದ ಬೆಳೆಗಳು ನಾಶವಾಗುವುದರ ಜೊತೆಗೆ ಈ ಆನೆಗಳ ದಾಳಿಗೆ ಸಿಕ್ಕಿ ಹಾಸನ ಜಿಲ್ಲೆಯೊಂದರಲ್ಲೇ 50 ಕ್ಕೂ ಹೆಚ್ಚು ಜನ ತಮ್ಮ ಪ್ರಾಣಗಳನ್ನು ಕಳೆದುಕೊಂಡಿದ್ದಾರೆ. ಹಲವರು ಅಂಗವೈಕಲ್ಯರಾಗಿ ಜೀವನ ಸಾಗಿಸುತ್ತಿದ್ದಾರೆ.

ಕಾಡಿನಿಂದ ಹೊರಗೆ ಬಂದ ಆನೆಗಳು ಕಾಫಿತೋಟಗಳನ್ನೇ ತಮ್ಮ ಆವಾಸಸ್ಥಾನಗಳನ್ನಾಗಿ ಮಾಡಿಕೊಂಡು ಅಲ್ಲಿ ಸಿಗುವ ಆಹಾರವನ್ನೇ ಸೇವಿಸಿ ಜೀವನ ಮಾಡುತ್ತಿವೆ. ಪ್ರತಿ 5 ವರ್ಷಗಳಿಗೊಮ್ಮೆ ಆನೆಗಳ ಸಂತಾನ ಪ್ರಕ್ರಿಯೆ ನಡೆಯುವುದರಿಂದ ಬಹುತೇಕ ಆನೆಗಳು ಕಾಫಿ ತೋಟಗಳಲ್ಲಿಯೇ ಅಥವಾ ಕಾಡಿನ ಹೊರಗಡೆಯೇ ಹುಟ್ಟಿ ಬೆಳೆಯುತ್ತಿರುವುದರಿಂದ ಅವುಗಳಿಗೆ ಕಾಡಿನ ಪರಿಚಯವೇ ಇಲ್ಲ. ಹಾಗಾಗಿ ಈ ಆನೆಗಳನ್ನು ಎಲ್ಲಿಗೆ ಓಡಿಸಿದರೂ ಅವುಗಳು ಮತ್ತೆ ಅದೇ ಪ್ರದೇಶಗಳಿಗೆ ವಾಪಸ್ ಬರುತ್ತವೆ.

ಆನೆ ಮತ್ತು ಮಾನವ ಸಂಘರ್ಷವನ್ನು ತಡೆಯುವ ಉದ್ದೇಶದಿಂದ ಕರ್ನಾಟಕ ಉಚ್ಚನ್ಯಾಯಾಲಯದ ನಿರ್ದೇಶನದ ಮೇರೆಗೆ 'ಕರ್ನಾಟಕ ಆನೆ ಕಾರ್ಯಪಡೆ'ಯನ್ನು ರಚಿಸಿ ಅದು ಅಧ್ಯಯನವನ್ನು ನಡೆಸಿ ದೀರ್ಘವಾದ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿತು. ಈ ವರದಿಯ ಶಿಪಾರಸ್ಸುಗಳನ್ನು ಜಾರಿಗೆ ತರುವಂತೆ ಕರ್ನಾಟಕ ಉಚ್ಚನ್ಯಾಯಾಲಯವು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತು. ಆದರೆ ಇದುವರೆಗೂ ರಾಜ್ಯ ಸರ್ಕಾರ ಈ ವರದಿಯ ಸಮಗ್ರ ಅನುಷ್ಟಾನಕ್ಕೆ ಬೇಕಾದ ಕ್ರಮಗಳನ್ನು ಕೈಗೊಂಡಿಲ್ಲ. ಕೇವಲ ಅರಣ್ಯ ಇಲಾಖೆಯು ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಆನೆಗಳು ಸಂಚರಿಸಬಾರದೆಂದು ಗಡಿಪ್ರದೇಶದಲ್ಲಿ ರೈಲ್ವೇ ಹಳಿಗಳಿಂದ ಬೇಲಿಯನ್ನು ನಿರ್ಮಿಸುವ ಯೋಜನೆಯನ್ನು ಕೈಗೊಂಡಿದ್ದಾರೆ. ಈ ಕುರಿತು ಹೆಚ್ಚಿನ ಅಧ್ಯಯನಕ್ಕಾಗಿ ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನಲ್ಲಿರುವ ಕೊಡಗು ಮತ್ತು ಹಾಸನ ಜಿಲ್ಲೆಯ ಗಡಿ ಭಾಗದ ಹೇಮಾವತಿ ಹಿನ್ನೀರಿನ ಪ್ರದೇಶಕ್ಕೆ ಸಂಘಟನೆಗಳ ಮುಖಂಡರ ನಿಯೋಗ ಭೇಟಿ ನೀಡಿ ಪರಿಶೀಲಿಸಿತು. ಸುಮಾರು 9 ಕಿಲೋಮೀಟರ್ ನಷ್ಟು ಕಬ್ಬಿಣದ ರೈಲ್ವೇ ಹಳಿಗಳಿಂದ ಬೇಲಿಗಳನ್ನು ನಿರ್ಮಾಣ ಮಾಡಿದ್ದಾರೆ. ಇಲಾಖೆಯ ಅಂದಾಜಿನ ಪ್ರಕಾರ ಒಂದು ಕಿಲೋಮೀಟರ್ ಬೇಲಿ ನಿರ್ಮಾಣ ಮಾಡಲು 1.5 ಕೋಟಿ ರೂ ಖರ್ಚಾಗುತ್ತದೆ. ಆದರೆ ಈ ರೈಲ್ವೇ ಕಂಬಿಗಳಿಂದ ನಿರ್ಮಾಣವಾಗುತ್ತಿರುವ ಬೇಲಿಗಳಿಂದ ಏನಾದರೂ ಪ್ರಯೋಜನವಾಗಿದೆಯಾ ಎಂದು ಸ್ಥಳೀಯ ರೈತರನ್ನು ವಿಚಾರಿಸಿದರೆ ಅವರು ಹೇಳುವುದೇನೆಂದರೆ, ಗಡಿಗಳಲ್ಲಿ ನಿರ್ಮಾಣವಾಗುವ ಬೇಲಿಯಿಂದ ಕೊಡಗು ಜಿಲ್ಲೆಯ ಕಾಡುಗಳಿಂದ ನಮ್ಮ ಭಾಗಕ್ಕೆ ಆನೆಗಳು ಬರದೇ ಇರಬಹುದು

ಪುಟ 14 ಕ್ಕೆ



ತಪ್ಪದ ಸಂಘರ್ಷ: ಸರಕಾರದ ಅವೈಜ್ಞಾನಿಕ ನೀತಿ

ಆನೆ ಮತ್ತು ಮಾನವನ ನಡುವಿನ ಸಂಘರ್ಷವನ್ನು ತಡೆಯುವ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸಿರುವ ನೀತಿ ಮತ್ತು ಹಲವಾರು ಕ್ರಮಗಳು ಸಮಸ್ಯೆಯನ್ನು ಸಂಪೂರ್ಣವಾಗಿ ತಡೆಯಲು ವಿಫಲವಾಗಿವೆ. ಈ ಕುರಿತು ಸರ್ಕಾರ ವಿಶೇಷವಾಗಿ ಅರಣ್ಯ ಇಲಾಖೆ ರೂಪಿಸಿರುವ ಕಾರ್ಯ ಯೋಜನೆ ಹಲವಾರು ದೋಷಗಳಿಂದ ಕೂಡಿದೆ. ಪ್ರಮುಖವಾಗಿ ಅರಣ್ಯದಲ್ಲಿ ಆನೆಗಳಿಗೆ ಅಗತ್ಯವಾಗಿರುವ ಆಹಾರ ಸಿಗುತ್ತಿಲ್ಲ. ಗಿಡ ಮರ ಹುಲ್ಲು ಹಣ್ಣುಗಳು ಸಿಗುತ್ತಿಲ್ಲ. ಹಾಗೆ ಆಗಬೇಕಾದರೆ ಅರಣ್ಯದಲ್ಲಿ ಅತ್ಯಂತ ಹೆಚ್ಚು ಎಲೆಗಳುಳ್ಳ ಗಿಡ ಮರಗಳು, ಹಲಸು, ಮಾವು, ಬಿದಿರು ಮುಂತಾದವು ಯಥೇಚ್ಛವಾಗಿ ಸಿಗುವಂತೆ ಆಗಬೇಕು, ಇದಕ್ಕೆ ಅನುಗುಣವಾದ ಅರಣ್ಯ ಸಮೃದ್ಧಿ ಕಾರ್ಯಕ್ರಮಗಳು ರೂಪಿಸಿ ಜಾರಿಗೊಳಿಸಬೇಕು. ಆದರೆ ಸರ್ಕಾರ ಇಂತಹ ಮೂಲಭೂತ ಕ್ರಮಕ್ಕೆ ಮುಂದಾಗುವುದಿಲ್ಲ. ಅದರ ಅರಣ್ಯ ಸಂವರ್ಧನಾ ಕಾರ್ಯ ಯೋಜನೆಯಲ್ಲಿ ಆನೆ, ಪಶು ಪಕ್ಷಿಗಳಿಗೆ ಆಹಾರ, ಆಶ್ರಯ ನೀಡುವ ಕ್ರಮಗಳಿಗಿಂತ ಕಾಡನ್ನು ಬರಡು ಮಾಡುವ ಅಕೇಶಿಯಾ– ನೀಲಗಿರಿ, ತೇಗದಂತಹ ವಾಣಿಜ್ಯ ದೃಷ್ಟಿಯ ಮರಗಳನ್ನೇ ಯಥೇಚ್ಛವಾಗಿ ಬೆಳೆಸುತ್ತದೆ. ದಿನ ದಿನದಿಂದಲೂ ಹಲವಾರು ಕಾರಣಗಳಿಂದ ಬಯಲಾಗುತ್ತಲೇ ಇರುವ ಕಾಡಿನಲ್ಲಿ ಆನೆ ಮುಂತಾದ ವನ್ಯ ಜೀವಿಗಳು ಬದುಕುಳಿಯಲು ಪರದಾಟ ಬೇಕಾದ ಸನ್ನಿವೇಶವನ್ನು ಸೃಷ್ಟಿಸಿದೆ. ಇಲ್ಲಿ ಯೋಜನೆಗೆ ಮೀಸಲಾದ ಹಣದ ಅಪಾರ ಭ್ರಷ್ಟಾಚಾರದ ಪ್ರಕರಣಗಳಿಗೂ ಮಿತಿ ಇಲ್ಲ. ಅರಣ್ಯ ಪರಿಸರದಲ್ಲಿ ಮಾನವ ಮತ್ತು ವನ್ಯಜೀವಿಗಳು ಹೊಂದಿಕೊಂಡು ಬದುಕಿ ಬಾಳಬಹುದು ಎನ್ನುವ ಒಂದು ಸಮನ್ವಯ ನೀತಿ ನಿರಾಕರಣೆಯಿಂದಲೂ ಇಂತಹ ಅವಾಂತರಗಳು ಜರುಗುತ್ತವೆ. ಜನತೆಯನ್ನು ಕಾಡಿನಿಂದ ಓಡಿಸುವುದಕ್ಕೆ ನೆಪವಾಗಿಯೂ ಇದೇ ಸಂದರ್ಭಗಳನ್ನು ಬಳಸಲಾಗುತ್ತಿದೆ. ಕಾಡು ಪ್ರಾಣಿಗಳಿಂದ ಬೆಳೆ ಹಾನಿ ಮತ್ತು ಜೀವ ಕಳೆದುಕೊಂಡ ಅಥವಾ ಹಾನಿಗೀಡಾದ ಕೃಷಿಕರು ಮತ್ತು ಕೂಲಿಕಾರರ ಕುಟುಂಬಗಳಿಗೆ ಪರಿಹಾರ ನೀಡುವುದು ಕೂಡ ಅಷ್ಟಕಷ್ಟೇ. ಇಲ್ಲಿಯೂ ಅತ್ಯಂತ ದುಸ್ತರವಾದ ನಿಯಮಗಳಿವೆ.

ಈ ದೆಸೆಯಲ್ಲಿ ಬದಲಾಗಬೇಕಾದ ನೀತಿ ಮತ್ತು ಕಾರ್ಯಯೋಜನೆಗಳ ಬಗ್ಗೆ ನೀಡಲಾದ ಸಲಹೆ ಸೂಚನೆಗಳನ್ನು ಸರ್ಕಾರ ಮತ್ತು ಅರಣ್ಯ ಇಲಾಖೆ ನಿರ್ಲಕ್ಷಿಸುತ್ತಲೇ ಬಂದಿದೆ.

ಒಟ್ಟಾರೆ ಸರ್ಕಾರದ ನೀತಿಗಳ ವೈಫಲ್ಯವೇ ಇಂದಿಗೂ ಮಾನವ ಮತ್ತು ಕಾಡುಪ್ರಾಣಿಗಳ ನಡುವಿನ ಸಂಘರ್ಷ ಮುಂದುವರಿಸಲು ಮತ್ತು ಮತ್ತಷ್ಟು ಹೆಚ್ಚಾಗಲು ಒಂದು ಪ್ರಮುಖ ಕಾರಣವಾಗಿದೆ ಎನ್ನುವುದನ್ನೂ ಗಮನಿಸಬೇಕು. ಈ ದೆಸೆಯಲ್ಲಿ ಈಗ ತಜ್ಞರು ನೀಡಿರುವ ಹಲವು ಸಲಹೆ ಸೂಚನೆಗಳ ಶಿಫಾರಸುಗಳನ್ನು ಸಕಾರಾತ್ಮಕವಾಗಿ ಪರಿಗಣಿಸಲು ಸರ್ಕಾರ ಕಣ್ತೆರೆದು ಕಾರ್ಯಪ್ರವೃತ್ತರಾಗುವಂತೆ ಒತ್ತಾಯಿಸಬೇಕು.

ಮೌಲ್ಯ ಮಾಪಕರ ಎಡವಟ್ಟು: ವಿದ್ಯಾರ್ಥಿಗಳ ಅಂಕಕ್ಕೆ ಆಪತ್ತು

ಕಳೆದ ಏಪ್ರಿಲ್ ಮತ್ತು ಮೇ ನಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯ ಉತ್ತರ ಪತ್ರಿಕೆಯ ಮೌಲ್ಯಮಾಪನದಲ್ಲಿ ಮೌಲ್ಯಮಾಪಕರು ಮಾಡಿರುವ ಎಡವಟ್ಟು ಮತ್ತು ಬೇಜವಾಬ್ದಾರಿಯಿಂದಾಗಿ ಬಹಳಷ್ಟು ವಿದ್ಯಾರ್ಥಿಗಳು ಆಪತ್ತಿಗೆ ಸಿಲುಕಿಕೊಂಡಿರುವ ಘಟನೆ ಬೆಳಕಿಗೆ ಬಂದಿದೆ.

ಗುರುರಾಜ ದೇಸಾಯಿ

ಪರೀಕ್ಷೆಗಳಲ್ಲಿ ಅಂಕಗಳು ಮುಖ್ಯವಲ್ಲ ಎಂದು ಅನೇಕ ತಜ್ಞರು ಹೇಳುತ್ತಾ ಬಂದರೂ, ಇವತ್ತಿನ ಸ್ಪಾರ್ಧಾತ್ಮಕ ಯುಗದಲ್ಲಿ ಒಂದೊಂದು ಅಂಕವೂ ಮುಖ್ಯವಾಗಿದೆ. ಹಾಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಪರೀಕ್ಷಾ ಫಲಿತಾಂಶ ಬಹು ಮುಖ್ಯವಾಗಿರುತ್ತದೆ. ಮುಂದಿನ ತರಗತಿಗಳಿಗೆ ಸೇರಿಕೊಳ್ಳಲು ಅಂಕಗಳಿಗೆ ಪ್ರಾಮುಖ್ಯತೆ ಸಿಗುವ ಕಾರಣ ವರ್ಷಪೂರ್ತಿ ಕಷ್ಟಪಟ್ಟು ಹೋಗಿ ಪರೀಕ್ಷೆ ಬರೆದಿರುತ್ತಾರೆ. ಆದರೆ ಕೆಲವೊಬ್ಬರು ಮೌಲ್ಯಮಾಪಕರು ಮಾಡುವ ಎಡವಟ್ಟಿನಿಂದಾಗಿ ವಿದ್ಯಾರ್ಥಿಗಳು ಪರಿತಪಿಸುವಂತಾಗುತ್ತದೆ. ಅಂಥದೇ ಪ್ರಕರಣಗಳು ರಾಜ್ಯದಲ್ಲಿ ನಡೆದಿವೆ ಎಂಬ ಮಾಹಿತಿ ಲಭ್ಯವಾಗಿದೆ. ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು 8 ಅಂಕಗಳ ಹೆಚ್ಚಳವನ್ನು ಕಂಡಿದ್ದಾರೆ.

ಇದಕ್ಕೆ ಸಾಕ್ಷಿಯೆಂಬಂತೆ ಮರುಮೌಲ್ಯಮಾಪನ ಬಳಿಕ ನೂರಾರು ವಿದ್ಯಾರ್ಥಿಗಳು ಎರಡಂಕಿ (ಡಬ್ಬಲ್ ಡಿಜಿಟ್) ಅಂಕಗಳನ್ನು ಹೆಚ್ಚುವರಿಯಾಗಿ ಪಡೆದಿದ್ದಾರೆ. ತಾವು ಪಡೆದ ಅಂಕಗಳ ಬಗ್ಗೆ ತೃಪ್ತಿ ಹೊಂದದ ಸಾವಿರಾರು ವಿದ್ಯಾರ್ಥಿಗಳು ಅಂಕಗಳ ಮರು ಎಣಿಕೆ ಮತ್ತು ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದು, ಪದವಿ ಪೂರ್ವ ಶಿಕ್ಷಣ ಇಲಾಖೆ ಭಾನುವಾರ ಫಲಿತಾಂಶ ಪ್ರಕಟಿಸಿದೆ. ಇದನ್ನು ಸಮಗ್ರವಾಗಿ ಪರಿಶೀಲಿಸಿದಾಗ ಮೌಲ್ಯಮಾಪಕರು ಮಾಡಿರುವ ಎಡವಟ್ಟು ಬೆಳಕಿಗೆ ಬಂದಿದೆ. ವ್ಯತ್ಯಾಸವಾಗಿರುವ ಅಂಕಗಳನ್ನು ಗಮನಿಸಿದರೆ ಬೇಜವಾಬ್ದಾರಿಯಾಗಿ ಉತ್ತರ ಪತ್ರಿಕೆ ಮೌಲ್ಯಮಾಪನ ಮಾಡಿರುವುದು ಕಂಡುಬಂದಿದೆ. ಮರುಮೌಲ್ಯ ಮಾಪನದ ವೇಳೆ 15ರಿಂದ 20 ಅಂಕ ಹೆಚ್ಚಾಗಿ ಪಡೆದವರ ದೊಡ್ಡ ಪಟ್ಟಿಯೇ ಇದ್ದು, ಮೌಲ್ಯಮಾಪನ ಸಮರ್ಪಕವಾಗಿ ನಡೆದಿಲ್ಲ ಎಂಬುದನ್ನು ಸಾಬೀತುಪಡಿಸುತ್ತಿದೆ. ಕನ್ನಡ, ಇಂಗ್ಲಿಷ್‌ನಂತಹ ವಿಷಯಗಳಲ್ಲಿ ಸ್ವಲ್ಪ ಅಂಕ ವ್ಯತ್ಯಾಸವಾಗಿದ್ದರೆ ಕಣ್ತಪ್ಪಿನಿಂದ ಆಗಿರಬಹುದು ಎನ್ನಬಹುದಿತ್ತು. ಆದರೆ ಗಣಿತ, ರಸಾಯನ ಶಾಸ್ತ್ರ, ಭೌತಶಾಸ್ತ್ರ ವಿಷಯಗಳಲ್ಲೂ 15 ರಿಂದ 20 ಅಂಕಗಳ ವ್ಯತ್ಯಾಸವಿರುವುದು ವಿದ್ಯಾರ್ಥಿಗಳು, ಪೋಷಕರ ಆಕ್ರೋಶಕ್ಕೆ ಕಾರಣವಾಗಿದೆ.

ಅಂಕಗಳ ವ್ಯತ್ಯಾಸವಾದ ಕೆಲ ವಿದ್ಯಾರ್ಥಿಗಳನ್ನು ಮಾತನಾಡಿಸಿದಾಗ ಹಲವು ಆಘಾತಕಾರಿ ವಿಚಾರಗಳು ಹೊರಬಿದ್ದಿವೆ. ಆ ಅಂಶಗಳನ್ನು ನೋಡುವುದಾದರೆ, ಕೊಟ್ಟೂರಿನ ಜಿ.ಎ. ಅಲಿ (ಹೆಸರು ಬದಲಿಸಿದೆ) ಎಂಬ ವಿದ್ಯಾರ್ಥಿ ಜೀವಶಾಸ್ತ್ರ ವಿಷಯದಲ್ಲಿ 14 ಪುಟಗಳ ಉತ್ತರ ಬರೆದು, ಅದನ್ನು ಮುಖಪುಟದಲ್ಲಿ ವಿದ್ಯಾರ್ಥಿ ನಮೂದಿಸಿದ್ದಾನೆ. ಕೊನೆಯ ಪುಟದಲ್ಲಿ ಪರೀಕ್ಷೆ ಕೇಂದ್ರದ ಮೇಲ್ವಿಚಾರಕ ಸಹಿಯೂ ಮಾಡಿದ್ದಾರೆ. ಮೊದಲ ನಾಲ್ಕು ಪುಟಗಳಲ್ಲಿ ಜೀವಶಾಸ್ತ್ರದ ಉತ್ತರ ಬರೆದಿರುವ ವಿದ್ಯಾರ್ಥಿ, ಎರಡು ಪುಟಗಳನ್ನು ಖಾಲಿ ಬಿಟ್ಟು, ನಂತರದ ಎಂಟು ಪುಟಗಳಲ್ಲಿ ಉತ್ತರ ಬರೆದಿದ್ದಾನೆ. ಆದರೆ, ಸಹಾಯಕ ಮೌಲ್ಯಮಾಪಕ ನಾಲ್ಕು ಪುಟಗಳನ್ನಷ್ಟೇ ಮೌಲ್ಯಮಾಪನ ಮಾಡಿ, 21 ಅಂಕ ನೀಡಿ ಮುಕ್ತಾಮಾಡಿದ್ದಾರೆ. ಉಳಿದ 10 ಪುಟಗಳನ್ನು ಕಣ್ಣೆತ್ತಿಯೂ ನೋಡಿಲ್ಲ. ಇದನ್ನು ಉಪ ಮುಖ್ಯ ಮೌಲ್ಯಮಾಪಕರೂ ಪರಿಶೀಲಿಸಿಲ್ಲ. ಕೇವಲ 21 ಅಂಕ ಬಂದಿದ್ದನ್ನು ನೋಡಿ ಗಾಭರಿಯಾದ ಅಲಿ, ಇಲಾಖೆಯಿಂದ ನಕಲು ಉತ್ತರ ಪತ್ರಿಕೆ ತರಿಸಿಕೊಂಡಾಗ ವಿಷಯ ಗೊತ್ತಾಗಿದೆ. ಮರುಮೌಲ್ಯಮಾಪನ ಮಾಡಲು ಕೋರಿದ ನಂತರ ಅವರು ಉತ್ತೀರ್ಣರಾಗಿದ್ದಾರೆ.

ಇನ್ನೊಂದು ಪ್ರಕರಣದಲ್ಲಿ ಚಳ್ಳಕೆರೆಯ ಡಿ. ಸೌಮ್ಯ (ಹೆಸರು ಬದಲಿಸಿದೆ) ಎಂಬವರು ದ್ವಿತೀಯ ಪಿಯುಸಿ ಅರ್ಥಶಾಸ್ತ್ರ ವಿಷಯದ ಪರೀಕ್ಷೆಯಲ್ಲಿ 15 ಪುಟಗಳಷ್ಟು ಉತ್ತರ ಬರೆದಿದ್ದರು. ಆದರೆ ಮೌಲ್ಯಮಾಪಕರು ಕೇವಲ ಎರಡು ಪುಟಗಳನ್ನಷ್ಟೇ ಮೌಲ್ಯಮಾಪನ ಮಾಡಿ 15 ಅಂಕ ನೀಡಿದ್ದಾರೆ. ತಮ್ಮ ಉತ್ತರ ಪತ್ರಿಕೆಯನ್ನು ಸೌಮ್ಯ ಅವರು ಪಡೆದುಕೊಂಡ ವೇಳೆ ಉಳಿದ 13 ಪುಟಗಳಲ್ಲಿದ್ದ ಉತ್ತರವನ್ನು ಮೌಲ್ಯಮಾಪಕರು ಗಮನಿಸಿಯೆ ಇಲ್ಲಎಂಬ ಸಂಗತಿ ಬೆಳಕಿಗೆ ಬಂದಿದೆ. ಮರು ಮೌಲ್ಯಮಾಪನದ ನಂತರ ಸೌಮ್ಯ ಉತ್ತೀರ್ಣರಾಗಿದ್ದಾರೆ.



ವ್ಂತ್ೊಂದ್ಂ ಪ್ರ್ಕ್ರ್ಣವ್ನ್ನ್ ನೋಡುವುದಾದರೆ ಸಾಗರದ ವಿದ್ಯಾರ್ಥಿಯೊಬ್ಬ ಬರೆದಿದ್ದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಅರ್ಥಶಾಸ್ತ್ರ ವಿಷಯದಲ್ಲಿ ಪರೀಕ್ಷ ಮೌಲ್ಯಮಾಪಕರು ಉತ್ತರ ಬರೆದ 9 ಪುಟಗಳ ಮೌಲ್ಯಮಾಪನವನ್ನೇ ಮಾಡದೆ ಇರುವ ವಿಚಿತ್ರ ಘಟನೆ ನಡೆದಿದೆ. ಮೌಲ್ಯಮಾಪಕರು ಮೊದಲ ಆರು ಪುಟಗಳನ್ನಷ್ಟೇ ಮೌಲ್ಯಮಾಪನ ಮಾಡಿ ಕೇವಲ 23 ಅಂಕ ನೀಡಿದ್ದರಿಂದ ವಿದ್ಯಾರ್ಥಿ ಅನುತ್ತೀರ್ಣನಾಗಿದ್ದಾನೆ! ವಿದ್ಯಾರ್ಥಿಯ ಪೋಷಕರು ಉತ್ತರ ಪತ್ರಿಕೆಯ ನಕಲು ಪ್ರತಿ ತರಿಸಿಕೊಂಡ ಹಿನ್ನೆಲೆಯಲ್ಲಿ ಮೌಲ್ಯಮಾಪನ ಕಾರ್ಯ ಅಪೂರ್ಣವಾಗಿರುವುದು ಗಮನಕ್ಕೆ ಬಂದಿದೆ.

ಒಟ್ಟು 58 ಪ್ರಶ್ನೆಗಳಿಗೆ ಆ ವಿದ್ಯಾರ್ಥಿ ಉತ್ತರ ಬರೆದಿದ್ದಾನೆ. ಆದರೆ 9 ಪುಟಗಳ ಮೌಲ್ಯ ಮಾಪನ ಕಾರ್ಯ ಆಗಿಲ್ಲ. ಸುಮಾರು 8 ಪ್ರಶ್ನೆಗಳನ್ನು ಸಹಾಯಕ ಮೌಲ್ಯಮಾಪಕರು ಮೌಲ್ಯಮಾಪನ ಮಾಡಿ, ಸೂಕ್ತ ಅಂಕಗಳನ್ನು ನೀಡಿಲ್ಲ. 4, 6 ಮತ್ತು 5 ಅಂಕಗಳ ಪ್ರಾಜೆಕ್ಟ್ ಅವಲಂಬಿತ 2 ಪ್ರಶ್ನೆಗಳನ್ನು ಮೌಲ್ಯಮಾಪನ ಮಾಡಲಾಗಿಲ್ಲ. ಈ ಪ್ರಶ್ನೆಗಳಿಗೆ ಉತ್ತರಿಸುವ ವಿದ್ಯಾರ್ಥಿ ಸುಮಾರು 30 ಅಂಕಗಳಿಸುವ ಸಾಧ್ಯತೆ ಇತ್ತು. ಇದನ್ನು ಗಮನಿಸಿದ ವಿದ್ಯಾರ್ಥಿ ಉಪನ್ಯಾಸಕರ ಬಳಿ ಚರ್ಚಿಸಿ ಮರು ಮೌಲ್ಯಮಾಪನಕ್ಕೆ ಹಾಕಿದ್ದರಿಂದ ಈಗ ಉತ್ತೀರ್ಣರಾಗಿದ್ದಾರೆ. ಇವು ಕೇವಲ ಮೂರು ಘಟನೆಗಳಷ್ಟೆ, ಈ ರೀತಿಯ ಸಂಕಷ್ಟಗಳನ್ನು ಬಹಳಷ್ಟು ವಿದ್ಯಾರ್ಥಿಗಳು ಎದುರಿಸಿದ್ದಾರೆ. ಮೌಲ್ಯಮಾಪಕರು ಮಾಡಿದ ಎಡವಟ್ಟು ವಿದ್ಯಾರ್ಥಿಗಳನ್ನು ಪೇಚಿಗೆ ಸಿಲುಕಿಸಿದೆ.

ಗುಣಮಟ್ಟದ ಮೌಲ್ಯಮಾಪಕರ ಕೊರತೆ:


ಐವರು ಮೌಲ್ಯಮಾಪಕರ ಕಾರ್ಯವನ್ನು ಉಪ ಮುಖ್ಯ ಮೌಲ್ಯಮಾಪಕರು ಪರಿಶೀಲಿಸುತ್ತಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಅಧಿಕಾರಿಗಳು ತಿಳಿಸುತ್ತಾರೆ. ಹಾಗಾದರೆ ಇವರೂ ಸರಿಯಾಗಿ ಕರ್ತವ್ಯ ನಿರ್ವಹಿಸಲಿಲ್ಲವೇ ಎಂಬ ಅನುಮಾನ ಉಂಟಾಗಿದೆ. ಉಪನ್ಯಾಸಕ ವೃತ್ತಿಯಲ್ಲಿ ಮೂರರಿಂದ ಐದು ವರ್ಷದ ಅನುಭವ ಇರುವ ಸರಕಾರಿ/ ಅನುದಾನಿತ/ ಖಾಸಗಿ ಕಾಲೇಜುಗಳ ಉಪನ್ಯಾಸಕರನ್ನು ಮೌಲ್ಯಮಾಕರನ್ನಾಗಿ ನೇಮಿಸಲಾಗುತ್ತದೆ. ಇದೇ ಈ ಎಡವಟ್ಟಿಗೆ ಕಾರಣ ಎಂಬ ಮಾಹಿತಿಗಳು ಪಿಯು ಮಂಡಳಿಯಲ್ಲಿ ಓಡಾಡುತ್ತಿವೆ. ಖಾಸಗಿ ಕಾಲೇಜಿನ ಉಪನ್ಯಾಸಕರು ತಾವೇ ಬುದ್ದಿವಂತರು ಎಂದು ಪೈಪೋಟಿಗೆ ಬಿದ್ದು ಈ ಎಡವಟ್ಟುಗಳಾಗುತ್ತಿವೆ ಎಂದು ಹೆಸರು ಹೇಳಲು ಇಚ್ಚಿಸದ ಸಹಾಯಕ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಮರು ಮೌಲ್ಯಮಾಪನಕ್ಕೆ ದುಬಾರಿ ಹಣ:

ವಿದ್ಯಾರ್ಥಿಗಳಿಗೆ ಕಡಿಮೆ ಅಂಕ ಬಂದಾಗ ಮರು ಮೌಲ್ಯಮಾಪನಕ್ಕೆ ಅರ್ಜಿ ಹಾಕುವ ಶುಲ್ಕವೂ ದುಬಾರಿ ಇದೆ. ಪ್ರತಿ ವಿಷಯದ ಸ್ಕ್ಯಾನ್ ಪ್ರತಿಗೆ 500 ರೂ ಮತ್ತು ಮರುಮೌಲ್ಯಮಾಪನಕ್ಕೆ 1600 ರೂ ಶುಲ್ಕ ಪಾವತಿಸಬೇಕಿದೆ. ಆರ್ಥಿಕವಾಗಿ ಸ್ಥಿತಿವಂತರಿರುವ ವಿದ್ಯಾರ್ಥಿಗಳು ಮರು ಮೌಲ್ಯಮಾಪನಕ್ಕೆ ಅರ್ಜಿ ಹಾಕುತ್ತಾರೆ. ಇಲ್ಲದವರು ಪೂರಕ ಪರೀಕ್ಷೆಯನ್ನು ಬರೆಯುವ ಸ್ಥಿತಿ ನಿರ್ಮಾಣವಾಗುತ್ತಿದೆ. ಕನಿಷ್ಟ ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿಯನ್ನಾದರೂ ಉಚಿತವಾಗಿ ನೀಡಬೇಕು ಎಂದು ವಿದ್ಯಾರ್ಥಿಗಳು, ಪೋಷಕರು, ವಿದ್ಯಾರ್ಥಿ ಸಂಘಟನೆಗಳು ಆಗ್ರಹಿಸುತ್ತಲೇ ಬಂದಿವೆ. ಪ್ರತಿಬಾರಿಯೂ ಇಂತಹದ್ದೆ ಘಟನೆಗಳು ನಡೆಯುತ್ತಿವೆ. ವಿದ್ಯಾರ್ಥಿಗಳಿಂದ ಶುಲ್ಕ ಪಡೆದ ಇಲಾಖೆಯ ಖಜಾನೆಯನ್ನು ತುಂಬಿಸಿಕೊಳ್ಳಲು ಈ ರೀತಿ ಬೇಕಾಬಿಟ್ಟಿ ಮೌಲ್ಯಮಾಪನ ಮಾಡುತ್ತಾರಾ ಎಂಬ ಅನುಮಾನ ಕಾಡುತ್ತಿದೆ ಎಂದು ಪೋಷಕರ ಸಂಘಟನೆಯ ಹರೀಶ್ ಕುಮಾರ್ ಪ್ರಶ್ನಿಸಿದ್ದಾರೆ.

ನಿಲ್ಲದ ಗೋಳು:

ಕಳೆದ ನಾಲ್ಕು ವರ್ಷಗಳಿಂದ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳಲ್ಲಿ ಐದು ಸಾವಿರ ವಿದ್ಯಾರ್ಥಿಗಳು ಮೌಲ್ಯಮಾಪನದಿಂದ ಸಂಕಷ್ಟ ಎದುರಿಸಿದ್ದಾರೆ ಎಂದು ಸರಕಾರದ ಅಂಕಿ ಅಂಶಗಳೇ ಹೇಳುತ್ತಿವೆ. 2019 ರಲ್ಲಿ, 1,008 ವಿದ್ಯಾರ್ಥಿಗಳು ತಮ್ಮ ಉತ್ತರ ಪತ್ರಿಕೆಗಳಲ್ಲಿ ಕನಿಷ್ಠ ಆರು ಅಂಕಗಳ ಹೆಚ್ಚಳವನ್ನು ಕಂಡಿದ್ದಾರೆ ಮತ್ತು 66 ವಿದ್ಯಾರ್ಥಿಗಳು ಮರುಮೌಲ್ಯಮಾಪನದ ನಂತರ ಆರು ಅಥವಾ ಅದಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿದ್ದಾರೆ. 2020 ರಲ್ಲಿ, ಮರುಮೌಲ್ಯಮಾಪನದ ನಂತರ ಆರು ಅಂಕಗಳಿಗಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ 1,540 ಆಗಿದ್ದರೆ, 124 ವಿದ್ಯಾರ್ಥಿಗಳು ಅಂಕಪಟ್ಟಿಯು ಆರು ಅಥವಾ ಅದಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿದ್ದಾರೆ. 2021 ರಲ್ಲಿ, ಪರೀಕ್ಷೆಯನ್ನು ನಡೆಸದಿದ್ದರೂ ಹಿಂದಿನ ಕಾರ್ಯಕ್ಷಮತೆಯ ಆಧಾರದ ಮೇಲೆ ಅಂಕಗಳನ್ನು ಘೋಷಿಸಿದಾಗ, ಮರುಮೌಲ್ಯಮಾಪನದ ನಂತರ 31 ವಿದ್ಯಾರ್ಥಿಗಳು ಆರು ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದರು ಮತ್ತು ಎಂಟು ವಿದ್ಯಾರ್ಥಿಗಳು ಆರು ಅಥವಾ ಕಡಿಮೆ ಅಂಕಗಳನ್ನು ಪಡೆದಿದ್ದಾರೆ. 2022 ರಲ್ಲಿ ಅಂದಾಜು 2 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು 8 ಕ್ಕಿಂತ ಹೆಚ್ಚಿನ ಅಂಕ ಪಡೆದವರಾಗಿದ್ದಾರೆ.



ಸರಕಾರ ಹಾಗೂ ಪಿಯು ಮಂಡಳಿ ಇನ್ನಾದರೂ ಇಂತಹ ಎಡವಟ್ಟುಗಳನ್ನು ತಪ್ಪಿಸಬೇಕಿದೆ. ನಿರ್ಲಕ್ಷ್ಯ ವಹಿಸಿದ ಉಪನ್ಯಾಸಕರ ಮೇಲೆ ಕ್ರಮ ಜರುಗಿಸಬೇಕಿದೆ. ಮುಂದೆ ಇಂತಹ ಘಟನೆಗಳು ನಡೆಯದಂತೆ ಅನುಭವ ಇರುವ ಮತ್ತು ವಿದ್ಯಾರ್ಥಿ ಸ್ನೇಹಿ ಹೊಂದಿರುವ ಉಪನ್ಯಾಸಕರನ್ನು ಮೌಲ್ಯಮಾಪನಕ್ಕೆ ನೇಮಿಸಬೇಕಿದೆ. ಇಲ್ಲದೆ ಹೋದರೆ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಆಟ ಆಡಿದಂತಾಗುತ್ತಿದೆ. ಆ ನಿಟ್ಟಿನಲ್ಲಿ ಸರಕಾರ ಮತ್ತು ಪಿಯು ಮಂಡಳಿ ಎಚ್ಚರಿಕೆ ವಹಿಸಬೇಕಿದೆ. ●

ಆಗಸ್ಟ್ 1–15: ಸ್ವಾತಂತ್ರ್ಯದ 75ನೇ ವಾರ್ಷಿಕೋತ್ಸವದ ಆಚರಣೆ

ಪುಟ 2 ರಿಂದ

ಘಟನೆಗಳು ಮತ್ತು ಅಲ್ಪಸಂಖ್ಯಾತ ಸಮುದಾಯವನ್ನು ಗುರಿಯಾಗಿಸುವ ಘಟನೆಗಳು ಸಂಭವಿಸುತ್ತಿರುವುದನ್ನು ಕೇಂದ್ರ ಸಮಿತಿ ಖಂಡಿಸುತ್ತದೆ. ದೆಹಲಿ ಮತ್ತು ಇತರ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಬುಲ್ಡೋಜರ್ ರಾಜಕೀಯದ ದೊಡ್ಡ ಪ್ರಮಾಣದ ನಿಯೋಜನೆಯು ಕೋಮು ಧ್ರುವೀಕರಣವನ್ನು ಮತ್ತಷ್ಟು ತೀಕ್ಷ್ಣಗೊಳಿಸಿದೆ. ಆರೆಸ್ಸೆಸ್/ಬಿಜೆಪಿ ನಮ್ಮ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯದ ಅವಶೇಷಗಳ ಮೇಲೆ ಹಿಂದುತ್ವ ರಾಷ್ಟ್ರದ ಉದ್ದೇಶವನ್ನು ಸಾಧಿಸಲಿಕ್ಕಾಗಿ ಜನರಲ್ಲಿ ಹಿಂದುತ್ವ ಪ್ರಜ್ಞೆಯನ್ನು ಮೂಡಿಸುವುದನ್ನು ಕ್ರೋಡೀಕರಿಸಲು ಧ್ರುವೀಕರಣ ಮತ್ತು ಹಿಂಸಾಚಾರಕ್ಕೆ ಕಾರಣವಾಗುವ ದ್ವೇಷ ಮತ್ತು ಭಯೋತ್ಪಾದನೆಯ ವಿಷಕಾರಿ ಪ್ರಚಾರವನ್ನು ಹರಡುತ್ತಿವೆ.

ಹೊಸ ಸಂಸತ್ ಭವನದ ಮೇಲೆ ರಾಷ್ಟ್ರೀಯ ಲಾಂಛನವನ್ನು ಅನಾವರಣಗೊಳಿಸುವ ಸಂದರ್ಭದಲ್ಲಿ ಪ್ರಧಾನಿಯವರು ಹಿಂದೂ ಧಾರ್ಮಿಕ ವಿಧಿವಿಧಾನವನ್ನು ನೆರವೇರಿಸುವುದರೊಂದಿಗೆ ಮತ್ತೊಮ್ಮೆ ಭಾರತೀಯ ಗಣರಾಜ್ಯದ ಸ್ವರೂಪದ ಮೇಲೆ ಪ್ರಹಾರ ಕಾಣಬಂದಿದೆ. ಇದು ಸ್ಪಷ್ಟವಾಗಿ ಭಾರತೀಯ ಪ್ರಭುತ್ವ ಮತ್ತು ಸರ್ಕಾರವನ್ನು ಭಾರತದ ಸಂವಿಧಾನದೊಂದಿಗೆ ಗುರುತಿಸುವ ಬದಲು ಹಿಂದುತ್ವದೊಂದಿಗೆ ಗುರುತಿಸುವ ಕೃತ್ಯ.

ಭಾರತೀಯ ಸಂವಿಧಾನ, ಜಾತ್ಯತೀತ ಪ್ರಜಾಪ್ರಭುತ್ವ ಮತ್ತು ನಮ್ಮ ಜನರ ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಖಾತರಿಯ ರಕ್ಷಣೆಗಾಗಿ ಒಟ್ಟುಗೂಡಬೇಕು ಎಂದು ಎಲ್ಲಾ ಜಾತ್ಯತೀತ ಮನಸ್ಸಿನ ಜನರು ಮತ್ತು ಶಕ್ತಿಗಳಿಗೆ ಕೇಂದ್ರ ಸಮಿತಿ ಮನವಿ ಮಾಡುತ್ತದೆ.

ಕೇರಳದ ಬೆಳವಣಿಗೆಗಳು

ಕೇರಳ ಎಲ್‌ಡಿಎಫ್ ಸರ್ಕಾರವನ್ನು

ಪ್ರತಿಯೊಂದನ್ನೂ ನಿಯಂತ್ರಿಸುವ ಸರಕಾರ ಮತ್ತೇ ಹೊರಬಿತ್ತು ಮೋದಿಯವರ ಎರಡೆಳೆ ನಾಲಿಗೆ

ಚುನಾವಣಾ ಪ್ರಜಾಪ್ರಭುತ್ವವು ಕ್ರಮೇಣವಾಗಿ ಚುನಾವಣಾ ಸರ್ವಾಧಿಕಾರವಾಗಿ ಮಾರ್ಪಡುತ್ತಿದೆ. ಸಂಸತ್ತನ್ನು ಅಗೌರವಿಸುವ ಹಾಗೂ ಪ್ರತಿಪಕ್ಷದ ಕತ್ತು ಹಿಸುಕುವ ನೀತಿಯನ್ನು ಸರಕಾರ ಅನುಸರಿಸುತ್ತಿರುವುದಕ್ಕೆ ಸಂಸತ್ತಿನ ಪ್ರಸಕ್ತ ಮುಂಗಾರು ಅಧಿವೇಶನದ ವಿದ್ಯಮಾನಗಳೇ ಸಾಕ್ಷಿಯಾಗಿವೆ.

— ಪ್ರಕಾಶ್ ಕಾರಟ್ —



ಸರಕಾರವೊಂದು ಹೇಗೆ ಬಲಿಷ್ಠವಾಗಿರಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಈಚೆಗೆ ಹೇಳಿದ್ದಾರೆ. ಜುಲೈ 29 ರಂದು ಚೆನ್ನೈಯಲ್ಲಿ ವಿಶ್ವವಿದ್ಯಾಲಯವೊಂದರ ಘಟಿಕೋತ್ಸವ ಭಾಷಣದಲ್ಲಿ ಅವರು ಹೀಗೆ ಹೇಳಿದ್ದರು: "ಬಲಿಷ್ಠ ಸರಕಾರವೊಂದು ಪ್ರತಿಯೊಂದನ್ನು ಹಾಗೂ ಪ್ರತಿಯೊಬ್ಬರನ್ನು ನಿಯಂತ್ರಿಸುವುದಿಲ್ಲ. ಅದು ಹಸ್ತಕ್ಷೇಪ ಮಾಡಲು ವ್ಯವಸ್ಥೆಯ ನಾಡಿಯನ್ನೇ ನಿಯಂತ್ರಿಸುತ್ತದೆ... ಬಲಿಷ್ಠ ಸರಕಾರವೊಂದು ಪ್ರತಿಯೊಂದು ಕ್ಷೇತ್ರದಲ್ಲೂ ಪ್ರವೇಶಿಸುವುದಿಲ್ಲ". 'ತನಗೆ ಪ್ರತಿಯೊಂದೂ ಗೊತ್ತಿಲ್ಲ ಅಥವಾ ತಾನು ಪ್ರತಿಯೊಂದನ್ನೂ ಮಾಡಲಾರೆ ಎಂದು ವಿನಯದಿಂದ ಒಪ್ಪುವುದರಲ್ಲಿ ಸರಕಾರದ ಬಲ ಅಡಗಿದೆ' ಎಂದೂ ಅವರು ಹೇಳಿದ್ದರು.

ಆಹಾ, ಬಹಳ ಒಳ್ಳೆಯ ಮಾತುಗಳು ಅಲ್ಲವೇ?. ಆದರೆ, ಮೋದಿ ನೇತೃತ್ವದ ಸರಕಾರ ಅವರು ಹೇಳಿದ್ದಕ್ಕೆ ತದ್ವಿರುದ್ಧವಾದುದನ್ನೇ ಮಾಡುತ್ತಿದೆ ಎನ್ನುವುದು ಮಾತ್ರ ಇಲ್ಲಿ ತಪ್ಪಿಹೋಗಿರುವ ಅಂಶವಾಗಿದೆ. ಮೋದಿ ಸರಕಾರ ಪ್ರತಿಯೊಂದನ್ನು ಹಾಗೂ ಪ್ರತಿಯೊಬ್ಬರನ್ನು ನಿಯಂತ್ರಿಸುತ್ತಿದೆ. ಅವರ ಸರಕಾರ ಸಂವಿಧಾನ ಖಾತರಿಪಡಿಸಿರುವ ನಾಗರಿಕ ಹಕ್ಕುಗಳನ್ನು ದಮನಿಸುವುದರಿಂದ ಹಿಡಿದು ಪ್ರತಿಯೊಂದು ಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡುತ್ತಿದೆ.

ವಾಸ್ತವವಾಗಿ, ಸಮಾಜದ ಎಲ್ಲ ವಲಯಗಳನ್ನು ಪೂರ್ಣವಾಗಿ ನಿಯಂತ್ರಿಸುವ ಏಕೈಕ ಧೋರಣೆಯನ್ನು 'ಬಲಿಷ್ಠ ಸರಕಾರದ' ನೀತಿಯಾಗಿ ಅನುಸರಿಸಲಾಗುತ್ತಿದೆ. ಚುನಾವಣಾ ಪ್ರಜಾಪ್ರಭುತ್ವವು ಕ್ರಮೇಣವಾಗಿ ಚುನಾವಣಾ ಸರ್ವಾಧಿಕಾರವಾಗಿ ಮಾರ್ಪಡುತ್ತಿದೆ. ಸಂಸತ್ತನ್ನು ಅಗೌರವಿಸುವ ಹಾಗೂ ಪ್ರತಿಪಕ್ಷದ ಕತ್ತು ಹಿಸುಕುವ ನೀತಿಯನ್ನು ಸರಕಾರ ಅನುಸರಿಸುತ್ತಿರುವುದಕ್ಕೆ ಸಂಸತ್ತಿನ ಪ್ರಸಕ್ತ ಮುಂಗಾರು ಅಧಿವೇಶನದ ವಿದ್ಯಮಾನಗಳೇ ಸಾಕ್ಷಿಯಾಗಿವೆ. ಅಧಿವೇಶನದ ಸಂದರ್ಭ ಪ್ರತಿಪಕ್ಷಗಳ 27 ಸಂಸತ್ ಸದಸ್ಯರನ್ನು ಅಮಾನತು ಮಾಡಲಾಗಿದೆ.



ಜಾರಿ ನಿರ್ದೇಶನಾಲಯ (ಇ.ಡಿ.) ಪ್ರತಿಪಕ್ಷಗಳ ನಾಯಕರನ್ನು ಟಾರ್ಗೆಟ್ ಮಾಡಿ ಅವರನ್ನು ಸುಳ್ಳು ಪ್ರಕರಣಗಳಲ್ಲಿ ಸಿಲುಕಿಸುವ ರಾಜಕೀಯ ಸಾಧನವಾಗಿದೆ. ಇ.ಡಿ. ಲಂಗುಲಗಾಮಿಲ್ಲದೆ ವರ್ತಿಸುವ ಇಡಿ ವರ್ತನೆ ಕಳೆದ ವಾರ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ನಂತರ ಇನ್ನಷ್ಟು ಬಿರುಸು ಪಡೆಯಲಿದೆ. ನಗದು ವರ್ಗಾವಣೆ ತಡೆ ಕಾನೂನು (ಪಿಎಂಎಲ್‌ಎ) ಅನ್ವಯ ಇ.ಡಿ. ಹೊಂದಿರುವ ಕರಾಳ ಅಧಿಕಾರಗಳನ್ನು ಸುಪ್ರೀಂ ತೀರ್ಪು ಕಾನೂನುಬದ್ಧಗೊಳಿಸಿದೆ. ಏಕಪಕ್ಷೀಯ ಬಂಧನ, ಜಾಮೀನಿಲ್ಲದೆ ಬಂಧನದಲ್ಲಿಟ್ಟು ಕೊಳ್ಳುವುದು ಮತ್ತು ಆಸ್ತಿಪಾಸ್ತಿ ಮುಟ್ಟುಗೋಲು ಹಾಕಿಕೊಳ್ಳುವುದು ಈಗ ಸಾಮಾನ್ಯವಾಗಿ ಬಿಟ್ಟಿದೆ.

ಪ್ರತಿಪಕ್ಷಗಳು ಹಾಗೂ ಭಿನ್ನಾಭಿಪ್ರಾಯಗಳನ್ನು ದಮನಿಸಲು ಮತ್ತು ನಾಗರಿಕ ಸಮಾಜವನ್ನು ಪಳಗಿಸಲು ಕಾನೂನಾತ್ಮಕ ಸಾಧನಗಳನ್ನು ಬಳಸುವ ಪ್ರವೃತ್ತಿಯ ಭಾಗವಾಗಿ ಯುಎಪಿಎ, ಎನ್‌ಎಸ್‌ಎ ಮತ್ತು ಇತರ 'ರಾಷ್ಟ್ರೀಯ ಭದ್ರತಾ' ಕಾನೂನುಗಳನ್ನು ಬಳಸುವುದು ಹೆಚ್ಚಾಗುತ್ತಿದೆ. ಜೀವನ ಮತ್ತು ಸ್ವಾತಂತ್ರ್ಯದ ಹಕ್ಕುಗಳನ್ನು ತುಳಿಯಲಾಗುತ್ತಿರುವುದನ್ನು ಗುರುತಿಸಲು ಕೂಡ ಉನ್ನತ ನ್ಯಾಯಾಂಗವು ತಿರಸ್ಕರಿಸುತ್ತಿದೆ.

ಕಾನೂನು ತಿದ್ದುಪಡಿಯನ್ವಯ ಮತದಾರರ ಗುರುತು ಚೀಟಿಯನ್ನು ಆಧಾರ್‌ನೊಂದಿಗೆ ಜೋಡಿಸುವ ಪ್ರಕ್ರಿಯೆ ಆಗಸ್ಟ್ 1 ರಂದು ಆರಂಭವಾಗಿದೆ. 2021ರ ಚಳಿಗಾಲದ ಅಧಿವೇಶನದಲ್ಲಿ ಈ ತಿದ್ದುಪಡಿ ವಿಧೇಯಕವನ್ನು ಯಾವುದೇ ಸೂಕ್ತ ಪರಿಶೀಲನೆ ಅಥವಾ ಚರ್ಚೆಯಿಲ್ಲದೆ ಅಂಗೀಕರಿಸಲಾಗಿತ್ತು. ಆಧಾರ್‌ನೊಂದಿಗೆ ವೋಟರ್ ಐಡಿ ಲಿಂಕ್ ಮಾಡುವುದು ಸ್ವಯಂಪ್ರೇರಿತ ಎಂದು ಹೇಳಲಾಗುತ್ತಿದ್ದರೂ ಹಾಗೆ ಮಾಡಲು ವಿಫಲರಾದರೆ ಮತದಾರರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕುವ ಅಪಾಯವಿದೆ. 'ಮತದಾರರ ಗುರುತನ್ನು ಸಾಬೀತುಪಡಿಸುವ ಹಾಗೂ ಮತದಾರರ ಪಟ್ಟಿಯಲ್ಲಿನ ಎಂಟ್ರಿಗಳನ್ನು ದೃಢೀಕರಿಸುವುದು' ಲಿಂಕ್ ಮಾಡುವ ಉದ್ದೇಶವಾಗಿರುವುದರಿಂದ ಹೀಗಾಗುವ ಅಪಾಯ ಎದುರಾಗಿದೆ. ನಕಲಿ ವೋಟರ್ ಐಡಿಗಳನ್ನು ತೆಗೆದು ಹಾಕುವುದು ಆಧಾರ್ ಜೋಡಣೆಯ ಉದ್ದೇಶವಾಗಿರುವುದರಿಂದ ಈ ಪ್ರಕ್ರಿಯೆ ಮೂಲಕ ದೊಡ್ಡ ಪ್ರಮಾಣದಲ್ಲಿ ನ್ಯಾಯಸಮ್ಮತ ಮತದಾರರನ್ನು ತೆಗೆದು ಹಾಕಬಹುದೆಂಬ ಗಂಭೀರ ಅನುಮಾನ ವ್ಯಕ್ತವಾಗಿದೆ. ಒಬ್ಬರು ಹೊಂದಿರುವ ಒಂದಕ್ಕಿಂತ ಹೆಚ್ಚು ವೋಟರ್ ಐಡಿ ಕಾರ್ಡ್‌ಗಳನ್ನು ತೆಗೆದುಹಾಕಲು ತೆಲಂಗಾಣದಲ್ಲಿ ನಡೆಸಿದ ಯೋಜನೆಯಿಂದ 10.26 ಲಕ್ಷ ವೋಟರ್ ಐಡಿ ಕಾರ್ಡ್‌ಗಳನ್ನು ತೆಗೆದು ಹಾಕಲಾಗಿದೆ. ಆ ಪೈಕಿ ಎಷ್ಟು ನ್ಯಾಯಸಮ್ಮತ ಮತದಾರರಿದ್ದಾರೆ ಎನ್ನುವುದನ್ನು ಇನ್ನೂ ಪರಿಶೀಲಿಸಬೇಕಷ್ಟೇ.

ಆಧಾರ್ ಜೋಡಣೆಯ ಮೂಲಕ ಲಭ್ಯವಾಗುವ ದತ್ತಾಂಶದ (ಡೇಟಾ) ಗೋಪ್ಯತೆ ಕಾಯ್ದುಕೊಳ್ಳುವ ಬಗ್ಗೆ ಯಾವುದೇ ಖಾತರಿ ಇಲ್ಲದಿರುವುದರಿಂದ ಆಧಾರ್ ಲಿಂಕೇಜ್ ಪ್ರಕ್ರಿಯೆಯು ವೋಟರ್ ಪ್ರೊಫೈಲಿಂಗ್ ಮತ್ತು ಮತದಾರರ ಆದ್ಯತೆಗಳ ಮೇಲೆ ನಿಗಾ ಇಡಲು ಆಧಾರವಾಗುವ ಸಾಧ್ಯತೆಯಿದೆ.

ಅನು: ವಿಶ್ವ

ಹೇಳುವುದು ಒಂದು ಮಾಡುವುದು ಇನ್ನೊಂದು...

ಪ್ರಧಾನ ಮಂತ್ರಿ ಹೇಳುವುದೇ ಒಂದು ಮಾಡುವುದೇ ಇನ್ನೊಂದು. ಅಂದರೆ ಹೇಳುವುದಕ್ಕೆ ತದ್ವಿರುದ್ಧ ಮಾಡುವ ಅವರ ಪ್ರವೃತ್ತಿ ಎಲ್ಲರಿಗೂ ಗೊತ್ತಿರುವುದೇ. ಆದ್ದರಿಂದ ಅವರ ಚೆನ್ನೈ ಹೇಳಿಕೆಯ ನಿಜ ಅರ್ಥ ಏನೆಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಅವರ ಹೇಳಿಕೆಯ ನಿಜಾರ್ಥ ಏನೆಂಬುದನ್ನು ಅರಿಯಬೇಕಾಗುತ್ತದೆ. ಉದಾಹರಣೆಗೆ, ಜುಲೈ 25 ರಂದು ಮೋದಿ ಮಾಡಿದ ಭಾಷಣವೊಂದನ್ನು ಗಮನಿಸೋಣ. 'ಸಮಾಜ ಮತ್ತು ದೇಶದ ಒಳಿತಿಗಿಂತ ಸೈದ್ಧಾಂತಿಕ ಹಾಗೂ ರಾಜಕೀಯ ಹಿತಾಸಕ್ತಿಗೆ ಆದ್ಯತೆ ನೀಡುವ ಅಭ್ಯಾಸ ಬಿಡಿ' ಎಂದು ಅವರು ಆ ಭಾಷಣದಲ್ಲಿ ಪ್ರತಿಪಕ್ಷಗಳಿಗೆ ಕರೆ ನೀಡಿದ್ದರು. 'ಸಿದ್ಧಾಂತ ಮತ್ತು ರಾಜಕೀಯ ಆಶೋತ್ತರಗಳು ಇದ್ದೇ ಇರುತ್ತವೆ. ಆದರೆ, ದೇಶ ಮತ್ತು ಸಮಾಜವೇ ಮೊದಲಿಗೆ ಬರುತ್ತದೆ' ಎಂದವರು ಟಿಪ್ಪಣಿಸಿದ್ದರು. ಅವರು ಹೇಳಿರುವುದರ ನಿಜವಾದ ಹೂರಣ ಏನೆಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಹಿಂದುತ್ವವೊಂದೇ ದೇಶದ ಹಿತಾಸಕ್ತಿಗೆ ಪೂರಕವಾದ ಸಿದ್ಧಾಂತ ಹಾಗೂ ರಾಜಕೀಯವಾಗಿದೆ. ಇತರ ಯಾವುದೇ ಸಿದ್ಧಾಂತಗಳು ರಾಷ್ಟ್ರ ಹಾಗೂ ಸಮಾಜದ ಹಿತಕ್ಕೆ ಪೂರಕವಲ್ಲ ಎನ್ನುವುದು ಅವರ ಮಾತಿನ ಮರ್ಮವಾಗಿದೆ.

ಈ ಧೋರಣೆಯೊಂದಿಗೆ ಕೇಂದ್ರ ಹಾಗೂ ರಾಜ್ಯಗಳಲ್ಲಿರುವ ಬಿಜೆಪಿ ಸರಕಾರಗಳು ಹಿಂದೂತ್ವವನ್ನು ಅಧಿಕೃತ ಸಿದ್ಧಾಂತವಾಗಿ ಪ್ರತಿಷ್ಠಾಪಿಸಲು ಪ್ರಯತ್ನಿಸುತ್ತಿವೆ. ಶಿಕ್ಷಣ ವ್ಯವಸ್ಥೆ ಹಾಗೂ ಪಠ್ಯ ಕ್ರಮವನ್ನು ಹಿಂದುತ್ವದನ್ವಯ ಪುನರ್‌ರೂಪಿಸುವುದು ಅದರಲ್ಲಿ ಒಳಗೊಂಡಿದೆ. ಇತಿಹಾಸ ಮತ್ತು ಪಠ್ಯಪುಸ್ತಕಗಳನ್ನು ಮರು ಬರೆಯುವ ಪ್ರಕ್ರಿಯೆ ಭರದಿಂದ ಸಾಗಿದೆ.

ಶಿಕ್ಷಣ ಮತ್ತು ಸಂಸ್ಕೃತಿ ಸಹಿತ ಎಲ್ಲ ರಂಗಳಲ್ಲಿ ನಿಯಂತ್ರಣ ಸಾಧಿಸುವುದನ್ನು ಬಯಸುವ ಬಲಿಷ್ಠ ಸರಕಾರ ಇದಾಗಿದೆ. ಆದ್ದರಿಂದ, ಮೋದಿಯ ಮಾತುಗಳಲ್ಲಿ ಅಡಗಿರುವ ಇಬ್ಬಗೆಯ ಅರ್ಥ ಹಾಗೂ ಮಾತಿನ ಆಕರ್ಷಣೆಯ ರೀತಿಯನ್ನು ನಾವು ಗಮನಿಸಬೇಕಾಗುತ್ತದೆ.

➘ ಅಸ್ಥಿರಗೊಳಿಸಲು ಕೇಂದ್ರೀಯ ಸಂಸ್ಥೆಗಳನ್ನು ಬಲವಾಗಿ ದುರುಪಯೋಗ ಪಡಿಸಿಕೊಳ್ಳಲು ತೀವ್ರ ಪ್ರಯತ್ನಗಳನ್ನು ನಡೆಸುತ್ತಿರುವುದನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸಿದೆ. ರಾಜ್ಯದಲ್ಲಿ ಎಲ್‌ಡಿಎಫ್ ಸರ್ಕಾರ ಮತ್ತು ಮುಖ್ಯಮಂತ್ರಿಗಳ ವಿರುದ್ಧ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಚಳುವಳಿಗಳ ಸರಣಿಯನ್ನು ಆರಂಭಿಸಿದೆ. ಎಲ್‌ಡಿಎಫ್ ಸರ್ಕಾರದ ವಿರುದ್ಧ ಬಿಜೆಪಿ ಜತೆಗೂಡಿ ಅದು ಕಾರ್ಯನಿರ್ವಹಿಸುತ್ತಿದೆ.

ಕೇಂದ್ರದ ಕೂಡು ಆದಾಯದಲ್ಲಿ ಕೇರಳಕ್ಕೆ ಸಲ್ಲಬೇಕಾದ ಕಾನೂನುಬದ್ಧ ಪಾಲನ್ನು ನಿರಾಕರಿಸುವಲ್ಲಿ ಕೇಂದ್ರ ಸರ್ಕಾರವು ಬಳಸಿದ ತಾರತಮ್ಯದ ನೀತಿಗಳು ಮತ್ತು ತಂತ್ರಗಳನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸುತ್ತದೆ. ಇದು ತೀವ್ರ ಸಂಪನ್ಮೂಲ ಬಿಕ್ಕಟ್ಟನ್ನು ಹೇರುತ್ತದೆ. ಕೇರಳ ಎಲ್‌ಡಿಎಫ್ ಸರ್ಕಾರ ಮತ್ತು ಅದರ ಪರ್ಯಾಯ ಜನಪರ ನೀತಿಗಳ ರಕ್ಷಣೆಗಾಗಿ ಮತ್ತು ಎಲ್‌ಡಿಎಫ್ ಸರ್ಕಾರವನ್ನು ಅಸ್ಥಿರಗೊಳಿಸುವ ಉದ್ದೇಶದಿಂದ ಕೇಂದ್ರದ ಹಸ್ತಕ್ಷೇಪವನ್ನು ಖಂಡಿಸಲು ಮತ್ತು ತಾರತಮ್ಯವನ್ನು ಖಂಡಿಸಲು ರಾಷ್ಟ್ರವ್ಯಾಪಿ ಅಭಿಯಾನವನ್ನು ನಡೆಸಲು ಕೇಂದ್ರ ಸಮಿತಿ ನಿರ್ಧರಿಸಿದೆ.

ತ್ರಿಪುರಾ ಬೆಳವಣಿಗೆಗಳು

ಬಿಜೆಪಿಯು ತನ್ನ ರಾಜ್ಯ ಸರ್ಕಾರ ಒಟ್ಟಾರೆಯಾಗಿ ಜನರ ವಿರುದ್ಧ ಮತ್ತು ವಿಶೇಷವಾಗಿ ತ್ರಿಪುರಾದಲ್ಲಿ ಸಿಪಿಐ(ಎಂ) ಮತ್ತು ಅದರ ಕಾರ್ಯಕರ್ತರ ವಿರುದ್ಧ ನಡೆಸಿದ ಫ್ಯಾಸಿಸ್ಟ್ ತೆರನ ದಾಳಿಗಳನ್ನು ಕೇಂದ್ರ ಸಮಿತಿ ಖಂಡಿಸಿದೆ. ಇನ್ನು ಕೆಲವೇ ತಿಂಗಳಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಬಿಜೆಪಿ ರಾಜ್ಯದ ಮುಖ್ಯಮಂತ್ರಿಯನ್ನು ಬದಲಾಯಿಸಿದ್ದು, ರಾಜಕೀಯ ಚಟುವಟಿಕೆಗಳಲ್ಲಿ ಜನರು ಭಾಗವಹಿಸದಂತೆ ಭಯೋತ್ಪಾದನೆ ಮತ್ತು ಭೀತಿಯ ವಾತಾವರಣವನ್ನು ಹೆಚ್ಚಿಸಿದೆ. ಬಿಜೆಪಿ ಸರ್ಕಾರ ಮತ್ತು ಅದರ ಭಯೋತ್ಪಾದನೆ ಮತ್ತು ಕೋಮು ಧ್ರುವೀಕರಣದ ರಾಜಕೀಯದ ವಿರುದ್ಧ ಜಾತ್ಯತೀತ ಶಕ್ತಿಗಳ ಅತಿದೊಡ್ಡ ಅಣಿನೆರಿಕೆಯನ್ನು ರೂಪಿಸಲು ಸಿಪಿಐ(ಎಂ) ನಿರ್ಧರಿಸಿದೆ.

ಬಂಗಾಳದ ಬೆಳವಣಿಗೆಗಳು

ಶಿಕ್ಷಕರ ನೇಮಕಾತಿ ಹಗರಣದಲ್ಲಿ ಪಶ್ಚಿಮ ಬಂಗಾಳದ ರಾಜ್ಯ ಸರ್ಕಾರದಲ್ಲಿ ಟಿಎಂಸಿ ಯ ಪ್ರಬಲ ವ್ಯಕ್ತಿ ಮತ್ತು ಸಚಿವ, ಪಾರ್ಥ ಚಟರ್ಜಿಯ ಬಂಧನವು ಭಯೋತ್ಪಾದನೆ ಮತ್ತು ಹಿಂಸಾಚಾರದ ರಾಜಕೀಯದೊಂದಿಗೆ ಟಿಎಂಸಿ ಸರ್ಕಾರದ ಅಡಿಯಲ್ಲಿ ಆಳವಾಗಿ ಬೇರೂರಿರುವ ಭ್ರಷ್ಟಾಚಾರದ ಬಗ್ಗೆ ಸಿಪಿಐ(ಎಂ)ನ ನಿಲುವನ್ನು ಪ್ರತಿಧ್ವನಿಸುತ್ತದೆ. ಬಂಧನದ ಹಿನ್ನೆಲೆಯಲ್ಲಿ ಸಚಿವರನ್ನು ವಜಾಗೊಳಿಸಿರುವುದು ಟಿಎಂಸಿ ಸರ್ಕಾರದ ಜನವಿರೋಧಿ, ಪ್ರಜಾಪ್ರಭುತ್ವ ವಿರೋಧಿ ಸ್ವಭಾವವನ್ನು ಮತ್ತೊಮ್ಮೆ ಸಾಬೀತುಪಡಿಸುತ್ತದೆ. ಹಿಂದಿನ ನಾರದ, ಶಾರದ ಮತ್ತು ಇತರ ಚಿಟ್ ಫಂಡ್ ಹಗರಣಗಳ ವಿಚಾರಣೆಯಲ್ಲಿ ಬಿಜೆಪಿ ಸರ್ಕಾರದ ಅಡಿಯಲ್ಲಿ ಕೇಂದ್ರ ಏಜೆನ್ಸಿಗಳು ಮುಂದುವರೆಯದೆ ಅವು ಹಾಗೆಯೇ ಉಳಿದುಕೊಂಡಿವೆ.

ರಾಜ್ಯದಲ್ಲಿ ಸಿಪಿಐ(ಎಂ) ಮತ್ತು ಎಡರಂಗವು ಸಾಕಷ್ಟು ಜನಬೆಂಬಲವನ್ನು ಪಡೆಯುತ್ತಿದ್ದು ಸರ್ಕಾರದ ವಿರುದ್ಧ ದೊಡ್ಡ ಮಟ್ಟದ ಪ್ರತಿಭಟನೆಗಳನ್ನು ಆಯೋಜಿಸಿದೆ. ●

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ಸಮಾನತೆ ಮತ್ತು ಸೌಹಾರ್ದತೆಗಾಗಿ ಮಹಿಳಾ ಆಂದೋಲನ – ಸಮ್ಮೇಳನದ ಸಂಕಲ್ಪ



ಹಂದೆಯಲ್ಲ ನಾನು, ಹರುಷದ ಧೈರ್ಯಯುಳ್ಳ ಹೆಣ್ಣು ನಾನು.
ಕಾಮವನಳಿದವಳಾನಾದ ಕಾರಣ ಬಸವನ ಹಂಗೆನಗಿಲ್ಲವಯ್ಯ.
ಭ್ರಮೆಯಡಗಿ ಕಲೆನಷ್ಟವಾಗಿ ಮುಖವರಿತು ಮನವಿಚಾರವ ಕಂಡೆನಯ್ಯ ಸಂಗಯ್ಯ.

ಬಸವಣ್ಣನವರ ವಿಚಾರಪತ್ನಿ ತಾನು ಎಂದು ಹೇಳಿಕೊಂಡಿರುವ ನೀಲಾಂಬಿಕೆಯ ವಚನವಿದು. ಹಂದೆಯೆಂದರೆ ಹೇಡಿ ಎಂದರ್ಥ. ಇಲ್ಲಿ ನೀಲಾಂಬಿಕೆಯು ತುಂಬಾ ಸ್ಪಷ್ಟವಾಗಿ ತಾನು ಹೇಡಿಯಲ್ಲ ಹರುಷದ ಧೈರ್ಯಯುಳ್ಳ ಹೆಣ್ಣು ಎಂದು ಹೇಳಿಕೊಳ್ಳುವಲ್ಲಿ ಅದೆಷ್ಟು ಸ್ವಾಭಿಮಾನ ಮೆರೆದಿದ್ದಾಳೆ ಎಂದರೆ ಇಂದಿನ ಸ್ತ್ರೀವಾದಿಗಳಿಗೆ ಅದೊಂದು ಘೋಷವಾಕ್ಯವಾಗಬಹುದಾದ ನೆಲೆಯಲ್ಲಿ ಸುಮಾರು 900 ವರ್ಷಗಳ ಹಿಂದೆ ಮಾತಾಡಿದ್ದಾಳೆ. ಜನವಾದಿ ಮಹಿಳಾ ಸಂಘಟನೆಯು ತನ್ನ ಆರಂಭಿಕ ಕಾಲಘಟ್ಟದಿಂದಲೂ ಇದೇ ದೃಷ್ಟಿಕೋನವನ್ನು ಹೊಂದಿದ್ದು 40 ಸಂವತ್ಸರಗಳನ್ನು ಪೂರೈಸಿ ಮುಂದಡಿಯಿಡುತ್ತಿದೆ. ಪ್ರಜಾಸತ್ತಾತ್ಮಕ ಮೌಲ್ಯಗಳೊಂದಿಗೆ ಕ್ರಮಿಸುತ್ತಿರುವ ಸಂಘಟನೆಯು ಪ್ರತಿ ಮೂರು ವರ್ಷಕ್ಕೊಮ್ಮೆ ಘಟಕ ಮಟ್ಟದಿಂದ ರಾಷ್ಟ್ರ ಮಟ್ಟದವರೆಗೆ ಸಮ್ಮೇಳನಗಳನ್ನು ನಡೆಸಿ ಅಲ್ಲಿ ಹೊಸ ಸಮಿತಿಯನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಇದು ನಮ್ಮ ಸಂಘಟನೆಯ ವೈಜ್ಞಾನಿಕ ಸಮಯೋಚಿತ ಕಾರ್ಯವೈಖರಿ. ಈ ಹಿನ್ನೆಲೆಯಲ್ಲಿ ಜನವಾದಿ ಹತ್ತು ರಾಜ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ಪೂರೈಸಿ ಹನ್ನೊಂದನೇ ಸಮ್ಮೇಳನವನ್ನು ಆಗಸ್ಟ್ 1 ರಿಂದ 3, 2022 ರವರೆಗೆ ಶರಣ–ಸೂಫಿ–ಸಂತರ ನಾಡಾದ ಕಲಬುರಗಿಯಲ್ಲಿ ಜರುಗಿಸಿತು. ಮೇಲಿನ ನೀಲಾಂಬಿಕೆಯ ವಚನದ ಮೊದಲ ಸಾಲಿನ ಹಿನ್ನೆಲೆಯಲ್ಲಿ "ಮಹಿಳಾ ಸಮಾನತೆ ದೇಶದ ಐಕ್ಯತೆಯತ್ತ–ಸ್ಪಷ್ಟ ನೋಟ ದಿಟ್ಟ ಹೆಜ್ಜೆ" ಎಂಬ ಘೋಷವಾಕ್ಯದೊಂದಿಗೆ ಸಮ್ಮೇಳನ ಕ್ರಿಯಾಶೀಲತೆಯೊಂದಿಗೆ ಪಾರಂಭವಾಯಿತು.

ಸರಣಿ ಉಪನ್ಯಾಸ

ಸಮ್ಮೇಳನದ ಪೂರ್ವಭಾವಿಯಾಗಿ "ಲಿಂಗಸಮಾನತೆ–ಕರೋನಾ ಕಾಲದ ಬಿಕ್ಕಟ್ಟುಗಳು" ಎಂಬ ವಿಷಯವಿಟ್ಟುಕೊಂಡು ನಗರದ 3 ಕಾಲೇಜುಗಳಲ್ಲಿ ಸರಣಿ ಉಪನ್ಯಾಸ ನಡೆಸಿತು.

"ಭಾವೈಕ್ಯತೆಗಾಗಿ ಯುವತಿಯರ ಬೈಕ್ ರ್‍ಯಾಲಿ"

ಸಮ್ಮೇಳನದ ಮುನ್ನಾದಿನ ದಿನಾಂಕ 31–7–2022ರಂದು "ಭಾವೈಕ್ಯತೆಗಾಗಿ ಯುವತಿಯರ ಬೈಕ್ ರ್‍ಯಾಲಿ" ಹಮ್ಮಿಕೊಳ್ಳಲಾಗಿತ್ತು. ಸುಮಾರು 40 ಬೈಕ್ ಸವಾರರು ಜಗತ್ ವೃತ್ತದಿಂದ ಬೈಕ್ ಗಳಿಗೆ, ಕಾರುಗಳಿಗೆ ಜನವಾದಿಯ ಸ್ಟಿಕರ್ ಅಂಟಿಸಿದರು. ಇನ್ನೊಂದೆಡೆ ಬಾವುಟ ಕಟ್ಟಿ ಸಂಭ್ರಮಿಸಿದರು. ಅಕ್ಷರಶಃ ಹಬ್ಬದ ವಾತಾವರಣ ಅಲ್ಲಿತ್ತು. ಗೋದುತಾಯಿ ಕಾಲೇಜಿನ ಪ್ರಾಚಾರ್ಯೆ ಡಾ.ನೀಲಾಂಬಿಕಾ ಪೊಲೀಸ್ ಪಾಟೀಲ, ಬೀಬೀ ರಜಾ ಕಾಲೇಜಿನ ಪ್ರಾಚಾರ್ಯೆ ಡಾ.ಜೇಬಾ ಪರವೀನ್ ಹಾಗೂ ಪಿಲ್ಲೂ ಇರಾಣಿ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಡಾ.ಸೀತಾ ಮತ್ತು ನಿವೃತ್ತ ಶಿಕ್ಷಕಿ ಸುಶೀಲಾ ಕಟ್ಟೆಯವರು ಜನವಾದಿಯ ಬಾವುಟಗಳನ್ನು ಹಾರಾಡಿಸುವದರೊಂದಿಗೆ ರ್‍ಯಾಲಿಗೆ ಚಾಲನೆ ನೀಡಿದರು. ಮಹಿಳಾಪರ ಘೋಷಣೆಗಳು ದಾರಿಹೋಕರನ್ನು ಸೆಳೆದು ಹುಬ್ಬೇರಿಸುವಂತೆ ಮಾಡಿದವು. "ಲಿಂಗ ಸಮಾನತೆ ನಮ್ಮ ಹಕ್ಕು; ಭಿಕ್ಷೆಯಲ್ಲ", "ಹಿಂದೂ ಮುಸ್ಲಿಂ ಸಿಖ್ ಇಸಾಯಿ ಹಮ್ ಸಬ್ ಭಾಯಿ ಬೆಹನಾ" ಇತ್ಯಾದಿ ಘೋಷಣೆಗಳು ಜಾತಿ, ಧರ್ಮಗಳ ಹೆಸರಲ್ಲಿ ದೇಶ ಒಡೆಯಲು ಹೊರಟಿರುವವರಲ್ಲಿ ನಡುಕ ಹುಟ್ಟಿಸಿದ್ದು ಸುಳ್ಳಲ್ಲ.

ರ್‍ಯಾಲಿ 14ನೇ ಶತಮಾನದ ಸೂಫಿ ಸಂತ ಗೇಸುದರಾಜ ಖ್ವಾಜಾ ಬಂದೇನವಾಜ್ ದರ್ಗಾದತ್ತ ಘೋಷಣೆಗಳೊಂದಿಗೆ ಚಲಿಸಿತು. ಸಂಘಟನೆಯ ಮುಖಂಡರಾದ ನೀಲಾ, ಮೀನಾಕ್ಷಿ ಬಾಳಿ, ಕೆ.ಎಸ್.ಲಕ್ಷ್ಮೀ, ದೇವಿ, ಮೀನಾ ಬೋರಾಳಕರ್, ಕಲಬುರಗಿ ಜಿಲ್ಲಾ ಅಧ್ಯಕ್ಷರಾದ ಚಂದಮ್ಮ ಗೋಳಾ ಹಾಗೂ ಕಾರ್ಯದರ್ಶಿಗಳಾದ ಪದ್ಮಿನಿ ಕಿರಣಗಿ ಮುಂತಾದವರು ರ್‍ಯಾಲಿಯನ್ನು ಮುನ್ನಡೆಸಿದರು. ದರ್ಗಾದಲ್ಲಿ ಇಸ್ಲಾಂ ಬಾಂಧವರು ಇದಿರುಗೊಂಡು ಗುಲಾಬಿ ಹೂಗಳೊಂದಿಗೆ ಸ್ವಾಗತಿಸಿ. ಯುವತಿಯರ ದಂಡು ಸಮರ ಧೀರ ನಡೆಯೊಂದಿಗೆ ನಾಡಿಗೆ ಏಕತೆಯ ಸಂದೇಶ ರವಾನಿಸಿದರು.

ಅಲ್ಲಿಂದ ರ್‍ಯಾಲಿ ಸೇಂಟ್ ಮೇರಿ ಚರ್ಚನತ್ತ ತೆರಳಿದವು. ದಾರಿಯುದ್ದಕ್ಕೂ ಯುವ ಮುಖಂಡರಾದ ಪ್ರಕೃತಿ, ಲವಿತ್ರ, ಪರವಿನ್, ಸಿಸ್ಟರ್ ಶೋಭಾ ಮುಂತಾದವರ ಸೌಹಾರ್ದ ಘೋಷಣೆಗಳು ಮೊಳಗಿದವು. ಚರ್ಚನಲ್ಲಿ ಫಾದರ್ ಸಂತೋಷ ಮತ್ತು ಇತರರು ಮಹಿಳಾ ಪಡೆಯನ್ನು ಇದಿರುಗೊಂಡು

> ದೇಶ ಇಂದು ಎರಡು ಸುನಾಮಿಗಳಿಂದ ತತ್ತರಿಸಿ ಹೋಗಿದೆ. ಒಂದು ಮಾರಣಾಂತಿಕ ಬೆಲೆ ಏರಿಕೆ ಇನ್ನೊಂದು ವಿಷಾನಿಲವಾಗಿ ಹಬ್ಬುತ್ತಿರುವ ಕೋಮು ದ್ವೇಷ. ಇವೆರಡೂ ದೇಶದ ಘನತೆ ಮತ್ತು ಏಕತೆಯನ್ನು ಸರ್ವನಾಶ ಮಾಡುತ್ತಿವೆ. ರಾಜ್ಯ ಮತ್ತು ಕೇಂದ್ರದಲ್ಲಿರುವ ಬಿಜೆಪಿ ಸರಕಾರಗಳು ದ್ವೇಷ ರಾಜಕಾರಣ ಮಾಡುವುದನ್ನೆ ಉದ್ಯೋಗವಾಗಿಸಿಕೊಂಡಿವೆ. ಉದ್ಯೋಗಖಾತ್ರಿ ಕಾಯ್ದೆಯ ಅನುಷ್ಠಾನಕ್ಕೆ ಹಣ ನೀಡದ ಸರಕಾರ 17 ಲಕ್ಷ ಕೋಟಿ ಅಂಬಾನಿ, ಅದಾನಿಗಳ ಸಾಲ ಮನ್ನಾ ಮಾಡುತ್ತದೆ. ಇದು ನೀಚತನದ ಪರಮಾವಧಿ.
>
> — ಡಾ.ಮೀನಾಕ್ಷಿ ಬಾಳಿ —

ಸ್ವಾಗತಿಸಿದರಲ್ಲದೆ ಕುಡಿಯಲು ತಂಪಾದ ನೀರು ಕೊಟ್ಟು, ಭಾವೈಕ್ಯತೆಯ ಸಂದೇಶ ನೀಡಿ ಪರಸ್ಪರ ಕೂಡಿ ಬಾಳುವ ಸುಖವನ್ನು ವಿವರಿಸಿದರು. ನಂತರ ಮಹಿಳೆಯರಿಗೆಂದೆ ವಿಶೇಷವಾಗಿ ತಯಾರಿಸಿದ ಕೇಕ್ ಕತ್ತರಿಸಿ ಎಲ್ಲರಿಗೂ ಹಂಚಿದರು. ಯುವತಿಯರ ಸಂಭ್ರಮ ಮೇರೆ ಮೀರಿತ್ತು. ಇವು ಕೇವಲ ಬಳೆ ತೊಟ್ಟ ಕೈಗಳು ಮಾತ್ರವಲ್ಲ ವಿಮಾನದ ಚಾಲನೆ ಮಾಡಬಲ್ಲವು. ಮತ್ತೂ ಮುಂದುವರೆದು ದೇಶದ ಚುಕ್ಕಾಣಿಯನ್ನೂ ಹಿಡಿಯಬಲ್ಲವು ಎಂಬುದನ್ನು ತಮ್ಮ ನಡೆಗಳಿಂದಲೆ ತೋರಿಸಿಕೊಟ್ಟರು.

ಕೊನೆಯದಾಗಿ 18ನೇ ಶತಮಾನದ ಶರಣಶ್ರೇಷ್ಠ ಶರಣಬಸವೇಶ್ವರ ದಾಸೋಹದ ಮನೆಗೆ ತೆರಳಿ ಅಲ್ಲಿ ಡಾ.ದ್ರಾಕ್ಷಾಯಿಣಿ ಅಪ್ಪಾ ಅವರು ಮಹಿಳಾ ಶಕ್ತಿ ಸಾಮಾನ್ಯವಲ್ಲ, ದೇಶ ಕಾಯುವ ಕಾವಲು ಪಡೆಯು ನಾವೇ ಇದ್ದೇವೆ ಎಂದು ಯುವತಿಯರನ್ನು ಹುರಿದುಂಬಿಸಿದರು. ಅವರ ಶುಭಸಂದೇಶದೊಂದಿಗೆ ರ್‍ಯಾಲಿ ಮುಕ್ತಾಯ ಮಾಡಲಾಯಿತು. ರ್‍ಯಾಲಿಯಲ್ಲಿ ಬಂದ ಪ್ರತಿಯೊಬ್ಬರಿಗೂ ಭೂರಿ ಭೋಜನ ನೀಡಿ, ನಾಗರ ಪಂಚಮಿಯಂದು ತವರು ಮನೆಗೆ ಬಂದಿರುವ ನಿಮಗೆ ಇಗೋ ತವರು ಋಣ ಎಂದು ಎಲ್ಲರಿಗೂ ಬ್ಲೌಸ್ ಪೀಸು, ಜೋಳದ ಅಳ್ಳ ನೀಡಿ ಸತ್ಕರಿಸಿದರು. ಮಹಿಳೆಯರಿಗಾಗಿ 1940ರಲ್ಲಿಯೇ ದೊಡ್ಡಪ್ಪ ಅಪ್ಪ ಅವರು ಮೊಟ್ಟಮೊದಲ ಶಾಲೆ ತೆರೆದರು. ಮನೆ ಮನೆಗೂ ಹೋಗಿ ಹೆಣ್ಣುಮಕ್ಕಳನ್ನು ಟಾಂಗಾದಲ್ಲಿ ಕರೆ ತಂದು ಶಾಲೆ ಕಲಿಸಿದ ಕೀರ್ತಿ ಸಂಸ್ಥಾನದ್ದು ಎಂದು ನೆನಪಿಸಿಕೊಟ್ಟರು. ಡಾ.ನೀಲಾಂಬಿಕಾ ಪೊಲೀಸ್ ಪಾಟೀಲ ಕಾರ್ಯಕ್ರಮ ನಡೆಸಿಕೊಟ್ಟರು. ಒಟ್ಟಾರೆ ನಗರದಲ್ಲಿ ಸಮ್ಮೇಳನದ ಕಾವು ಏರಿತು. ವೈವಿಧ್ಯಮಯ ಗೋಡೆ ಬರಹಗಳು, ಜನವಾದಿಯ ಬಾವುಟಗಳು, ಪ್ರತಿನಿಧಿಗಳಿಗೆ ಸ್ವಾಗತ ಕೋರುವ ಬ್ಯಾನರ್‌ಗಳು ನಗರದೆಲ್ಲೆಡೆ ರಾರಾಜಿಸಿದವು.



ಗಮನಸೆಳೆದ ಧ್ವಜಾರೋಹಣ

ದಿನಾಂಕ 1–8–22ರಂದು ಕಲಬುರಗಿ ಹೊರ ವಲಯದ ಶ್ರೀಗುರು ವಿದ್ಯಾಪೀಠದ ಮಂಜುಳಾ ಹವಾಲ್ದಾರ ವೇದಿಕೆಯತ್ತ ಮುಂಜಾನೆಯಿಂದಲೆ ಪ್ರತಿನಿಧಿಗಳು ಆಗಮಿಸಿದರು. ಮಂಡ್ಯ, ಕೋಲಾರ, ಚಿಕ್ಕಬಳ್ಳಾಪೂರ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬಳ್ಳಾರಿ, ಕಲಬುರಗಿ, ಬೀದರ, ವಿಜಯಪುರ, ಯಾದಗಿರಿ ಜಿಲ್ಲೆಗಳಿಂದ ಒಟ್ಟು 252 ಪ್ರತಿನಿಧಿಗಳು ಬಂದಿಳಿದರು. ಸರಿಯಾಗಿ 10 ಗಂಟೆಗೆ ಜೆ.ಎಂ.ಎಸ್‌ನ ರಾಷ್ಟ್ರ ಪ್ರಧಾನ ಕಾರ್ಯದರ್ಶಿಗಳಾದ ಮರಿಯಮ್ ಧವಳೆ ಹಾಗೂ ಕೇಂದ್ರ ಉಪಾಧ್ಯಕ್ಷರಾದ ಯು.ವಾಸುಕಿ ಇವರ ಉಪಸ್ಥಿತಿಯಲ್ಲಿ ಕರ್ನಾಟಕ ರಾಜ್ಯ ಅಧ್ಯಕ್ಷರಾದ ದೇವಿಯವರು ಜನವಾದಿಯ ಬಾವುಟವನ್ನು ಹಾರಿಸುವ ಮೂಲಕ ಸಮ್ಮೇಳನದ ಕಲಾಪಗಳಿಗೆ ವಿದ್ಯುಕ್ತ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಜನವಾದಿ ನಲವತ್ತೊಂದು ಸಂವತ್ಸರಗಳನ್ನು ಪೂರೈಸಿದ ನೆನಪಿಗಾಗಿ ನಲವತ್ತು ಮೇಲೊಂದು ಯುವತಿಯರು ಜನವಾದಿಯ ಬಾವುಟ, ಶೃಂಗಾರ ಫಲಕ, ರಂಗು ರಂಗಿನ ಕೊಡೆಗಳನ್ನು ಹಿಡಿದು ಜಯಘೋಷ ಹಾಕಿದ್ದು ಎಲ್ಲರ ಗಮನ ಸೆಳೆಯಿತು. ನಂತರ ಆಗಮಿಸಿದ ಪ್ರತಿನಿಧಿಗಳು ಸಾಲಾಗಿ ಸಾಗಿ ಹುತಾತ್ಮ ಸ್ತಂಭಕ್ಕೆ ಪುಷ್ಪಗುಚ್ಛ ಸಲ್ಲಿಸಿ ಗೌರವ ನಮನ ಸಲ್ಲಿಸಿದರು.

ಉದ್ಘಾಟನಾ ಸಮಾರಂಭ

ಲಕ್ಷ್ಮಿ ಕೆ.ಎಸ್, ಲವಿತ್ರ ವಸ್ತ್ರದ ಮತ್ತು ಪ್ರಕೃತಿ ಬೋರಾಳಕರ್ ಇವರ ಕ್ರಾಂತಿಗೀತೆಯೊಂದಿಗೆ ಕಲಾಪಗಳ ಉದ್ಘಾಟನಾ ಸಮಾರಂಭ ಶುರುವಾಯಿತು. ಮೊದಲಿಗೆ ಈ ಮೂರು ವರ್ಷದ ಅವಧಿಯಲ್ಲಿ ಅಗಲಿದ ಸಂಘಟನೆಯ ಮುಖಂಡರು, ಕರೋನಾ ಪಿಡುಗಿಗೆ ಬಲಿಯಾದ ಪ್ರತಿಯೊಬ್ಬರಿಗೂ ಒಂದು ನಿಮಿಷದ ಮೌನಾಚರಣೆಯೊಂದಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸ್ವಾಗತ ಸಮಿತಿಯ ಗೌರವ ಅಧ್ಯಕ್ಷರಾದ ಡಾ ಕನಿಜ ಫಾತಿಮಾ ಅವರು ಸರ್ವರಿಗೂ ಸ್ವಾಗತವನ್ನು ಕೋರಿದರು. ಕಲಬುರಗಿಗೆ ಸಮ್ಮೇಳನ ಹರಿದು ಬಂದುದರ ಬಗೆಗೆ ಹರ್ಷ ವ್ಯಕ್ತಪಡಿಸಿ ಕಲಬುರಗಿಗೆ ಇದೊಂದು ಗೌರವದ ಸಂಗತಿ ಎಂದರು. ಜನವಾದಿ ಎಂದರೆ ದೇಶದ ಮಹಿಳೆಯರ ಹಿತ ಚಿಂತನೆಯ ಕಾವಲುಪಡೆ ಎಂದು ಶ್ಲಾಘಿಸಿದರು. ಜನವಾದಿ ಮಹಿಳಾ ಸಂಘಟನೆಯ ಕಲಬುರಗಿ ಜಿಲ್ಲಾ ನೂತನ ಕಾರ್ಯದರ್ಶಿಯಾದ ಪದ್ಮನಿ ಕಿರಣಗಿಯವರು ನಿರೂಪಣೆ ಮಾಡಿದರು. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಮಾರಿಯಂ ಧಾವಳೆ ಮತ್ತು ಉಪಾಧ್ಯಕ್ಷೆ ಯು ವಾಸುಕಿಯವರು ಹಾಗೂ ಅತಿಥಿಗಳಾಗಿ ಆಗಮಿಸಿದ ಶ್ರೀಗುರು ವಿದ್ಯಾಸಂಸ್ಥೆಯ ಸಂಸ್ಥೆಯ ಮುಖ್ಯಸ್ಥರಾದ ಪೂಜಾ ದಿಗ್ಗಾವಿ ಇವರು ತಮಟೆ ಭಾರಿಸುವ ಮೂಲಕ ಸಭೆಗೆ ಚಾಲನೆ ನೀಡಿದರು.

ನಂತರ ಮರಿಯಂ ಧವಳೆ ಅವರು ಉದ್ಘಾಟನಾ ಭಾಷಣ ಮಾಡಿದರು. ದೇಶ ಇಂದು ಎರಡು ಸುನಾಮಿಗಳಿಂದ ತತ್ತರಿಸಿ ಹೋಗಿದೆ. ಒಂದು ಮಾರಣಾಂತಿಕ ಬೆಲೆ ಏರಿಕೆ ಇನ್ನೊಂದು ವಿಷಾನಿಲವಾಗಿ ಹಬ್ಬುತ್ತಿರುವ ಕೋಮು ದ್ವೇಷ. ಇವೆರಡೂ ಪುಟ 10 ಕ್ಕೆ

ತೈವಾನ್ ವಿವಾದ: ಫೆಲೋಸಿ ಭೇಟಿ ಈಗೇಕೆ?

ಜಿ.ಎನ್. ನಾಗರಾಜ

"ಚೀನಾ ಮತ್ತು ಟೈವಾನ್ ಬಗ್ಗೆ ಅಮೇರಿಕದ ಇವತ್ತಿನ ನೀತಿ ಎಂದರೆ ಕೆಂಪು ಚೀನಾದ ಮೇಲೆ ನಿರಂತರ ಮಿಲಿಟರಿ ಬೆದರಿಕೆಯನ್ನು ಜೀವಂತವಾಗಿಡಬೇಕು. ಈ ಬೆದರಿಕೆ ಚೀನಾವನ್ನು ಒಳಗಿಂದಲೇ ಒಡೆದು ಹೋಗುವಂತೆ ಮಾಡಬೇಕು ಎಂದು ಹೌದಲ್ಲವೇ?"

"ಹೌದು ಸರ್, ಅದೇ ನನ್ನ ಪರಿಕಲ್ಪನೆ."

"ಮೂಲಭೂತವಾಗಿ ಆ ಭಾಗದಲ್ಲಿ ಅನಿರ್ದಿಷ್ಟ ಕಾಲ ಅಮೇರಿಕದ ಹಿಡಿತವನ್ನು ಮುಂದುವರೆಸುವುದೇ ಗುರಿ ಎಂದರ್ಥವೇ ?" ಹೌದು,ಬಹಳ ಸರಿಯಾಗಿ ಹೇಳಿದಿರಿ"

ಚೀನಾ ಎಂಬ ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ನಮ್ಮ ದಾರಿ ಎಂದರೆ ಅದು ಒಡೆದು ಹೋಗುವಂತಹ ಕ್ರಮಗಳನ್ನು ಕೈಗೊಳ್ಳುವುದು" ಈ ಪ್ರಶ್ನೋತ್ತರ ನಡೆದದ್ದು ಅಮೇರಿಕದ ವಿದೇಶಾಂಗ ಉಪ ಸಚಿವನ ನೇಮಕಾತಿಯನ್ನು ಒಪ್ಪಿಕೊಳ್ಳುವ ಮೊದಲು ಅವನ ಧೋರಣೆಯನ್ನು ಪರೀಕ್ಷಿಸಲು ಅಲ್ಲಿಯ ಸಂಸದರು ನಡೆಸುವ ಸಂದರ್ಶನದಲ್ಲಿ ಇಂತಹ ಧೋರಣೆಯನ್ನು ಅವನು ಜಾರಿಗೆ ತರುತ್ತಾನೆ ಎಂದು ಖಾತ್ರಿಯಾದ ಮೇಲೆ ಅವನನ್ನು ವಿದೇಶಾಂಗ ಉಪ ಸಚಿವನನ್ನಾಗಿ ನೇಮಕ ಮಾಡಲಾಯಿತು. ಈ ಸಂದರ್ಶನ ನಡೆದದ್ದು 1954 ಎಂಬುದೇ ವಿಶೇಷ.



ಚೀನಾದ ಕ್ರಾಂತಿಕಾರಿ ಸರ್ಕಾರದ ಆರಂಭದಿಂದಲೇ ಚೀನಾವನ್ನು ನಾಶ ಮಾಡಲು ಟೈವಾನನ್ನು ದಾಳವಾಗಿ ಬಳಸುವ ದುಷ್ಟ ಕ್ರಮಗಳನ್ನು ಅಮೇರಿಕ ಅನುಸರಿಸುತ್ತಾ ಬಂದಿತ್ತು ಎಂಬುದಕ್ಕೆ ಗಟ್ಟಿ ಪುರಾವೆ.

ಇದಲ್ಲದೆ ಕ್ರೌರ್ಯಕ್ಕೆ ವಿಶ್ವ ಪ್ರಸಿದ್ಧನಾಗಿದ್ದ ಅಲ್ಲಿಯ ಸರ್ಕಾರದಲ್ಲಿ ಬಹಳ ಪ್ರಬಲ ವ್ಯಕ್ತಿಯಾಗಿದ್ದ ಡಲ್ಲೆಸ್ 1958 ರಲ್ಲಿ ಚೀನಾದ ವಿರುದ್ಧ ಟೈವಾನನ್ನು ಮಿಲಿಟರಿಯಾಗಿ ಛೂ ಬಿಟ್ಟು, ಚೀನಾದ ಒಳಗೆ ಸಶಸ್ತ್ರ ದಂಗೆಕೋರರನ್ನು ಕಳಿಸಿ ಅಲ್ಲಿಯ ಸಂಸತ್ತಿನಲ್ಲಿ ಘೋಷಿಸುತ್ತಾನೆ, ಚೀನಾದ ಸರ್ಕಾರವನ್ನು ಕಿತ್ತೊಗೆಯುವುದಕ್ಕಾಗಿಯೇ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು. ಹೀಗೆ ಅಂದಿನಿಂದ ಇಂದಿನವರೆಗೆ ಚೀನಾದ್ದೇ ಭಾಗವಾದ ಟೈವಾನ್ ದ್ವೀಪವನ್ನು ಚೀನಾದ ವಿರುದ್ಧ ಎತ್ತಿಕಟ್ಟಲು ಮಿಲಿಟರಿ ಹಾಗೂ ಆರ್ಥಿಕ ನೆರವು ನೀಡಿ ಚೀನಾವನ್ನು ಒಡೆಯಬೇಕು ಎಂಬ ಗುರಿಯಿಂದ ಅನೇಕ ಬಾರಿ ಕಾಲ್ಕೆರೆದು ಕದನ ಮಾಡಲು ಅಮೇರಿಕ ಪ್ರಯತ್ನಿಸಿದೆ.

ಟೈವಾನ್– "ಸಣ್ಣ" ವಿಷಯಕ್ಕೆ ಚೀನಾದಿಂದ ಇಷ್ಟೊಂದು ಆರ್ಭಟ ಏಕೆ?

25 ವರ್ಷಗಳಲ್ಲಿ ಇಲ್ಲದ್ದು #ಅಮೇರಿಕದ_ನಾಯಕಿಯ #ದಿಢೀರ್ ಭೇಟಿ ಏಕೆ?

* ಚೀನಾ ಕ್ರಾಂತಿಯ ನಂತರ ಟೈವಾನ್‌ನನ್ನು ಬಳಸಿಕೊಂಡು 22 ವರ್ಷಗಳ ಕಾಲ ವಿಶ್ವ ಸಂಸ್ಥೆಯಿಂದ, ಒಲಿಂಪಿಕ್ಸ್‌ನಿಂದ, ವಿಶ್ವದ ವ್ಯಾಪಾರ ಸಂಬಂಧಗಳಿಂದ ಹೊರ ಹಾಕಿದ್ದ ಅಮೇರಿಕ, ಬ್ರಿಟನ್‌ಗಳು
* ಟೈವಾನ್ ಮಾತ್ರವೇ ಚೀನಾ, ಚೀನಾ ಚೀನಾ ಅಲ್ಲ ಎನ್ನುತ್ತಿದ್ದ ಅಮೆರಿಕ ಮತ್ತು ಬಾಲಂಗೋಚಿಗಳು ಈಗ ಟೈವಾನ್ ಚೀನಾಕ್ಕೆ ಸೇರಿಲ್ಲ ಎನ್ನುತ್ತಿವೆ!!! ಎಂಥಾ ಸೋಜಿಗ ನೋಡಿ.
* ಚೀನಾದ ಜನತಾ ಕ್ರಾಂತಿಯ ನಂತರ 1949 ರಲ್ಲಿ ಅಲ್ಲಿಯ ಅದಾನಿ, ಅಬಾನಿ, ಟಾಟಾ, ಬಿರ್ಲಾ, ಬಜಾಜ್‌ಗಳು ಚೀನಾ ಸರ್ಕಾರದ ಮತ್ತು ಐದು ದಶಕಗಳಿಗೂ ಹೆಚ್ಚು ಕಾಲ ಜನರನ್ನು ಕೊಳ್ಳೆ ಹೊಡೆದಿದ್ದ ಸಾವಿರಾರು ಕೋಟಿ ಭ್ರಷ್ಟ ಸಂಪತ್ತು, ಚಿನ್ನ ಇತ್ಯಾದಿಗಳನ್ನು ಕದ್ದು ಓಡಿ ಹೋಗಿ ಚೀನಾದ್ದೇ ಮತ್ತೊಂದು ಪ್ರಾಂತವಾದ ಟೈವಾನ್ ದ್ವೀಪಕ್ಕೆ ಸೇರಿಕೊಂಡರು.
* ಅಮೇರಿಕ ತಮ್ಮ ಸರ್ಕಾರದ ಹಣ ತಮಗೆ ಕೊಡಿ ಎಂದ ಚೀನಾ ಸರ್ಕಾರದ ವಿರುದ್ಧ ಈ ಲೂಟಿಕೋರರನ್ನು ಸಂರಕ್ಷಿಸಲು, 1950 ರಲ್ಲೇ ತಮ್ಮ ಕುಪ್ರಸಿದ್ಧ ಸೆವೆಂತ್ ಫ್ಲೀಟನ್ನು ತಂದು ಟೈವಾನ್ ಬಳಿ ನಿಲ್ಲಿಸಿತು. ಬಾಂಗ್ಲಾ ವಿಮೋಚನೆಯ ಸಮಯದಲ್ಲಿ ಭಾರತವನ್ನು ಬೆದರಿಸಲು ಹಿಂದೂ ಮಹಾ ಸಾಗರದಲ್ಲಿ ನಿಲ್ಲಿಸಿದ್ದು ಇದೇ ನಾವಿಕ ಹಡಗು.
* ಹಲವು ಬಾರಿ ಚೀನಾದ ಸರ್ಕಾರವನ್ನು ಕಿತ್ತೊಗೆಯಲು ಕರೆ ನೀಡಿ ಅಲ್ಲಿಯ ವಿವಿಧ ಪ್ರಾಂತ್ಯಗಳ ಜನರ ಮೇಲೆ ಯುದ್ಧ ವಿಮಾನ ಬಳಸಿ ಕರಪತ್ರ ಎಸೆಯುವುದು, ಚೀನಾದ ಬಂದರುಗಳ ಬಳಿ ಯುದ್ಧ ಹಡಗುಗಳನ್ನು ನಿಲ್ಲಿಸಿ ಚೀನಾದ ವಿದೇಶಿ ವ್ಯಾಪಾರ ಬ್ಲಾಕ್ ಮಾಡುವುದು ಮೊದಲಾದ ಹಲವು ನಿತ್ಯ ಕಿರುಕುಳಗಳನ್ನು ಟೈವಾನ್ ಮೂಲಕ ಅಮೆರಿಕ ನಡೆಸಿತು.
* ಟೈವಾನ್‌ನೊಡನೆ 1955 ರಲ್ಲಿಯೇ ಮಿಲಿಟರಿ ಒಪ್ಪಂದ ಮಾಡಿಕೊಂಡು ಚೀನಾಕ್ಕೆ ಚೀನಾದ್ದೇ ಪ್ರಾಂತ್ಯದ ಮೇಲೆ ಹಕ್ಕಿಲ್ಲವೆಂಬಂತೆ ಅದಕ್ಕೆ ವಿಮಾನ,ಹಡಗು, ಆಧುನಿಕ ಶಸ್ತ್ರಾಸ್ತ್ರಗಳನ್ನು ನೀಡುತ್ತಾ ಬಂದಿದೆ. ಟೈವಾನ್‌ನಲ್ಲಿ ಯುದ್ಧ ಕ್ಷಿಪಣಿಗಳನ್ನೂ ಸ್ಥಾಪಿಸಿದೆ.
* ಹಲವು ಬಾರಿ ಟೈವಾನಿಗೆ ಅಣು ಕ್ಷಿಪಣಿಗಳನ್ನು ಕಳಿಸಿರುವುದಾಗಿ ಅಮೇರಿಕ ಬಹಿರಂಗವಾಗಿ ಘೋಷಿಸಿದೆ. ಈ ಬಗ್ಗೆ ವಿಶ್ವ ಸಂಸ್ಥೆಯ ನಿಯಮಗಳು ಸ್ಪಷ್ಟವಾಗಿ ಚೀನಾಕ್ಕೆ ಮಾಹಿತಿ ನೀಡಬೇಕೆಂದು ನಿರ್ದೇಶಿಸಿದ್ದರೂ ಅದನ್ನು ಉಲ್ಲಂಘಿಸುತ್ತಲೇ ಬಂದಿದೆ.
* ಚೀನಾವನ್ನು ಅಡಗಿಸಲು ಅಮೇರಿಕ ಕೊರಿಯಾದ ಮೇಲೆ ಧಾಳಿ ನಡೆಸಿತು. ಅದನ್ನು ಎರಡು ತುಂಡು ಮಾಡಿತು. ಹಾಗೆಯೇ ವಿಯಾತ್ನಾಂನನ್ನೂ ಎರಡು ತುಂಡು ಮಾಡಿ ದ.ಕೊರಿಯಾದ. ವಿಯೆಟ್ನಾಂಗಳಲ್ಲಿ ಕೈಗೊಂಬೆ ಸರ್ಕಾರಗಳನ್ನು ಸ್ಥಾಪಿಸಿ ಯುದ್ಧ ನೆಲೆಗಳನ್ನು ಮಾಡಿಕೊಂಡಿತು.
* ವಿಶ್ವದ ಜೊತೆ ವ್ಯಾಪಾರ ಸಂಬಂಧಗಳಿಲ್ಲದ ಕಠಿಣ ಪರಿಸ್ಥಿತಿಯಲ್ಲಿ, ಬರಗಾಲಕ್ಕೆ ತುತ್ತಾಗಿ ಚೀನಾದ ಜನರು ನರಳುತ್ತಿರುವಾಗ ಅಲ್ಲಿಯ ಜನರನ್ನು ದಂಗೆ ಎಬ್ಬಿಸಲು ನಿರಂತರ ಪ್ರಚೋದನೆ ನೀಡಿತು. ಜೊತೆಗೆ ಚೀನಾದ ಸುತ್ತ ಇದ್ದ ದ.ಕೊರಿಯಾ, ಟೈವಾನ್, ಹಾಂಗ್ ಕಾಂಗ್, ಸಿಂಗಪುರದಂತಹ ಪುಟ್ಟ ಆರ್ಥಿಕತೆಗಳನ್ನು

ಪುಟ 14 ಕ್ಕೆ



ಅಮೇರಿಕಾ ಕ್ರಮದ ಹಿಂದಿರುವ ಮರ್ಮ?

ಟ್ರಂಪ್ ಅಧಿಕಾರದಲ್ಲಿಯೇ ಟೈವಾನ್ ಪ್ರಶ್ನೆಯನ್ನು ಉಲ್ಬಣಿಸಲು ವಿವಿಧ ರೀತಿಯಲ್ಲಿ ಕಾಲ್ಕೆರೆಯಲಾಯಿತು. ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು, ಮಿಲಿಟರಿ ಕ್ಷಿಪಣಿಗಳನ್ನು ಟೈವಾನ್‌ಗೆ ದೇಣಿಗೆಯಾಗಿ ಕೊಡಲಾಯಿತು. ಬೈಡೆನ್ ಅಧಿಕಾರಕ್ಕೆ ಬಂದಮೇಲೆ ಈ ವರ್ಷದಲ್ಲಿಯೇ ಮಿಲಿಟರಿ ನೆರವು, ಕ್ಷಿಪಣಿಗಳ ಸರಬರಾಜು ದುಪ್ಪಟ್ಟಾಗಿದೆ. ಪೆಲೊಸಿ ಭೇಟಿಯ ಪೂರ್ವದಲ್ಲಿ ಈ ಎಲ್ಲ ಸಿದ್ಧತೆಗಳನ್ನೂ ನಡೆಸಲಾಗುತ್ತಿದೆ. ಇವುಗಳ ಹಿಂದಿನ ಮರ್ಮ ಚೀನಾಕ್ಕೆ ಚೆನ್ನಾಗಿಯೇ ತಿಳಿದಿದೆ.

ಪೆಲೋಸಿ ಟೈವಾನ್ ಭೇಟಿ ಅಮೆರಿಕದ ಅಧ್ಯಕ್ಷ ಮತ್ತು ಮಿಲಿಟರಿಗೆ ಅಷ್ಟೇನೂ ಇಷ್ಟವಿಲ್ಲ. ರಷ್ಯಾದ ಜೊತೆ ಸಂಘರ್ಷ ನಡೆಸಿರುವಾಗ ಚೀನಾ ಜೊತೆಯೂ ಸಂಬಂಧ ವಿಷಮಿಸುವುದು ಅವರಿಗೆ ಇಷ್ಟವಿಲ್ಲ. ಆದರೂ ಪೆಲೋಸಿ ಹಠಮಾಡಿ ಭೇಟಿ ಕೊಡುತ್ತಿರುವುದರ ತಕ್ಷಣದ ಉದ್ದೇಶದ ಹಿಂದೆ ಪೆಲೋಸಿಯ ಸ್ವಾರ್ಥ ಮತ್ತು ಆಕೆ ಪ್ರತಿನಿಧಿಸುವ ಕಾರ್ಪೊರೇಟ್ ಲಾಬಿಯೇ ಇದೆ. ಅಮೆರಿಕದ ಕಾರ್ಪೊರೇಟ್‌ಗಳಲ್ಲಿ ಚೀನಾ ಪರ, ಚೀನಾ ವಿರೋಧಿ ಗುಂಪುಗಳಿವೆ. ಪೆಲೋಸಿ ಚೀನಾ ವಿರೋಧಿ ಗುಂಪಿನ ಅಗ್ರಗಣ್ಯ ನಾಯಕಿ. ಚೀನಾ 2008 ರ ಒಲಿಂಪಿಕ್ಸ್ ನಡೆಸಬಾರದು, 21 ರ ಚಳಿಗಾಲದ ಒಲಿಂಪಿಕ್ಸ್ ರದ್ದಾಗಬೇಕು ಎಂದು ಶತ ಪ್ರಯತ್ನ ಮಾಡಿದಾಕೆ. ಪ್ರತಿಯೊಂದು ವಿಷಯಕ್ಕೂ ಚೀನಾದ ವಿರುದ್ಧ ಗದ್ದಲ ಎಬ್ಬಿಸುತ್ತ ಬಂದಾಕೆ.

ಈಗ ಈ ಲಾಬಿಗೆ ಪೆಲೋಸಿ ಭೇಟಿ ಮೂಲಕ ಚೀನಾ ವಿರುದ್ಧ ಅಮೆರಿಕ ಸರ್ಕಾರ ಕಾನೂನು ರೂಪಿಸುವ ಒತ್ತಡ ಹೇರುವುದು ಮತ್ತು ಅವು ಅಮೆರಿಕದ ಸಂಸತ್ತಿನಲ್ಲಿ ಚರ್ಚೆಗೆ ಬರುವಂತೆ ಮಾಡುವುದು ಗುರಿ.

ಇದಕ್ಕೊಂದು ತುರ್ತೂ ಇದೆ. ಪೆಲೋಸಿ ಬಹು ದೀರ್ಘ ಕಾಲ ಸ್ಪೀಕರ್ ಆಗಿ ಇರುವಾಕೆ. ಮುಂದೆ ಸ್ಪೀಕರ್ ಆಗುವ ಸಾಧ್ಯತೆ ಇಲ್ಲ. ಆದ್ದರಿಂದ ಆಕೆಯ ಅವಧಿ ಮುಗಿಯುವುದರೊಳಗೆ ಈ ಗುರಿ ಮುಟ್ಟಬೇಕು.

ಪೆಲೋಸಿಗೂ ಕೂಡಾ ತನ್ನ ಅವಧಿ ಮುಗಿಯುವುದರೊಳಗೆ ಈ ಲಾಬಿಗೆ ಸಹಾಯ ಮಾಡಿ ಅದರಿಂದ ಲಾಭ ಪಡೆಯಬೇಕು ಎಂದೂ, ಆಕೆಯ ಕುಟುಂಬದವರು ಸ್ಟಾಕ್ ಮಾರ್ಕೆಟ್‌ನಲ್ಲಿ ದಿಢೀರ್ ಸಂಪತ್ತು ಹೆಚ್ಚಿಸಿಕೊಂಡ ಬಗ್ಗೆ ಗುಲ್ಲೆದ್ದಿದೆ. ಅದನ್ನು ನಿವಾರಿಸಿಕೊಳ್ಳಬೇಕು ಎಂದಿದೆ.

ಪೆಲೋಸಿ ಮತ್ತು ಚೀನಾ ವಿರೋಧಿ ಕಾರ್ಪೊರೇಟ್‌ಗಳ ಉದ್ದೇಶ–

ಮುಂದೆ ಚೀನಾದ ಸಾಗರ ವ್ಯಾಪಾರಕ್ಕೆ ನಿತ್ಯ ಅಡ್ಡಿಯುಂಟುಮಾಡುವ ಅವಕಾಶ ಸೃಷ್ಟಿಸುವುದು.

ರಷ್ಯಾದಂತೆ ಚೀನಾವನ್ನೂ ಕಾಲ್ಕೆರೆದು ಯುದ್ಧಕ್ಕೆ ಸೆಳೆಯುವುದು, ವಿಶ್ವದೆಲ್ಲ ದೇಶಗಳು ಮತ್ತು ಜನರ ನಡುವೆ ಅಪಪ್ರಚಾರದ ಮೂಲಕ ಚೀನಾವನ್ನು ಮೂಲೆಗುಂಪು ಮಾಡುವುದು. ಆಗ ಬಹಳ ರಾಷ್ಟ್ರಗಳು ಒಟ್ಟುಗೂಡಿ ತೀಕ್ಷ್ಣವಾದ ಆರ್ಥಿಕ ಯುದ್ಧ ಸಾರುವುದು. ಜಿ.7 ರಾಷ್ಟ್ರಗಳ ಗುಂಪಿನಿಂದ ಚೀನಾ ಟೀಕೆಯ ಆಗಲೇ ಹೇಳಿಕೆ ಬರುವ ಮೂಲಕ ಈ ಲಾಬಿಯ ಉದ್ದೇಶ ಅಂಶಿಕವಾಗಿ ಯಶಸ್ವಿಯಾಗಿದೆ.

ಹೀಗೆ ಅವರ ದುಷ್ಟ ತಂತ್ರಗಳು ಹಲವು. ಪತ್ರಿಕೆ,ಮಾಧ್ಯಮಗಳ ಮೂಲಕ ಕಾಣುವುದಿಷ್ಟು. ಒಳಗೊಳಗೇ ಮತ್ತೇನಿದೆಯೋ?

ಒಂದು ನಿಮಿಷ ಯೋಚಿಸೋಣ – ಅಮೇರಿಕದ ಅತಿ ಶ್ರೀಮಂತ ಕಾರ್ಪೊರೇಟಿಗರು ಓಡಿ ಹೋಗಿ ಹವಾಯ್ ದ್ವೀಪದಲ್ಲಿ ಸೇರಿ ಅದು ಸ್ವತಂತ್ರ ಪ್ರಜಾಪ್ರಭುತ್ವ ಗಣರಾಜ್ಯ ಎಂದು ಘೋಷಿಸಿದರೆ ಅಮೇರಿಕ ಏನು ಮಾಡುತ್ತದೆ?

ಈ 70 ವರ್ಷಗಳಲ್ಲಿ ಚೀನಾ ನಿರಂತರವಾಗಿ ಶಾಂತಿಯುತ ಮಾರ್ಗಕ್ಕೇ ಬದ್ಧವಾಗಿದೆ. ಅಮೆರಿಕದ ಮಿಲಿಟರಿ ಮತ್ತು ರಾಜಕಾರಣದ ಮಧ್ಯ ಪ್ರವೇಶ ಒಂದು ಮಿತಿ ಮೀರಿದಾಗ ಮಾತ್ರ ಇಂತಹ ಪ್ರತಿಕ್ರಮಗಳನ್ನು ಕೈಗೊಂಡಿದೆ.

ಮಹಿಳಾ ಚಳವಳಿಗೆ ಸ್ಪಷ್ಟ ನೋಟ ದಿಟ್ಟ ಹೆಜ್ಜೆ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ 11ನೇ ರಾಜ್ಯ ಸಮ್ಮೇಳನ ಕಂಕಣ

ಪುಟ 8 ರಿಂದ

ದೇಶದ ಘನತೆ ಮತ್ತು ಏಕತೆಯನ್ನು ಸರ್ವನಾಶ ಮಾಡುತ್ತಿವೆ. ರಾಜ್ಯ ಮತ್ತು ಕೇಂದ್ರದಲ್ಲಿರುವ ಬಿಜೆಪಿ ಸರಕಾರಗಳು ದ್ವೇಷ ರಾಜಕಾರಣ ಮಾಡುವುದನ್ನೆ ಉದ್ಯೋಗವಾಗಿಸಿಕೊಂಡಿವೆ. ಉದ್ಯೋಗಖಾತ್ರಿ ಕಾಯ್ದೆಯ ಅನುಷ್ಠಾನಕ್ಕೆ ಹಣ ನೀಡದ ಸರಕಾರ 17 ಲಕ್ಷ ಕೋಟಿ ಅಂಬಾನಿ, ಅದಾನಿಗಳ ಸಾಲ ಮನ್ನಾ ಮಾಡುತ್ತದೆ. ಇದು ನೀಚತನದ ಪರಮಾವಧಿ ಎಂದು ಕಿಡಿ ಕಾರಿದರು. ಹಿಂದಿಯಲ್ಲಿ ಮಾತಾಡಿದ್ದನ್ನು ಕೆ ನೀಲಾ ಅವರು ಕನ್ನಡಕ್ಕೆ ತರ್ಜುಮೆ ಮಾಡಿದರು. ರಾಜ್ಯ ಅಧ್ಯಕ್ಷರಾದ ದೇವಿ ಮಂಡ್ಯ ಅವರು ಅಧ್ಯಕ್ಷೀಯ ಮಾತುಗಳನ್ನು ಆಡಿದರು. ಕೊನೆಯದಾಗಿ ರಾಜ್ಯ ಕಾರ್ಯದರ್ಶಿಗಳಾದ ಗೌರಮ್ಮ ಅವರು ವಂದನಾರ್ಪಣೆಯನ್ನು ಮಾಡಿದರು.

ಚಹಾದ ಸೇವನೆಯೊಂದಿಗೆ ಪ್ರತಿನಿಧಿ ಅಧಿವೇಶನ ಪ್ರಾರಂಭಿಸಲಾಯಿತು. ರಾಜ್ಯ ಜನವಾದಿಯ ಕಾರ್ಯದರ್ಶಿಗಳಾದ ಗೌರಮ್ಮ ಅವರು ವಿಸ್ತೃತ ಕರಡು ವರದಿಯನ್ನು ಮಂಡಿಸಿದರು. ದೇಶ, ರಾಜ್ಯದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಪರಿಸ್ಥಿತಿಯನ್ನು ವಿಶ್ಲೇಷಿಸಿದರು. ಮುಂದುವರೆದು ರಾಜ್ಯ ಸಮಿತಿಯ ಕಾರ್ಯಚಟುವಟಿಕೆಗಳು, ಘಟಕಗಳ ಸಂಖ್ಯೆ ಇತ್ಯಾದಿ ಸಂಘಟನಾ ಕಾರ್ಯ ನಿರ್ವಹಣೆ ಕುರಿತು ವರದಿ ನೀಡಿದರು. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಹಾಲಿ ಸಮಿತಿ ಮಾಡಿದ್ದೇನು? ಮಾಡದೆ ಬಿಟ್ಟದ್ದೇನು? ಉದ್ದೇಶಿತ ಗುರಿಯನ್ನು ತಲುಪಲಾಯಿತೆ? ಇಲ್ಲವಾದರೆ ಕಾರಣಗಳೇನು? ಸ್ವವಿಮರ್ಶೆಯೊಂದಿಗೆ ಎಲ್ಲವನ್ನು ಪ್ರತಿನಿಧಿಗಳ ಗಮನಕ್ಕೆ ದಿಗ್ದರ್ಶಿಸಲಾಯಿತು. ಒಂದೂವರೆ ಗಂಟೆ ನಿರರ್ಗಳವಾಗಿ ವರದಿ ಮಂಡನೆಯಾಯಿತು. ಚರ್ಚೆ ಮಾಡಲು ಅಧ್ಯಕ್ಷೀಯ ಮಂಡಳಿಯ ಸದಸ್ಯರಾದ ಕೆ.ಎಸ್ ಲಕ್ಷ್ಮಿ, ಚಂದ್ರಕುಮಾರಿ, ಇಸಾ ಬೇಗಂ, ಮೀನಾಕ್ಷಿ ಬಾಳಿ, ದೇವಿ ಸೇರಿ ಎಲ್ಲ ಜಿಲ್ಲೆಗಳಿಗೆ ಸದಸ್ಯತ್ವ ಆಧರಿಸಿ ಸಮಯ ನಿಗದಿ ಪಡಿಸಿದರು. ಊಟದ ವಿರಾಮದ ನಂತರ ಜಿಲ್ಲಾವಾರು ಪ್ರತಿನಿಧಿಗಳಿಗೆ ಗುಂಪು ಚರ್ಚೆ ಮಾಡಲು ಅವಕಾಶ ನೀಡಲಾಯಿತು. ನಂತರ ಸಾಯಂಕಾಲ 4–30 ರಿಂದ 8 ಗಂಟೆಯವರೆಗೆ ವರದಿ ಮೇಲೆ ಪ್ರತಿನಿಧಿಗಳು ಮಾತನಾಡಿದರು. ಒಟ್ಟು ಇಪ್ಪತ್ತೈದು ಪ್ರತಿನಿಧಿಗಳು ಮೂರು ಗಂಟೆಗಳಿಗೂ ಮಿಕ್ಕು ಸುದೀರ್ಘ ಪ್ರತಿಕ್ರಿಯೆ ನೀಡಿದರು. ಸಂಘಟನಾ ಕಾರ್ಯ ವೈಖರಿ ಕುರಿತು ವಿಸ್ತೃತ ಚರ್ಚೆ ನಡೆಸಿ ಮೌಲಿಕ ಸಲಹೆಗಳನ್ನು ನೀಡಿದರು. ಕೋಮುವಾದವನ್ನು ಹಿಮ್ಮೆಟ್ಟಿಸಲು ಘಟಕವಾರು ಅಧ್ಯಯನ ಶಿಬಿರಗಳ ಅವಶ್ಯಕತೆ ಇದೆ. ಬಿಜೆಪಿಯ ಹುಸಿ ದೇಶಭಕ್ತಿಯನ್ನು ಬಯಲು ಮಾಡುವ ಕೆಲಸ ಮಹಿಳೆಯರ ನಡುವೆ ಹೆಚ್ಚು ಮಾಡಬೇಕು. ಜಿಲ್ಲಾವಾರು ಕಾರ್ಯಾಗಾರ ನಡೆಸುವಂತೆ ಸೂಚಿಸಿದರು. ಕಲಾಪ ಎರಡನೇ ದಿನಕ್ಕೂ ಮುಂದುವರೆಯಿತು. ಪ್ರತಿನಿಧಿಗಳ ಚರ್ಚೆ ನಂತರ ಕಾರ್ಯದರ್ಶಿಯವರು ಉತ್ತರ ನೀಡಿದರು. ವರದಿ ಬಲ ಪಡಿಸಲು ಇನ್ನಷ್ಟು ಅಂಶಗಳೊಂದಿಗೆ ಪ್ರತಿನಿಧಿಗಳು ತಿಳಿಸಿದ ತಿದ್ದುಪಡಿಗಳನ್ನು ಸೇರಿಸಿಕೊಳ್ಳುವುದಾಗಿ ಪ್ರತಿನಿಧಿ ಸಂಗಾತಿಗಳಿಗೆ ತಿಳಿಸಿದರು.

ಸರ್ವಾನುಮತದಿಂದ ಒಟ್ಟು 33 ಜನರ ಹೊಸ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಡಾ ಮೀನಾಕ್ಷಿ ಬಾಳಿ, ಉಪಾಧ್ಯಕ್ಷರಾಗಿ ಕೆ.ನೀಲಾ, ಕೆ.ಎಸ್.ವಿಮಲ, ಗೌರಮ್ಮ, ಕೆ.ಎಸ್.ಲಕ್ಷ್ಮಿ, ಕಾರ್ಯದರ್ಶಿಯಾಗಿ ದೇವಿ ಮಂಡ್ಯ. ಸಹಕಾರ್ಯದರ್ಶಿಗಳಾಗಿ

ಸಂವಾದ ಗೋಷ್ಠಿ

ಮಧ್ಯಾಹ್ನದ ಅಧಿವೇಶನದಲ್ಲಿ "ಸಾಂಸ್ಕೃತಿಕ ರಾಜಕಾರಣ: ಮಹಿಳೆಯರ ಮೇಲೆ ಪರಿಣಾಮ – ವಹಿಸಬೇಕಾದ ಪಾತ್ರ" ಕುರಿತು ಸಂವಾದ ಗೋಷ್ಠಿ ನಡೆಸಲಾಯಿತು. ಜನಪದ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ ಅರುಣ ಜೋಳದಕೂಡ್ಲಗಿಯವರು ವಿಷಯ ಮಂಡಿಸಿದರು. ಭಾರತದ ಸಂಸ್ಕೃತಿ ಯಾವತ್ತೂ ಏಕಮುಖಿ ಅಲ್ಲ. ಇಲ್ಲಿ ಕಾಲಾನುಕಾಲದಿಂದಲೂ ಹತ್ತಾರು ಪಂಥ, ತತ್ವ, ಆಚಾರ, ವಿಚಾರ, ನಂಬಿಕೆಗಳು ನೆಲೆಸಿವೆ. ಬಗೆ ಬಗೆಯ ಜನಾಂಗಗಳು, ವಿಭಿನ್ನ ಭಾಷೆಗಳು, ಪ್ರಾದೇಶಿಕ ವೈಶಿಷ್ಟ್ಯಗಳು ಕಾಣಿಸಿಕೊಂಡಿವೆ. ಈ ಎಲ್ಲ ಬಹುತ್ವಗಳು ಅಖಂಡ ಮಾನವೀಯತೆ ಎಂಬ ಏಕ ಸೂತ್ರದಲ್ಲಿ ಬಂಧಿಸಲ್ಪಟ್ಟಿವೆ. ನಮ್ಮ ನಾಡು ಬಹುತ್ವದ ಆಡಂಬೊಲ, ಹಲವು ಮತ–ಪಂಥ–ಜನಾಂಗಗಳ ಕೂಡು ಕುಟುಂಬ. ಬಹುತ್ವವು ಭಾರತದ ಆತ್ಮ ಮತ್ತು ಇದುವೇ ವಿಶ್ವಮಟ್ಟದಲ್ಲಿ ಭಾರತವನ್ನು ಉತ್ತುಂಗಕ್ಕೇರಿಸಿದೆ ಎಂದು ನೈಜ ಘಟನೆಗಳನ್ನು ಉದಾಹರಿಸುವ ಮೂಲಕ ವಿವರಿಸಿದರು. ನಂತರ ಡಾ ಶಾಂತಾ ಅಷ್ಟಗಿಯವರು ಸಂಸ್ಕೃತಿ ಹೆಸರಿನಲ್ಲಿ ಮಹಿಳೆಯರ ದಿಕ್ಕು ತಪ್ಪಿಸುತ್ತಿರುವ ಹುನ್ನಾರುಗಳನ್ನು ಬಿಚ್ಚಿಟ್ಟರು. ಕೋಮುವಾದಿ ರಾಜಕಾರಣವು ಮಹಿಳೆಯರನ್ನು ಧಾರ್ಮಿಕತೆ ನೆಪದಲ್ಲಿ ದಾಳವಾಗಿಸುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು. ತದನಂತರದಲ್ಲಿ ಇನ್ನೋರ್ವ ಉಪನ್ಯಾಸಕರಾದ ಡಾ ಇಂದುಮತಿ ಪಾಟೀಲರು ಮಹಿಳೆಯರದು ಅದಮ್ಯ ಚೇತನ. ಆದರೆ ಅದನ್ನು ಕುಗ್ಗಿಸುವ ಹುನ್ನಾರು ಶತ ಶತಮಾನಗಳಿಂದಲೂ ಜಾರಿಯಲ್ಲಿದೆ ಎಂದರು. ಸಂಪ್ರದಾಯಗಳು ಮಹಿಳಾ ವಿರೋಧಿ ನೆಲೆಯಲ್ಲಿಯೇ ಮುಂದುವರೆದುಕೊಂಡು ಬರುತ್ತಿವೆ. ನಾವು ಪುರುಷ ಪ್ರಧಾನ ವ್ಯವಸ್ಥೆ ನಿರ್ವಹಿಸುತ್ತಿರುವ ಅಪಮೌಲ್ಯಗಳನ್ನು ಒದ್ದು ಹೊರಬರಬೇಕು ಎಂದು ಹೇಳಿದರು. ಜನವಾದಿಯ ಉಪಾಧ್ಯಕ್ಷರಾದ ಕೆ.ಎಸ್ ವಿಮಲಾ ಅವರು ಜನವಾದಿಯ ಮಹಿಳೆಯರು ಕೋಮುವಾದಿ ಸರಕಾರ ಹುಟ್ಟು ಹಾಕುತ್ತಿರುವ ಧಾರ್ಮಿಕ ಕಂದಾಚಾರಗಳನ್ನು ಜನರಿಗೆ ತಿಳಿಸಿ ಹೇಳಬೇಕಿದೆ. ಮಹಿಳಾ ವಿರೋಧಿ ನಂಬಿಕೆ–ನೆಲೆಗಳನ್ನು ಕುರಿತು ಜಾಗೃತಿ ಮೂಡಿಸಬೇಕಿದೆ. ಲಿಂಗ ಸಮಾನತೆಯ ಮಾರ್ಗದಲ್ಲಿನ ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಅರ್ಥ ಮಾಡಿಕೊಂಡು ಮುಂದಡಿಯಿಡೋಣ ಎಂದು ಪ್ರತಿನಿಧಿಗಳಿಗೆ ಕರೆನೀಡುತ್ತಾ ಸಂವಾದ ಗೋಷ್ಠಿಯನ್ನು ಮುಕ್ತಾಯಗೊಳಿಸಿದರು.

ಮಳೆಯೊಂದಿಗೆ ಮುದ ನೀಡಿದ ಸಂಗೀತ ಸಂಜೆ

ಸಾಯಂಕಾಲ ವಚನ, ತತ್ವಪದಗಳ ಗಾಯನ ಗೋಷ್ಠಿ ಏರ್ಪಡಿಸಲಾಗಿತ್ತು. ಖ್ಯಾತ ವಿದುಷಿಗಳಾದ ಡಾ ಛಾಯಾ ಭರತನೂರ ಹಾಗೂ ಡಾ ರೇಣುಕಾ ಹಾಗರಗುಂಡಗಿ ಬಸವಣ್ಣ, ಅಕ್ಕಮಹಾದೇವಿಯವರ ವಚನಗಳನ್ನು ಸುಶ್ರಾವ್ಯವಾಗಿ ಹಾಡಿದರು. ಪಂಡಿತ ರೇವಯ್ಯಾ ವಸ್ತ್ರದಮಠ ಅವರು ಕಡಕೋಳ ಮಡಿವಾಳೇಶ್ವರ ತತ್ವಪದಗಳನ್ನು ಹಾಡಿ ಪ್ರತಿನಿಧಿಗಳ ಮನ ತಣಿಸಿದರು. ಷಣ್ಮುಖ ಪಾಟೀಲರು ತಬಲಾ ಸಾತ್ ನೀಡಿದರು. ಸಂಗೀತ ಸಂಜೆಯನ್ನು ಮೀನಾಕ್ಷಿ ಬಾಳಿ ಅಧ್ಯಕ್ಷತೆ ವಹಿಸಿ ನಡೆಸಿಕೊಟ್ಟರು.

ನಂತರ ಸಮ್ಮೇಳನದ ಯಶಸ್ಸಿಗೆ ಹಗಲಿರುಳು ಶ್ರಮಿಸಿದ ಎಲ್ಲ ಸ್ವಯಂಸೇವಕರನ್ನು ಮತ್ತು ಪ್ರತ್ಯಕ್ಷವಾಗಿ ಸಹಕರಿಸಿದ ಎಲ್ಲರನ್ನು ಗೌರವಿಸಲಾಯಿತು.

ಮಳೆಯಲ್ಲಿಯೂ ಹಾಡು ಹಾಡುತ್ತಾ ಸಾಗಿದ ಬೃಹತ್ ಮೆರಬಣಿಗೆ

ಮೂರನೇ ದಿವಸ ದಿನಾಂಕ 3–8–22 ರಂದು ನಗರದ ಲಾಹೋಟಿ ಕಲ್ಯಾಣ ಮಂಟಪದಿಂದ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ಮುಸಲಧಾರಾ ಮಳೆಯಲ್ಲಿಯೂ ಕಾಲೇಜು ವಿದ್ಯಾರ್ಥಿನಿಯರು, ಗ್ರಾಮೀಣ ಮಹಿಳೆಯರು, ದೇವದಾಸಿ ತಾಯಂದಿರು ಮಹಿಳಾಪರ ಹಾಡುಗಳಿಗೆ ಹೆಜ್ಜೆ ಹಾಕುತ್ತ ನಡೆದರು. ಜನವಾದಿ ಮಹಿಳಾ ಸಂಘಟನೆ ಜಿಂದಾಬಾದ್, ಏಡ್ವಾ ಜಿಂದಾಬಾದ್, ನಮ್ಮಯ ದೇಹ ನಮ್ಮ ಹಕ್ಕು, ಮಹಿಳಾ ದೌರ್ಜನ್ಯ ನಿಲ್ಲಲೇಬೇಕು. ಸೌಹಾರ್ದ ಪರಂಪರೆ ನಮ್ಮದು, ಧರ್ಮದ ಹೆಸರಲ್ಲಿ ದೇಶ ಒಡೆಯಲು ಬಿಡುವುದಿಲ್ಲ, ಹರ್ ಜೋರ ಜುಲುಮ ಕೀ ಟಕ್ಕರ್ ಮೇ ಸಂಘರ್ಷ ಹಮಾರಾ ನಾರಾ ಹೈ, ಹಮ್ ಭಾರತಕೀ ನಾರಿ ಹೈ ಫೂಲ ನಹಿ ಚಿಂಗಾರಿ ಹೈ ಇತ್ಯಾದಿ ಘೋಷಣೆಗಳು ಮುಗಿಲು ಮುಟ್ಟಿದವು. ಎಲ್ಲರ ಕೈಯಲ್ಲು ಫಲಕಗಳು, ಬಾವುಟಗಳು, ರಾರಾಜಿಸಿದವು. ಅಲ್ಲೊಂದು ಉತ್ಸಾಹ, ಸಂಭ್ರಮ, ಸ್ವಾಭಿಮಾನ ತುಂಬಿ ತುಳುಕಾಡುತ್ತಿತ್ತು. ದಿನದಿನವು ಅನುದಿನವು ಈ ನೆಲದ ಹೆಣ್ಣುಗಳು ಮೆರವಣಿಗೆ ಹೊರಡುತ್ತಾರೆ ಹೊಸ ಹಾಡು ಹಾಡುತ್ತ, ಸಾಲು ಗಿಡಗಳು ನೆಡುತ್ತ ಮೆರವಣಿಗೆ ಹೊರಡುತ್ತಾರೆ ಎಂಬ ಹಾಡಿನ ನುಡಿಗಡಣ ಮುಗಿಲಿಗೆ ಮುತ್ತನಿಡುತ್ತಿತ್ತು. ನೆಹರು ಗಂಜ್ ನಿಂದ ಹೊರಟ ಮೆರವಣಿಗೆ ಸುಪರ್ ಮಾರ್ಕೇಟ್, ಜಗತ್ ಮಾರ್ಗವಾಗಿ ಅಪ್ಪನ ಕೆರೆಯ ಬದಿಯ ಅಪ್ಪ ಸಭಾಂಗಣಕ್ಕೆ ಬಂದು ತಲುಪಿತು. ಮಳೆಯಲ್ಲಿ ತೊಯ್ದು ತೊಪ್ಪೆಯಾದ ಮಹಿಳೆಯರು ಕೊನೆಯವರೆಗೂ ಅದೇ ಉತ್ಸಾಹ, ಉಲ್ಲಾಸಗಳನ್ನು ಮೆರೆದದ್ದು ಅಪರೂಪವಾಗಿತ್ತು.

ಜನಸಾಗರವಾದ ಬಹಿರಂಗ ಸಭೆ

ಅಪ್ಪಾ ಸಭಾಮಂಟಪದಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಸಮುದಾಯ, ಜನವಾದಿ ಸಂಗಾತಿಗಳು ಕ್ರಾಂತಿ ಗೀತೆಯನ್ನು ಹಾಡುವುದರೊಂದಿಗೆ ಸಭೆ ಶುರುವಾಯಿತು. ಕಲಬುರಗಿ ಜಿಲ್ಲಾ ಅಧ್ಯಕ್ಷರಾದ ಚಂದಮ್ಮ ಗೋಳಾ ಅವರು ಸರ್ವರನ್ನು ಸ್ವಾಗತಿಸಿದರು. ಸುತ್ತಲೂ ಮುತ್ತಿ ನೆರೆದು ಬಂದಿದ್ದ ಮಹಿಳೆಯರಿಂದ ಬೃಹತ್ತಾದ ಸಭಾಂಗಣ ಕ್ಷಣ ಮಾತ್ರದಲ್ಲಿ ತುಂಬಿ ತುಳುಕ್ಯಾಡತೊಡಗಿತು. ಆಸನಗಳು ಸಾಲದಾಗಿ ನೆಲದ ಮೇಲೆ, ಅಕ್ಕಪಕ್ಕದಲ್ಲಿ ಕುಳಿತು ಕೇಂದ್ರ ಸಮಿತಿ ಕಾರ್ಯದರ್ಶಿಗಳಾದ ಮರಿಯಂ ಧವಳೆಯವರ ನಿರರ್ಗಳ ಮಾತುಗಳನ್ನು ಆಲಿಸಿದರು. ಅವರು ದೇಶದ ಜನತೆಯನ್ನು ನುಂಗಿ ನೊಣೆಯುತ್ತಿರುವ ಬೆಲೆ ಏರಿಕೆ, ಹೆಚ್ಚುತ್ತಿರುವ ಕೋಮುದ್ವೇಷ, ನಿರುದ್ಯೋಗ, ಸರಕಾರದ ಹೊಣೆಗೇಡಿತನ, ಜಿಎಸ್ಟಿ ಇವೆಲ್ಲವೂ ದೇಶವನ್ನು ದಿವಾಳಿ ಮಾಡಿವೆ. ಫ್ಯಾಸಿಸ್ಟ್ ಧಾಳಿ ಜನರ ಬದುಕನ್ನು ಧೂಳಿಪಟ ಮಾಡಿವೆ. ಜನತೆ ತಮ್ಮ ಬದುಕಿನ ನಿಜವಾದ ಸಮಸ್ಯೆಗಳ ಬಗೆಗೆ ಎಚ್ಚೆತ್ತುಕೊಳ್ಳದಂತೆ ಅವರನ್ನು ಧರ್ಮದ್ವೇಷದ ಆಫೀಮಿನಲ್ಲಿ ತೇಲಾಡಿಸಲಾಗುತ್ತಿದೆ ಎಂದು ಹೇಳಿದರು. ನಂತರ ಇನ್ನೊಬ್ಬ ಅತಿಥಿಗಳಾಗಿದ್ದ ಕೇಂದ್ರ ಸಮಿತಿಯ ಉಪಾಧ್ಯಕ್ಷರಾದ ಯು. ವಾಸುಕಿಯವರು ಮಾತನಾಡುತ್ತಾ, ಈ ಮಾರಣಾಂತಿಕ ಬೆಲೆಏರಿಕೆಗೆ ಮೋದಿ ಸರಕಾರವೇ ನೇರವಾಗಿ ಹೊಣೆಯಾಗಿದೆ ಎಂದು ಹೇಳಿದರು. ಬೆಲೆ ಏರಿಕೆ ಕುರಿತು ಮಾತಾಡಿದರೆ ದೇಶದ್ರೋಹದ ಪಟ್ಟಿಗೆ ಸೇರಿಸಲಾಗುತ್ತಿದೆ. ದಿನಕ್ಕೊಂದು ಜನವಿರೋಧಿ ಕಾನೂನುಗಳನ್ನು ವಿರೋಧ ಪಕ್ಷಗಳ ಕನಿಷ್ಟ ಗಮನಕ್ಕೂ ತರದೆ ಜಾರಿ ಮಾಡಲಾಗುತ್ತಿದೆ. ಭಾರತ ದೇಶದಲ್ಲಿ ಮೊಟ್ಟಮೊದಲ ಬಾರಿಗೆ ತಿನ್ನುವ ಪದಾರ್ಥಗಳಾದ ಅಕ್ಕಿ, ಗೋಧಿ, ಬೆಲ್ಲ ಬೇಳೆ, ಮಜ್ಜಿಗೆ, ಮೊಸರು ಎಲ್ಲದರ ಮೇಲೆ 5% ಜಿಎಸ್‌ಟಿ ಹೇರಲಾಗಿದೆ. ಶಿಕ್ಷಣದ ಮೇಲೆ 18% ಜಿಎಸ್‌ಟಿ ಹೇರಲಾಗಿದೆ. ಒಬ್ಬ 6 ವರ್ಷದ ಪುಟ್ಟ ಹುಡುಗಿ ಪ್ರಧಾನಮಂತ್ರಿ ಮೋದಿಗೆ ಪತ್ರ ಬರೆದಿದ್ದಾಳೆ. ಸರ್, ಶಾಲಾ ಶುಲ್ಕಗಳನ್ನು ಇಷ್ಟು ಏರಿಸಿದ್ದೀರಲ್ಲ, ನಮ್ಮ ತಾಯಿ ಪೆನ್ನು ಕೇಳಿದರೆ ಸಿಟ್ಟು ಮಾಡುತ್ತಾಳೆ. ಇಂಕ್ ಕೇಳಿದರೆ ಬೈಯ್ದು ಬಿಡುತ್ತಾಳೆ. ಮೋದಿಯವರೇ ನಮ್ಮಂಥವರು ಶಿಕ್ಷಣ ಪಡೆಯಬಾರದೇ ಎಂದು ಕೇಳಿದೆ. ಸಂಸತ್ತಿನಲ್ಲಿ ಆಳುವ ಸರಕಾರವನ್ನು ವಿಮರ್ಶೆ ಮಾಡುವಂತಿಲ್ಲ. ಭ್ರಷ್ಟ, ಶಕುನಿ, ಲೂಟಿಕೋರ, ಲೈಂಗಿಕ ದೌರ್ಜನ್ಯ, ಜುಮಲಾಜೀವಿ ಇತ್ಯಾದಿ ಶಬ್ದಗಳನ್ನು ಬಳಸಿ ಸರಕಾರವನ್ನು ಟೀಕಿಸುವಂತಿಲ್ಲ. ಆದರೆ ಮೋದಿ ಮಾತ್ರ ಮುಷ್ಕರ ಮಾಡುತ್ತಿದ್ದ ರೈತರನ್ನು ಆಂದೋಲನಜೀವಿ ಎಂದು ಕರೆಯಬಹುದಂತೆ. ಎಲ್ಲ ಸರ್ವಾಧಿಕಾರಿಗಳು ಅನತಿ ಕಾಲದಲ್ಲಿಯೇ ಹೇಳ ಹೆಸರಿಲ್ಲದಂತೆ ಮಾಯವಾಗಿದ್ದಾರೆ. ಪಕ್ಕದ ಶ್ರೀಲಂಕಾದಲ್ಲಿ ಇಪ್ಪತ್ತು ವರ್ಷ ಆಳ್ವಿಕೆ ನಡೆಸಿದ ಮಹಿಂದ್ರಾ ರಾಜಪಕ್ಸೆ ರಾತ್ರೋ ರಾತ್ರಿ ದೇಶ ಬಿಟ್ಟು ಓಡಿ ಹೋಗಿದ್ದಾರೆ. ಮೋದಿಯವರೆ ನಿಮ್ಮ ಕೊನೆಯ ದಿನಗಳು ಹತ್ತಿರವಾಗುತ್ತಿವೆ. ಇಂದಿನಿಂದಲೆ ನಿಮ್ಮ ಅಂತಿಮ ದಿನಗಳ ಎಣಿಕೆ ಮಾಡಿರಿ. ನಿಮ್ಮ ದುರಾಡಳಿತದಿಂದ ನಲುಗಿದ ಜನತೆ ನಿಮ್ಮನ್ನು ಗದ್ದುಗೆಯಿಂದ ಇಳಿಸಲು ಮುಂದಾಗಿದ್ದಾರೆ ಎಂದು ಅವರು ದೇಶದ ವಾಸ್ತವ ಸ್ಥಿತಿಯನ್ನು ತೆರೆದಿಟ್ಟರು.

ಕೊನೆಯದಾಗಿ ನೂತನ ರಾಜ್ಯಾಧ್ಯಕ್ಷರಾದ ಮೀನಾಕ್ಷಿ ಬಾಳಿಯವರು ಮಾತನಾಡುತ್ತ, ಮೋದಿಯವರೇ ಸುಳ್ಳು ಹೇಳುತ್ತ ಜನರ ಶವಗಳ ಮೇಲೆ ರಾಜಕಾರಣ ಮಾಡಬೇಡಿ. ಬೊಮ್ಮಾಯಿಯವರೇ ಬಡ ಜನರ ಬಗೆಗೆ ಕನಿಷ್ಟ ಕಾಳಜಿ ಇರಲಿ ಎಂದು ಹೇಳಿದರು. ಕೊನೆಯದಾಗಿ ದೇವಿ ಅವರು ಅಧ್ಯಕ್ಷೀಯ ಮಾತುಗಳನ್ನು ಆಡಿದರು. ಜನವಾದಿ ಸಂಘಟನೆಯ ಕಲಬುರಗಿ ಜಿಲ್ಲಾ ಕಾರ್ಯದರ್ಶಿಯಾದ ಪದ್ಮಿನಿ ಕಿರಣಗಿಯವರು ವಂದನಾರ್ಪಣೆ ಮಾಡಿದರು.

ಇದೇ ಸಂದರ್ಭದಲ್ಲಿ ಅಫಜಲಪೂರದ ದೇಸಾಯಿ ಕಲ್ಲೂರು ಮತ್ತು ಕೊಳ್ಳೂರು ಗ್ರಾಮಗಳಲ್ಲಿ ಸಾರಾಯಿ ವಿರುದ್ಧ ಹೋರಾಟ ಮಾಡಿದ ಮಹಿಳೆಯರನ್ನು ಸನ್ಮಾನಿಸಲಾಯಿತು. ತದನಂತರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಸಾಯಂಕಾಲದವರೆಗೂ ನಡೆದವು. ಹುಮನಾಬಾದಿನ ಸಂಗಾತಿಗಳು ಕೋಲಾಟ ಆಡಿದರೆ, ಲಂಬಾಣಿ ಗೆಳತಿಯರು ಗೋರಮಾಟಿ ಕುಣಿತ ಪ್ರದರ್ಶಿಸಿದರು. ಸಮುದಾಯ ಸಂಗಾತಿಗಳು ಕ್ರಾಂತಿ ಗೀತೆಗಳನ್ನು ಹಾಡಿದರು. ಸಭಾಂಗಣದಲ್ಲಿದ್ದ ಹಿರಿ ಕಿರಿಯರೆನ್ನದೆ ಎಲ್ಲ ಸಂಗಾತಿಗಳು ನೃತ್ಯ ಮಾಡಿ ಸಂಭ್ರಮಿಸಿದ್ದು ಅವಿಸ್ಮರಣೀಯವಾಗಿತ್ತು. ಸತತ ನಾಲ್ಕು ದಿನಗಳವರೆಗೆ ಸ್ವಯಂ ಸೇವಕರಾಗಿ ಶ್ರಮಿಸಿದ ನಗರದ ವೀರಮ್ಮ ಗಂಗಸಿರಿ ಕಾಲೇಜಿನ ವಿದ್ಯಾರ್ಥಿನಿಯರು, ಸಂವಾದ ಸಂಸ್ಥೆಯ ಮಕ್ಕಳು ಕುಣಿದು ಕುಪ್ಪಳಿಸಿ ತಮ್ಮ ದಣಿವನ್ನು ಆರಿಸಿಕೊಂಡದ್ದು ಅಭಿನಂದನಾರ್ಹವಾಗಿತ್ತು.

ಹೊಸ ಕನಸುಗಳು, ಹೋರಾಟದ ಛಲವನ್ನು ಹೊತ್ತು ರಾಜ್ಯದ ಮೂಲೆ ಮೂಲೆಗಳಿಂದ ಬಂದ ಪ್ರತಿನಿಧಿಗಳು ಕಲಬುರಗಿಯ ಸ್ಪೇಷಲ್ ಬಿರಿಯಾನಿಯ ರುಚಿ ಸವಿಯುತ್ತ ಜನವಾದಿಯ ಸ್ಪಷ್ಟ ನೋಟ ದಿಟ್ಟ ಹೆಜ್ಜೆಗಳನ್ನಿಡುತ್ತಾ ತಮ್ಮ ಊರುಗಳಿಗೆ ಪಯಣಿಸಿದರು. ●

ನೂತನ ರಾಜ್ಯ ಸಮಿತಿ ಮತ್ತು ಪದಾಧಿಕಾರಿಗಳನ್ನು ಸಮ್ಮೇಳನವು ಆಯ್ಕೆ ಮಾಡಿತು.

ಡಾ. ಮೀನಾಕ್ಷಿ ಬಾಳಿ ರಾಜ್ಯ ಅಧ್ಯಕ್ಷೆ

ಉಪಾಧ್ಯಕ್ಷರಾಗಿ

ಕೆ. ನೀಲಾ, ಕೆ.ಎಸ್. ವಿಮಲ, ಗೌರಮ್ಮ, ಕೆ.ಎಸ್. ಲಕ್ಷ್ಮಿ, ಇಸಾ ಬೇಗಂ.

ಕಾರ್ಯದರ್ಶಿಯಾಗಿ

ದೇವಿ

ಸಹಕಾರ್ಯದರ್ಶಿಯಾಗಿ

ಸುಶೀಲಾ, ಚಂದ್ರಕುಮಾರಿ, ಸುನೀತಾ, ಚಂದಮ್ಮ, ಜಯಂತಿ ಶೆಟ್ಟಿ.

ಖಜಾಂಚಿಯಾಗಿ

ಲಲಿತಾ ಶಣೈ

ಒಳಗೊಂಡಂತೆ 33 ಜನರ ನೂತನ ರಾಜ್ಯ ಸಮಿತಿಯನ್ನು 11ನೇ ರಾಜ್ಯ ಸಮ್ಮೇಳನ ಆಯ್ಕೆ ಮಾಡಿತು.

ಪಿಎಂಎಲ್ಎ ಕಾಯ್ದೆಗೆ ತಿದ್ದುಪಡಿಗಳನ್ನು ಎತ್ತಿ ಹಿಡಿದಿರುವ ತೀರ್ಪು ಅಪಾಯಕಾರಿ–ಪ್ರತಿಪಕ್ಷಗಳ ಜಂಟಿ ಹೇಳಿಕೆ

ಪಿಎಂಎಲ್ಎ, 2002 (Prevention of Money Laundering Act-ಹಣವನ್ನು ಮಡಿಗೊಳಿಸುವುದನ್ನು ತಡೆಯುವ ಕಾಯ್ದೆ)ಗೆ ತಂದಿರುವ ತಿದ್ದುಪಡಿಗಳನ್ನು ಸಂಪೂರ್ಣವಾಗಿ ಎತ್ತಿ ಹಿಡಿದಿರುವ ಸುಪ್ರಿಂ ಕೋರ್ಟಿನ ಇತ್ತೀಚಿನ ತೀರ್ಪು ದೀರ್ಘಕಾಲೀನ ಪರಿಣಾಮಗಳನ್ನು ಉಂಟು ಮಾಡಬಹುದು. ಈ ಬಗ್ಗೆ ತಮಗೆ ಇರುವ ಆಳವಾದ ಸಂದೇಹಗಳನ್ನು ದಾಖಲಿಸುತ್ತಿದ್ದೇವೆ ಎಂದು ಎಡಪಕ್ಷಗಳೂ ಸೇರಿದಂತೆ ಸುಮಾರಾಗಿ 17 ಪ್ರತಿಪಕ್ಷಗಳು ಒಂದು ಜಂಟಿ ಹೇಳಿಕೆಯನ್ನು ಪ್ರಕಟಿಸಿವೆ. ಕಾಂಗ್ರೆಸ್, ಟಿಎಂಸಿ, ಎಎಪಿ, ಆರ್‌ಜೆಡಿ, ಆರ್‌ಎಲ್‌ಡಿ, ಎಸ್‌ಪಿ, ಡಿಎಂಕೆ, ಶಿವಸೇನೆ, ಎನ್‌ಸಿಪಿ, ಜೊತೆಗೆ ಸಿಪಿಐ(ಎಂ), ಸಿಪಿಐ ಮತ್ತು ಆರ್‌ಎಸ್‌ಪಿ ಮುಖಂಡರು ಇದಕ್ಕೆ ಸಹಿ ಮಾಡಿದ್ದಾರೆ.

ಈ ಅಪಾಯಕಾರೀ ತೀರ್ಪು ಬಹಳ ದಿನ ಉಳಿಯುವುದಿಲ್ಲ, ಬೇಗನೇ ಸಂವಿಧಾನಿಕ ಅಂಶಗಳ ಕೈಮೇಲಾಗುತ್ತದೆ ಎಂದು ಈ ಪ್ರತಿಪಕ್ಷಗಳು ತಮ್ಮ ಜಂಟಿ ಹೇಳಿಕೆಯಲ್ಲಿ ಆಶಿಸಿವೆ.

ಈ ತಿದ್ದುಪಡಿಗಳಲ್ಲಿ ಕೆಲವನ್ನು ಹಣಕಾಸು ಕಾಯ್ದೆಯ ಮೂಲಕ ಶಾಸನವಾಗಿಸುವುದು ಸರಿಯೇ ಎಂದು ಪರೀಕ್ಷಿಸದೆ ಈ ತೀರ್ಪು ನೀಡಲಾಗಿದೆ. ಮುಂದೆ, ಹಣಕಾಸು ಕಾಯ್ದೆಯ ಮೂಲಕ ತಂದ ತಿದ್ದುಪಡಿಗಳು ಕಾನೂನಿನ ಪ್ರಕಾರ ಕೆಟ್ಟದ್ದು ಎಂದು ಸುಪ್ರಿಂ ಕೋರ್ಟ್ ಹೇಳಿದರೆ, ಈ ಸಮಸ್ತ ಕೆಲಸ ನಿಷ್ಪ್ರಯೋಜಕವಾಗುತ್ತದೆ ಮತ್ತು ನ್ಯಾಯಾಂಗ ಸಮಯವನ್ನು ವ್ಯರ್ಥಗೊಳಿಸಿದಂತಾಗುತ್ತದೆ ಎಂದು ಈ ಪಕ್ಷಗಳು ಹೇಳಿವೆ.

"ನಾವು ಸುಪ್ರಿಂ ಕೋರ್ಟನ್ನು ಸದಾ ಗೌರವಿಸುತ್ತೇವೆ, ಅದಕ್ಕೆ ಅತ್ಯುನ್ನತ ಗೌರವವನ್ನು ಕೊಡುತ್ತೇವೆ. ಆದರೂ ಕೂಡ, ಈ ತೀರ್ಪು ಕೊಡುವ ಮೊದಲು ತಿದ್ದುಪಡಿಗಳನ್ನು ಹಣಕಾಸು ಕಾಯ್ದೆಯ ಮೂಲಕ ತರುವುದು ಸಾಂವಿಧಾನಕವೇ ಎಂಬುದನ್ನು ಒಂದು ದೊಡ್ಡ ಪೀಠ ಪರೀಕ್ಷಿಸುತ್ತಿರುವಾಗ, ಅದರ ತೀರ್ಪಿಗೆ ಕಾಯಬೇಕಿತ್ತು. ಬಹಳ ಆಳಕ್ಕೆ ಹೋಗುವ ಈ ತಿದ್ದುಪಡಿಗಳು ಮತ್ತು ಹಣವನ್ನು ಮಡಿಗೊಳಿಸುವುದಕ್ಕೆ ಸಂಬಂಧಪಟ್ಟ ಇವೇ ತಿದ್ದುಪಡಿಗಳನ್ನು ಮತ್ತು ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು, ತನ್ನ ರಾಜಕೀಯ ವಿರೋಧಿಗಳ ಮೇಲೆ ಕಿಡಿಗೇಡಿತನದಿಂದ ಮತ್ತು ದುರುದ್ದೇಶದಿಂದ ಗುರಿಯಿಡುವ ಅತ್ಯಂತ ಕೆಟ್ಟದಾದ ರಾಜಕೀಯ ದ್ವೇಷ ಸಾಧನೆಯಲ್ಲಿ ತೊಡಗಿರುವ ಒಂದು ಸರಕಾರದ ಕೈಗಳನ್ನು ಬಲಪಡಿಸಿದೆ" ಎಂದು ಮುಂದುವರೆದು ಈ ಜಂಟಿ ಹೇಳಿಕೆ ಅಭಿಪ್ರಾಯ ಪಟ್ಟಿದೆ.

ಈ ಕಾಯ್ದೆಯಲ್ಲಿ ವಿಪರೀತಕ್ಕೆ ಹೋಗದಂತೆ ತಡೆಯುವ ಮತ್ತು ಸಮತೋಲನ ಕಾಯ್ದುಕೊಳ್ಳುವ ಅಂಶಗಳ ಕೊರತೆಯಿದೆ ಎಂಬುದರ ಕುರಿತು ಒಂದು ಸ್ವತಂತ್ರ ತೀರ್ಪನ್ನು ಕೊಡಬೇಕು ಎಂದು ನ್ಯಾಯಾಂಗದ ಈ ಸರ್ವೋಚ್ಚ ಪ್ರಾಧಿಕಾರವನ್ನು ಕೋರಲಾಗಿತ್ತು. ಆದರೆ ಅದು ಈ ಕರಾಳ ತಿದ್ದುಪಡಿಗಳನ್ನು ಬೆಂಬಲಿಸಲು ಕಾರ್ಯಾಂಗ ಕೊಟ್ಟಿರುವ ತರ್ಕಗಳನ್ನೇ ಸುಮಾರಾಗಿ ಯಥಾವತ್ತಾಗಿ ಉಲ್ಲೇಖಿಸಿರುವ ಬಗ್ಗೆ ತೀವ್ರ ನಿರಾಸೆಯನ್ನೂ ಈ ಪ್ರತಿಪಕ್ಷಗಳು ವ್ಯಕ್ತಪಡಿಸಿವೆ. ಈ ಅಪಾಯಕಾರೀ ತೀರ್ಪು ಬಹಳ ದಿನ ಉಳಿಯುವುದಿಲ್ಲ, ಬೇಗನೇ ಸಂವಿಧಾನಿಕ ಅಂಶಗಳ ಕೈಮೇಲಾಗುತ್ತದೆ ಎಂದು ಈ ಪ್ರತಿಪಕ್ಷಗಳು ತಮ್ಮ ಜಂಟಿ ಹೇಳಿಕೆಯಲ್ಲಿ ಆಶಿಸಿವೆ.

ಈ ಬಗ್ಗೆ ಟಿಪ್ಪಣಿ ಮಾಡುತ್ತ, ದೇಶದ ನ್ಯಾಯಾಂಗ, ನಿರ್ದಿಷ್ಟವಾಗಿ ಸುಪ್ರಿಂ ಕೋರ್ಟ್ ಸನ್ನಿವೇಶವನ್ನು ಗಮನಿಸಿ ಈ ತೀರ್ಪನ್ನು ತಾನಾಗಿಯೇ ತ್ವರಿತವಾಗಿ ಹಿಂದಕ್ಕೆ ಕರೆಸಬೇಕು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ಕಾರ್ಮಿಕರು ರೈತರು ಮತ್ತು ಕೃಷಿ ಕಾರ್ಮಿಕರ ಜಂಟಿ ಹೋರಾಟ

ಸ್ವಾತಂತ್ರ್ಯ ಹೋರಾಟದ ಕನಸುಗಳನ್ನು ನಿರಾಕರಿಸುವ ಧೋರಣೆಗಳಿಗೆ ಪ್ರತಿರೋಧಕ್ಕೆ ಕರೆ

ಸಿಐಟಿಯು, ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಮತ್ತು ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ (ಎಐಎಡಬ್ಲ್ಯುಯು) ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಕಾರ್ಮಿಕ–ವಿರೋಧಿ, ರೈತ ವಿರೋಧಿ, ಜನವಿರೋಧಿ ಮತ್ತು ರಾಷ್ಟ್ರ–ವಿರೋಧಿ ಧೋರಣೆಗಳ ವಿರುದ್ಧ ಜಂಟಿ ದೇಶವ್ಯಾಪಿ ಅಭಿಯಾನ ಮತ್ತು ಜಂಟಿ ಕಾರ್ಯಾಚರಣೆಗಳನ್ನು ಕೈಗೊಳ್ಳಲು ನಿರ್ಧರಿಸಿವೆ. ಅವು ಹೀಗಿವೆ:

* ಆಗಸ್ಟ್ 1, 2022 ರಂದು ಭೂಮಿ, ಕೂಲಿ ಮತ್ತು ಮನರೇಗ ಅಡಿಯಲ್ಲಿ ಕೆಲಸ ಇತ್ಯಾದಿಗಳ ಬೇಡಿಕೆಗಳ ಮೇಲೆ ದೇಶದ ಕೃಷಿ ಕಾರ್ಮಿಕರ ಸಂಘಗಳ ಜಂಟಿ ಹೋರಾಟ. ಇದಕ್ಕೆ ಸಿಐಟಿಯು ಮತ್ತು ಎಐಕೆಎಸ್ ಬೆಂಬಲ ಮತ್ತು ಸೌಹಾರ್ದ ಕಾರ್ಯಕ್ರಮ..
* ಆಗಸ್ಟ್ 1 ರಿಂದ ಹದಿನೈದು ದಿನಗಳ ಪ್ರಚಾರಾಂದೋಲನ. ಇದರಲ್ಲಿ ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರ ಬೇಡಿಕೆಗಳನ್ನು ದೇಶದ ಮೂಲೆ–ಮೂಲೆಗಳಲ್ಲಿ ತಳಮಟ್ಟದವರೆಗೆ ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರ ನಡುವೆ ಒಯ್ದು ಜನಜನಿತಗೊಳಿಸಲಾಗುವುದು. ಕರಪತ್ರಗಳ ವಿತರಣೆ, ಸಭೆಗಳು ಮತ್ತು ಇತರ ವಿಧಾನಗಳ ಮೂಲಕ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕರು, ರೈತರು ಮತ್ತು ಇತರ ವರ್ಗಗಳ ಶ್ರಮಜೀವಿಗಳ ಪಾತ್ರವನ್ನು ಮತ್ತು ಸ್ವತಂತ್ರ ಭಾರತದ ಸ್ವರೂಪಕ್ಕೆ ಸಂಬಂಧಪಟ್ಟಂತೆ ದುಡಿಯುವ ಜನಸಮೂಹಗಳ ಕಣ್ಣೋಟವನ್ನು ಎತ್ತಿ ತೋರಿಸಲಾಗುವುದು ಮತ್ತು ಬ್ರಿಟಿಷ್ ವಸಾಹತುಶಾಹಿ ವಿರುದ್ಧ ಹೋರಾಟದಲ್ಲಿ ಆರ್‌ಎಸ್‌ಎಸ್‌ನ ದಾಸ್ಯ ಮನೋಭಾವವನ್ನು ಮತ್ತು ಜನರಿಗೆ ಅವರ ದ್ರೋಹವನ್ನು ಬಹಿರಂಗ ಪಡಿಸಲಾಗುವುದು.. ಈ ಅಭಿಯಾನವು ಆಗಸ್ಟ್ 14 ರಂದು ಸಂಜೆ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ಜಂಟಿ ಅಣಿನೆರಿಕೆ ಮತ್ತು ಜಾಗರಣಾ ಕಾರ್ಯಕ್ರಮಗಳು ಮತ್ತು ದೇಶದ ಸ್ವಾತಂತ್ರ್ಯದ 75 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ರಾಷ್ಟ್ರಧ್ವಜಾರೋಹಣದೊಂದಿಗೆ ಸಮಾಪನಗೊಳ್ಳುತ್ತವೆ.
* 'ಕ್ವಿಟ್ ಇಂಡಿಯಾ' ದಿನದ ಸ್ಮರಣಾರ್ಥ 8ನೇ ಆಗಸ್ಟ್ 2022 ರಂದು ಮೂರೂ ಸಂಘಟನೆಗಳಿಂದ ಒಟ್ಟಾಗಿ ಜಿಲ್ಲಾ ಕೇಂದ್ರಗಳಲ್ಲಿ ಮತಪ್ರದರ್ಶನಗಳು.
* ಈ ಅಭಿಯಾನದ ಮುಂದುವರಿಕೆಯಾಗಿ, ಭವಿಷ್ಯದ ಪ್ರಚಾರ ಮತ್ತು ಕಾರ್ಯಾಚರಣೆಗಳನ್ನು ರೂಪಿಸಲು ಸೆಪ್ಟೆಂಬರ್ 5 ರಂದು ರಾಷ್ಟ್ರ ರಾಜಧಾನಿ ದೆಹಲಿಯ ತಾಲ್ಕಟೋರಾ ಕ್ರೀಡಾಂಗಣದಲ್ಲಿ ಸಿಐಟಿಯು, ಎಐಕೆಎಸ್ ಮತ್ತು ಎಐಎಡಬ್ಲ್ಯುಯು ಜಂಟಿ ರಾಷ್ಟ್ರೀಯ ಸಮಾವೇಶ.

'ಆಜಾದಿ ಕಾ ಅಮೃತ ಮಹೋತ್ಸವ' ಎಂದು ಬಹಳ ಸದ್ದು–ಗದ್ದಲದ ಪ್ರಚಾರ ನಡೆಸುತ್ತಿರುವ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಕಾರ್ಯತಃ, ಬ್ರಿಟಿಷ್ ವಸಾಹತುಶಾಹಿ ವಿರುದ್ಧದ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮಲ್ಲಿದ್ದ ಎಲ್ಲವನ್ನೂ, ತಮ್ಮ ಬದುಕುಗಳನ್ನೂ ಕೂಡ ತ್ಯಾಗ ಮಾಡಿದ ಲಕ್ಷಾಂತರ ಶ್ರಮಜೀವಿಗಳು, ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರು ಮತ್ತು ಇತರ ವರ್ಗಗಳ ಜನರ ಆಕಾಂಕ್ಷೆಗಳನ್ನು ಮತ್ತು ಕನಸುಗಳನ್ನು ನಿರಾಕರಿಸುವ ನೀತಿಗಳನ್ನು ಆಕ್ರಮಣಕಾರಿಯಾಗಿ ಅನುಸರಿಸುತ್ತಿದೆ ಎಂದು ಈ ಮೂರು ಸಂಘಟನೆಗಳು ನೀಡಿರುವ ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

ಪ್ರಸ್ತುತ ಮೋದಿ ಆಡಳಿತದಲ್ಲಿ ಕಾರ್ಮಿಕರು, ರೈತರು, ಕೃಷಿ ಕಾರ್ಮಿಕರು, ಕುಶಲಕರ್ಮಿಗಳು ಮತ್ತು ಶ್ರಮಜೀವಿಗಳ ಎಲ್ಲಾ ವರ್ಗಗಳ ಸ್ಥಿತಿಯು ನಿರಂತರವಾಗಿ ಹದಗೆಡುತ್ತಿದೆ. ಅದು ಕೋವಿಡ್ ಸಾಂಕ್ರಾಮಿಕವನ್ನು ಜನರ ಆರೋಗ್ಯ, ಜೀವನ ಮತ್ತು ಜೀವನೋಪಾಯವನ್ನು ರಕ್ಷಿಸಲು ಕ್ರಮಗಳನ್ನು ತೆಗೆದುಕೊಳ್ಳುವ ಬದಲು ಜನರ ಮೇಲೆ ಹೆಚ್ಚಿನ ಹೊರೆಗಳನ್ನು ಹಾಕುವ ಅವಕಾಶವಾಗಿ ಬಳಸಿಕೊಂಡಿದೆ. ಜನರಿಗೆ ಯಾವುದೇ ಪರಿಹಾರವನ್ನು ನೀಡುವ ಬದಲು ಅದು ಸಾರ್ವಜನಿಕ ಹಣವನ್ನು ವಿದೇಶಿ ಏಕಸ್ವಾಮ್ಯ ಕಂಪನಿಗಳು ಸೇರಿದಂತೆ ದೊಡ್ಡ ಕಾರ್ಪೊರೇಟ್‌ಗಳಿಗೆ 'ಉತ್ತೇಜನೆ' ಮತ್ತು ರಿಯಾಯಿತಿಗಳನ್ನು ನೀಡಲು ಬಳಸಿದೆ ಮತ್ತು ಅಪಾರ ಸಂಪತ್ತನ್ನು ಸಂಗ್ರಹಿಸಲು ಸಹಾಯ ಮಾಡಿದೆ. ಅದರ ನೀತಿಗಳು ಸಂಪತ್ತು ಮತ್ತು ಆದಾಯದ ಅಸಮಾನತೆಗಳಲ್ಲಿ ಅಭೂತಪೂರ್ವ ಹೆಚ್ಚಳಕ್ಕೆ ಕಾರಣವಾಗಿವೆ.

ಕೃಷಿ ಲಾಗುವಾಡುಗಳು ಸೇರಿದಂತೆ ಎಲ್ಲ ಅಗತ್ಯ ವಸ್ತುಗಳ ಬೆಲೆಗಳಲ್ಲಿ ಏರಿಕೆಯಾಗಿದೆ. ಕಾರ್ಮಿಕರ ನಿಜ ವೇತನ ಇಳಿಯುತ್ತಿದೆ. ಕೃಷಿ ಕಾಯಕ ನಡೆಸುವುದು ರೈತರಿಗೆ ಅದರಲ್ಲೂ ಬಡ ರೈತರಿಗೆ ದುಸ್ತರವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಕೆಲಸದ ದಿನಗಳು ಕುಸಿದಿವೆ. ರೈತರ ಆದಾಯವನ್ನು ದ್ವಿಗುಣಗೊಳಿಸುವ ಮೋದಿ ಸರ್ಕಾರದ ಬಹು ಪ್ರಚಾರಿತ ಆಶ್ವಾಸನೆಯ ಪೊಳ್ಳುತನ ಬಯಲಾಗಿದೆ, ಕೃಷಿ ಆದಾಯವುಹೆಚ್ಚುವ ಬದಲು ತೀವ್ರವಾಗಿ ಕುಸಿದಿದೆ. ಮನರೇಗ ಕಾಮಗಾರಿಗೆ ಬೇಡಿಕೆ ಹೆಚ್ಚಿದ್ದರೂ, ಸರ್ಕಾರ ಈ ಯೋಜನೆಗೆ ಬಜೆಟ್ ಹಂಚಿಕೆಯನ್ನು ಕಡಿಮೆ ಮಾಡಿದೆ. ಬಹುತೇಕ ಎಲ್ಲ ರಾಜ್ಯಗಳಲ್ಲಿ ಮಾಡಿದ ಕೆಲಸಕ್ಕೆ ಕೂಲಿ ಹಲವು ತಿಂಗಳುಗಳಿಂದ ಬಾಕಿ ಇದೆ. ನಿರುದ್ಯೋಗ ಆತಂಕಕಾರಿ ಮಟ್ಟ ತಲುಪಿದೆ. ಲಕ್ಷಗಟ್ಟಲೆ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು ಮುಚ್ಚಿದ್ದು, ಕೋಟ್ಯಂತರ ಉದ್ಯೋಗ ನಷ್ಟವಾಗಿದೆ. ಮೋದಿ ಸರ್ಕಾರವು ಘೋಷಿಸಿದ ಎಲ್ಲಾ ರಿಯಾಯಿತಿಗಳು ಮತ್ತು ಉತ್ತೇಜನೆಗಳ ಹೊರತಾಗಿಯೂ, ಖಾಸಗಿ ವಲಯದಲ್ಲಿ ಯಾವುದೇ ಹೊಸ ಉದ್ಯೋಗ ಸೃಷ್ಟಿಸುವ ಹೂಡಿಕೆಯು ಬರುತ್ತಿಲ್ಲ.

ಮೋದಿ ಸರ್ಕಾರವು ಮೂರು ರೈತ ವಿರೋಧಿ ಕಾನೂನುಗಳನ್ನು ರದ್ದುಗೊಳಿಸಲೇ ಬೇಕಾಗಿ ಬಂದರೂ ಖಾತರಿಪಡಿಸಿದ ಕನಿಷ್ಠ ಬೆಂಬಲ ಬೆಲೆಗೆ ಕಾನೂನಾತ್ಮಕ ಖಾತರಿ ಸಂಬಂಧಿಸಿದ ತನ್ನ ಭರವಸೆಗಳನ್ನು ಜಾರಿಗೆ ತರಲು ಅದು ಯಾವುದೇ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಂಡಿಲ್ಲ. ವಿದ್ಯುಚ್ಛಕ್ತಿಯನ್ನು ಖಾಸಗೀಕರಣಗೊಳಿಸುವ ವಿದ್ಯುತ್ ತಿದ್ದುಪಡಿ ಮಸೂದೆಯನ್ನು ತರುವ ಹುನ್ನಾರವನ್ನು ಮುಂದುವರೆಸುತ್ತಿದೆ. ಕಾರ್ಮಿಕರ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವ ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತರುವ ತನ್ನ ಪ್ರಯತ್ನಗಳನ್ನು ಮುಂದುವರಿಸುತ್ತಿದೆ. ಖಾಸಗೀಕರಣದ ಧಾವಂತ ಮುಂದುವರೆದಿದೆ, ಅದೀಗ ರಾಷ್ಟ್ರೀಯ ಸೊತ್ತು ನಗದೀಕರಣ ಪೈಪ್‌ಲೈನ್ ಮತ್ತು ರಾಷ್ಟ್ರೀಯ ಭೂಮಿ ನಗದೀಕರಣ ನಿಗಮದ ರಚನೆಯೊಂದಿಗೆ ಹೊಸ ಅವತಾರ ತಳೆದಿದೆ.

ಸರಕಾರ ಸಾಂವಿಧಾನಿಕ ತತ್ವಗಳನ್ನು ದುರ್ಬಲಗೊಳಿಸುತ್ತಿದೆ, ಜನರ ಮೂಲಭೂತ ಮತ್ತು ಮಾನವ ಹಕ್ಕುಗಳ ಮೇಲೆ ದಾಳಿ ಮಾಡುತ್ತಿದೆ ಮತ್ತು ತನ್ನ ನೀತಿಗಳಿಗೆ ಎಲ್ಲಾ ಭಿನ್ನಾಭಿಪ್ರಾಯ ಮತ್ತು ವಿರೋಧವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದೆ. ಜನರ ಮೂಲಭೂತ ಪ್ರಜಾಸತ್ತಾತ್ಮಕ ಮತ್ತು ಮಾನವ ಹಕ್ಕುಗಳ ಮೇಲೆ ನಿರ್ಲಜ್ಜವಾಗಿ ದಾಳಿ ಮಾಡಲಾಗುತ್ತಿದೆ. ಪತ್ರಕರ್ತರು, ಬುದ್ಧಿಜೀವಿಗಳು, ಸಾಮಾಜಿಕ ಕಾರ್ಯಕರ್ತರು, ಮಾನವ ಹಕ್ಕುಗಳ ಹೋರಾಟಗಾರರು ಎಲ್ಲರಿಗೂ ಕಿರುಕುಳ, ಹಲ್ಲೆ, ಬಂಧನ ಮತ್ತು ಜಾಮೀನು ಇಲ್ಲದೆ ಜೈಲಿಗೆ ತಳ್ಳಲಾಗುತ್ತದೆ. ಭಿನ್ನಾಭಿಪ್ರಾಯವನ್ನು ಅಕ್ಷರಶಃ 'ಬುಲ್ಡೋಜ್' ಮಾಡಲು ಪ್ರಯತ್ನಿಸಲಾಗುತ್ತದೆ. ನಮ್ಮ ಬಹುಪಾಲು ಶ್ರಮಜೀವಿಗಳಾದ ದಲಿತರು, ಆದಿವಾಸಿಗಳು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಇತ್ಯಾದಿಗಳ ಮೇಲೆ ದಾಳಿಗಳು ಹೆಚ್ಚಿವೆ, ವಿಶೇಷವಾಗಿ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ. ಬಹುಸಂಖ್ಯಾಕವಾದಿ ಕೋಮುವಾದಿ ಶಕ್ತಿಗಳು ಜನಗಳ ಉಡುಗೆ, ಆಹಾರ, ಮದುವೆಯ ಆಯ್ಕೆ ಇತ್ಯಾದಿ ಸೇರಿದಂತೆ ಅವರ ಒಟ್ಟು ಜೀವನವನ್ನು ನಿರ್ದೇಶಿಸಲು ಹೆಚ್ಚೆಚ್ಚು ಪ್ರಯತ್ನಿಸುತ್ತಿವೆ. ಇದು ಅಲ್ಪಸಂಖ್ಯಾತ ಮೂಲಭೂತವಾದಿ ಶಕ್ತಿಗಳ ಉದಯಕ್ಕೆ ಕಾರಣವಾಗಿದೆ. ಈ ಎರಡೂ ಬಣ್ಣಗಳ ಕೋಮುವಾದ ಜನರ ಜೀವನ, ಅವರ ಏಕತೆ ಮತ್ತು ಸಾಮಾಜಿಕ ಸಾಮರಸ್ಯದ ಮೇಲೆ ವಿನಾಶಕಾರಿ ಪರಿಣಾಮವನ್ನು ಬೀರುತ್ತವೆ.

ಇಂತಹ ಸಂದರ್ಭದಲ್ಲಿ ಸಿಐಟಿಯು, ಎಐಕೆಎಸ್ ಮತ್ತು ಎಐಎಡಬ್ಲ್ಯುಯು ನವ ಉದಾರವಾದಿ ನೀತಿಗಳು ಹಾಗೂ ಆರ್‌ಎಸ್‌ಎಸ್ ಮಾರ್ಗದರ್ಶನದ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಕೋಮುವಾಧಿ ವಿಭಜಕ ಅಜೆಂಡಾದ ವಿರುದ್ಧ ದೇಶಾದ್ಯಂತ ಪ್ರಬಲ ಪ್ರತಿರೋಧವನ್ನು ಬೆಳೆಸಲು ಈ ಜಂಟಿ ಪ್ರಚಾರ ಮತ್ತು ಕಾರ್ಯಾಚರಣೆಗಳನ್ನು ನಡೆಸಲು ನಿರ್ಧರಿಸಲಾಗಿದೆ ಎಂದು ಈ ಜಂಟಿ ಹೇಳಿಕೆ ವಿವರಿಸಿದೆ.

ಧ್ವಜ ಸಂಹಿತೆಗೆ ಹಾನಿಕಾರಕ ತಿದ್ದುಪಡಿ: ತಕ್ಷಣವೇ ಹಿಂತೆಗೆದುಕೊಳ್ಳಿ

–ಗೃಹ ಮಂತ್ರಿಗಳಿಗೆ ಡಾ.ಶಿವದಾಸನ್ ಪತ್ರ

ಧ್ವಜ ಸಂಹಿತೆಗೆ ಇತ್ತೀಚೆಗೆ ತಂದಿರುವ ತಿದ್ದುಪಡಿ ಪರಿಸರ ಮತ್ತು ಸ್ಥಳೀಯ ಅರ್ಥವ್ಯವಸ್ಥೆಯ ಮೇಲೆ ಹಾನಿಕಾರಕ ಪರಿಣಾಮ ಬೀರಬಹುದು ಎಂದು ಸಿಪಿಐ(ಎಂ) ಸಂಸದ ಡಾ.ಶಿವದಾಸನ್ ಗೃಹ ಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಭಾರತದ ಧ್ವಜಸಂಹಿತೆ, 2002 "ಭಾರತದ ರಾಷ್ಟ್ರಧ್ವಜ ಕೈಯಿಂದ ನೂತಿರುವ ಮತ್ತು ಕೈಯಿಂದ ನೇಯ್ದಿರುವ ಉಣ್ಣೆ/ ಹತ್ತಿ/ ರೇಷ್ಮೆ ಖಾದಿಯಿಂದ ಮಾಡಿದ್ದಾಗಿರುತ್ತದೆ" ಎಂದು ಹೇಳಿತ್ತು. ಆದರೆ ಸರಕಾರ ಇತ್ತೀಚೆಗೆ ಹೊರಡಿಸಿರುವ ಆದೇಶದ ಪ್ರಕಾರ ಯಂತ್ರದಿಂದ ತಯಾರಾದ ಪಾಲಿಯೆಸ್ಟರ್ ಬಾವುಟಗಳನ್ನು ಬಳಸಲು ಅನುಮತಿಯಿದೆ. ದೊಡ್ಡಪ್ರಮಾಣದಲ್ಲಿ ತಯಾರಾಗುವ ಪಾಲಿಯೆಸ್ಟರ್ ಯಂತ್ರ–ತಯಾರಿತ ಬಾವುಟ ಕೈಯಿಂದ ನೇಯ್ದ ಬಾವುಟಕ್ಕಿಂತ ಅಗ್ಗವಾಗುವುದರಿಂದ ಅದು ಮಾರುಕಟ್ಟೆಯನ್ನು ಆವರಿಸಿಕೊಂಡು ಬಿಡುತ್ತದೆ. ಹತ್ತಿ ಮತ್ತು ರೇಷ್ಮೆಯ ಬಾವುಟಗಳು ಪರಿಸರ–ಸ್ನೇಹಿ ಮತ್ತು ಕೈಯಿಂದ ನೇಯ್ದ ಬಾವುಟಗಳು ಸ್ಥಳೀಯ ಅರ್ಥವ್ಯವಸ್ಥೆಗೆ ಬೆಂಬಲ ನೀಡುತ್ತವೆ. ಆದರೆ ಪಾಲಿಯೆಸ್ಟರ್ ಬಾವುಟಗಳಗೆ ಅನುಮತಿ ಕೊಟ್ಟರೆ ವಿದೇಶಗಳಿಂದ ಬರುವ ಯಂತ್ರ–ತಯಾರಿತ ಮತ್ತು ಜೈವಿಕ–ಲೀನತೆ ಇಲ್ಲದ ಬಾವುಟಗಳು ರಾಶಿ ಬೀಳುತ್ತವೆ. ಇದು ಪರಿಸರ–ಸ್ನೇಹಿಯೂ ಅಲ್ಲದ, ಗುಡಿಕೈಗಾರಿಕೆಗೆ ಅನನುಕೂಲ ಉಂಟು ಮಾಡುವಂತದ್ದೂ ಆಗಿರುವ ನಡೆ.

ಆದ್ದರಿಂದ ಗೃಹಮಂತ್ರಿಗಳು ಈ ವಿಷಯದಲ್ಲಿ ತಕ್ಷಣ ಮಧ್ಯಪ್ರವೇಶಿಸಬೇಕು ಮತ್ತು ಈ ಹಾನಿಕಾರಕ ತಿದ್ದುಪಡಿಯನ್ನು ಹಿಂದಕ್ಕೆ ತಗೊಳ್ಳಬೇಕು ಎಂದು ಡಾ.ಶಿವದಾಸನ್ ಗೃಹಮಂತ್ರಿಗಳನ್ನು ಕೋರಿದ್ದಾರೆ.

ಮತ್ತೆ ಐಕ್ಯ ಹೋರಾಟಕ್ಕಿಳಿದ ರೈತರು–ಜುಲೈ 31 ರಂದು ದೇಶಾದ್ಯಂತ ಕೇಂದ್ರ ಸರಕಾರದ ವಿಶ್ವಾಸದ್ರೋಹದ ವಿರುದ್ಧ ಪ್ರತಿಭಟನೆ

ಆಗಸ್ಟ್ 7 ರಿಂದ 14–ಅಗ್ನಿಪಥ ಸ್ಕೀಮಿನ ವಿರುದ್ಧ "ಜೈ ಜವಾನ್, ಜೈ ಕಿಸಾನ್" ಸಮಾವೇಶಗಳು, ಆಗಸ್ಟ್ 18–20: ಕೇಂದ್ರ ಸಂಪುಟದಿಂದ ತೇನಿ ವಜಾಕ್ಕೆ ಲಖಿಂಪುರ್ ಖೇರಿಯಲ್ಲಿ ಮೋರ್ಚಾ, ಜುಲೈ 31ರಂದು ಸರ್ದಾರ್ ಉಧಮ್ ಸಿಂಗ್ ಅವರ ಹುತಾತ್ಮ ದಿನದಂದು ರೈತರು ರಾಷ್ಟ್ರವ್ಯಾಪಿ ಪ್ರತಿಭಟನೆಗಳು ಮತ್ತು ಚಕ್ಕಾ ಜಾಮ್ ಗಳನ್ನು ನಡೆಸಿದ್ದಾರೆ. ಎಂಎಸ್‌ಪಿಗೆ. ಕಾನೂನು ಖಾತರಿ, ವಿದ್ಯುತ್ ಮಸೂದೆ ವಾಪಸಾತಿ, ಕೇಸುಗಳ ವಾಪಸಾತಿ ಮತ್ತು ಇತರ ಪ್ರಶ್ನೆಗಳಲ್ಲಿ ಕೇಂದ್ರ ಸರ್ಕಾರದ ವಿಶ್ವಾಸದ್ರೋಹವನ್ನು ವಿರೋಧಿಸಲು ದೇಶಾದ್ಯಂತ ರೈತರು ಮತ್ತೊಮ್ಮೆ ಒಂದಾಗಿದ್ದಾರೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಒಂದು ಹೇಳಿಕೆಯಲ್ಲಿ ತಿಳಿಸಿದೆ.

ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಒಡಿಶಾ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ, ತಮಿಳುನಾಡು, ರಾಜಸ್ಥಾನ, ಗುಜರಾತ್, ತ್ರಿಪುರ ಸೇರಿದಂತೆ ಇತರ ರಾಜ್ಯಗಳಲ್ಲಿ ಬೃಹತ್ ಪ್ರತಿಭಟನೆಗಳು ಮತ್ತು ಚಕ್ಕಾ ಜಾಮ್‌ಗಳು ನಡೆದಿವೆ.

ಅಗ್ನಿಪಥ್ ಯೋಜನೆಯನ್ನು ಬಯಲಿಗೆಳೆಯಲು ಆಗಸ್ಟ್ 7 ರಿಂದ ಆಗಸ್ಟ್ 14 ರವರೆಗೆ ದೇಶಾದ್ಯಂತ "ಜೈ ಜವಾನ್, ಜೈ ಕಿಸಾನ್" ಸಮಾವೇಶಗಳನ್ನು ಆಯೋಜಿಸಲಾಗಿದೆ.

ಸ್ವಾತಂತ್ರ್ಯದ 75ನೇ ವರ್ಷಾಚರಣೆ ಸಂದರ್ಭದಲ್ಲಿ ಅಜಯ್ ಮಿಶ್ರಾ ತೇನಿ ಅವರನ್ನು ವಜಾಗೊಳಿಸುವಂತೆ ಒತ್ತಾಯಿಸಿ ಆಗಸ್ಟ್ 18, 19 ಮತ್ತು 20 ರಂದು ಲಖಿಂಪುರ ಖೇರಿಯಲ್ಲಿ 75 ಗಂಟೆಗಳ ಮೋರ್ಚಾವನ್ನು ಆಯೋಜಿಸಲಾಗಿದೆ.

ಕೇಂದ್ರ ಸರ್ಕಾರವು ಸಂಯುಕ್ತ ಕಿಸಾನ್ ಮೋರ್ಚಾಕ್ಕೆ ನೀಡಿದ 9 ಡಿಸೆಂಬರ್ 2021 ರ ಪತ್ರದಲ್ಲಿ ಯಾವುದೇ ಭರವಸೆಗಳನ್ನು ಇಲ್ಲಿಯವರೆಗೆ ಈಡೇರಿಸಿಲ್ಲ, ಆ ಪತ್ರದ ಆಧಾರದ ಮೇಲೆ ರೈತರ ಚಳವಳಿಯನ್ನು ಮುಂದೂಡಲಾಗಿತ್ತು.

ಕನಿಷ್ಠ ಬೆಂಬಲ ಬೆಲೆಯ (ಎಂಎಸ್‌ಪಿ) ಕಾನೂನು ಖಾತರಿಯ ಬಗ್ಗೆ ಚರ್ಚಿಸಲು ಸರ್ಕಾರ ಇನ್ನೂ ಸಿದ್ಧವಾಗಿಲ್ಲ. ರೈತರ ಕಣ್ಣಿಗೆ ಮಣ್ಣೆರಚಲು ಭಾರತ ಸರ್ಕಾರ ರಚಿಸಿರುವ ಸಮಿತಿಯಲ್ಲಿ ಕಾನೂನು ಖಾತರಿಯ ಪ್ರಸ್ತಾಪವೇ ಇಲ್ಲ.

ಮತ್ತೊಂದೆಡೆ, ಸಂಸತ್ತಿನಲ್ಲಿ ಮಂಡಿಸಲು ವಿದ್ಯುತ್ ತಿದ್ದುಪಡಿ ಮಸೂದೆಗೆ ಸಂಪುಟ ಅನುಮೋದನೆ ನೀಡಿದೆ.

ಅಲ್ಲದೇ ರೈತರ ಮೇಲೆ ದಾಖಲಿಸಿರುವ ಸುಳ್ಳು ಪ್ರಕರಣಗಳನ್ನು ಹಿಂಪಡೆದಿಲ್ಲ.

ಅಜಯ್ ಮಿಶ್ರಾ ಟೆನಿ ಇನ್ನೂ ಕೇಂದ್ರ ಸಚಿವ ಸಂಪುಟದಲ್ಲಿ ಉಳಿದಿದ್ದಾರೆ.

ಇದನ್ನು ಪ್ರತಿಭಟಿಸಿ, ಕೇಂದ್ರ ಸರ್ಕಾರದ ದ್ರೋಹದ ವಿರುದ್ಧ ದೇಶಾದ್ಯಂತ ಲಕ್ಷಾಂತರ ರೈತರು ಮತ್ತೊಮ್ಮೆ ಬೀದಿಗಿಳಿದು ಪ್ರತಿಭಟನೆ ನಡೆಸಿದರು.

ಕೇಂದ್ರಸರಕಾರದಆಶ್ವಾಸನೆಯಂತೆಬೇಡಿಕೆಗಳನ್ನು ಈಡೇರಿಸದಿದ್ದರೆ ಮುಂದಿನ ತಿಂಗಳುಗಳಲ್ಲಿ ರೈತರ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಸಂಯುಕ್ತ ಕಿಸಾನ್ ಮೋರ್ಚಾ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

"ಆನೆ ಮತ್ತು ಮಾನವ ಸಂಘರ್ಷ–ಕಾರಣ ಮತ್ತು ಪರಿಹಾರ"


ಪುಟ 5 ರಿಂದ

ಆದರೆ ಈಗಾಗಲೇ ನಮ್ಮ ತೋಟಗಳಿಗೆ ಬಂದು ವಾಸ ಮಾಡುತ್ತಿರುವ ಆನೆಗಳು ಇಲ್ಲೇ ಉಳಿಯುತ್ತವೆಯಲ್ಲಾ. ಇದಕ್ಕೆ ಪರಿಹಾರ ಏನು? ಎನ್ನುವ ಪ್ರಶ್ನೆಯನ್ನು ಮುಂದಿಡುತ್ತಾರೆ. ಮತ್ತು ಈ ಯೋಜನೆಯಲ್ಲಿ ರಾಜಕಾರಣಿಗಳು ಮತ್ತು ಅಧಿಕಾರಿಗಳು ದೊಡ್ಡಪ್ರಮಾಣದಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂದು ದೂರುತ್ತಿದ್ದಾರೆ.

ಆನೆ ಮತ್ತು ಮಾನವ ಸಂಘರ್ಷವನ್ನು ತಡೆಯಬೇಕಾದರೆ ಕೈಗೊಳ್ಳಬೇಕಾದ ಕೆಲವು ಕ್ರಮಗಳ ಕುರಿತು ತಜ್ಞರು ನೀಡಿದ ಸಲಹೆಗಳೆಂದರೆ ರೇಡಿಯೋ ಕಾಲರ್‌ಗಳ ಮೂಲಕ ಆನೆಗಳ ಸಂಚಾರವನ್ನು ತಿಳಿದು ಆ ಭಾಗದ ಜನರಿಗೆ ಮುನ್ನೆಚ್ಚರಿಕೆಯ ಮಾಹಿತಿಗಳನ್ನು ಮೊಬೈಲ್ ಸಂದೇಶಗಳ ಮೂಲಕ ನೀಡುವುದು, ಈ ಬಾಗದಲ್ಲಿರುವ ಆನೆಗಳನ್ನು ಆನೆ ಧಾಮಗಳನ್ನು ನಿರ್ಮಿಸಿ ಅಲ್ಲಿಗೆ ಸ್ಥಳಾಂತರಿಸಲು ಪ್ರಯತ್ನಿಸುವುದು, ಆನೆಗಳ ಸಂಖ್ಯೆ ಹೆಚ್ಚಾಗದಂತೆ ಸಂತಾನ ಹರಣ ಚಿಕಿತ್ಸೆ ಮಾಡಿಸುವುದು, ಸೋಲಾರ್ ಫೆನ್ಸಿಂಗ್‌ಗಳನ್ನು ಅಳವಡಿಸುವುದು, ಆನೆ ಕಾರಿಡಾರ್‌ಗೆ ಸಮಸ್ಯೆಯಾಗದಂತೆ ಅವುಗಳನ್ನು ರಕ್ಷಿಸುವುದು ಮತ್ತು ಈ ಭಾಗದಲ್ಲಿ ಅನಗತ್ಯ ಅಭಿವೃದ್ಧಿ ಯೋಜನೆಗಳನ್ನು ಸ್ಥಗಿತಗೊಳಿಸುವುದು ಮತ್ತು ಎಲ್ಲದಕ್ಕಿಂತ ಮುಖ್ಯವಾಗಿ ಆನೆಗಳ ದಾಳಿಯಿಂದ ಬೆಳೆ ನಷ್ಟ ಮತ್ತು ಪ್ರಾಣ ಹಾನಿ ಸಂಭವಿಸಿದವರಿಗೆ ದಯಾತ್ಮಕ ಪರಿಹಾರದ (ಎಕ್ಸ್‌ಗ್ರೇಷಿಯಾ) ಬದಲಾಗಿ ನ್ಯಾಯಯುತ ಪರಿಹಾರವನ್ನು ವೈಜ್ಞಾನಿಕವಾಗಿ ನೀಡಬೇಕು.

ಇಡೀ ದಿನದ ಚರ್ಚೆಯ ನಂತರ ಅಂತಿಮವಾಗಿ ಕೆಲವು ನಿರ್ಣಯಗಳನ್ನುಕಾರ್ಯಾಗಾರದಲ್ಲಿ ಕೈಗೊಳ್ಳಲಾಯಿತು.

1. ಆನೆ – ಮಾನವ ಸಂಘರ್ಷದ ಪ್ರದೇಶಗಳನ್ನು ಒಳಗೊಂಡ 3–4 ಜಿಲ್ಲೆಗಳನ್ನೊಳಗೊಂಡ ಹೋರಾಟ ಸಮಿತಿಯನ್ನು ರಚಿಸಬೇಕು.
2. ಆ ಸಮಿತಿಯಲ್ಲಿ ಬೆಳೆಗಾರರ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ರೈತ ಸಂಘಟನೆಗಳು, ಜನಪರ ಸಂಘಟನೆಗಳು ಇತ್ಯಾದಿ ಜನ ವಿಭಾಗಗಳನ್ನು ಒಳಗೊಳ್ಳಬೇಕು.
3. ಪ್ರಾದೇಶಿಕ, ವಲಯ, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಮಾವೇಶ ನಡೆಸಬೇಕು.
4. ಬಾಧಿತರಿಗೆ ವೈಜ್ಞಾನಿಕ ಪರಿಹಾರಕ್ಕೆ ಆಗ್ರಹಿಸಬೇಕು.
5. ಆಕ್ರಮಣಕಾರಿ ಆನೆಗಳನ್ನು ಸ್ಥಳಾಂತರಿಸಬೇಕು.
6. ಅಗತ್ಯ ಪ್ರದೇಶಗಳಲ್ಲಿ ಬ್ಯಾರಿಕೇಡ್ ನಿರ್ಮಿಸಬೇಕು.
7. ಆನೆಧಾಮ ಅಥವಾ ಆನೆ ಕ್ಯಾಂಪ್‌ಗಳನ್ನು ನಿರ್ಮಿಸಬೇಕು.
8. ನೈಸರ್ಗಿಕ ಆನೆ ಕಾರಿಡಾರ್‌ಗಳನ್ನು ಉಳಿಸಬೇಕು ಮತ್ತು ಅಭಿವೃದ್ಧಿ ಪಡಿಸಬೇಕು.
9. ಜನವಸತಿ ಮತ್ತು ಕೃಷಿ ಪ್ರದೇಶಗಳಲ್ಲಿ ಆನೆ – ಕಾಡುಪ್ರಾಣಿಗಳ ವಾಸ್ತವ್ಯ ಮತ್ತು ಓಡಾಟದ ಕುರಿತು ಜನರಿಗೆ ಸಮರ್ಪಕ ಮಾಹಿತಿ ನೀಡುವ ವೈಜ್ಞಾನಿಕ ಪದ್ಧತಿಯನ್ನು ಅಭಿವೃದ್ಧಿ ಪಡಿಸಬೇಕು.
10. ಸಾಧ್ಯವಿರುವ ಕಡೆಗಳಲ್ಲಿ ಅರಣ್ಯ ವಿಸ್ತೀರ್ಣವನ್ನು ಹೆಚ್ಚಿಸಬೇಕು.
11. ಆನೆ, ಕಾಡುಪ್ರಾಣಿ – ಮಾನವ ಸಹಬಾಳ್ವೆಯ ಕಡೆಗೆ ನಮ್ಮ ನಡೆಯಾಗಬೇಕು.
12. ಕರ್ನಾಟಕ ಆನೆ ಕಾರ್ಯಪಡೆ ವರದಿ ಪ್ರಕಾರ ಮೀಸಲು ಅರಣ್ಯದಲ್ಲಿ ಅಭಿವೃದ್ಧಿ ಯೋಜನೆಗಳನ್ನು ನಿಲ್ಲಿಸಬೇಕು.



ಮೂರು ದಿನಗಳ 'ಅಂಗನವಾಡಿ ಅಧಿಕಾರ ಮಹಾಪಡಾವ್' ಕರೆ: ಪ್ರತಿ ಲೋಕಸಭಾ ಕ್ಷೇತ್ರದಲ್ಲಿ 'ಜವಾಬು ಕೇಳಿ' ಅಭಿಯಾನ ಜನವರಿ 2023 ರಲ್ಲಿ ಸ್ಕೀಮ್ ನೌಕರರ ಒಂದು ದಿನದ ಮುಷ್ಕರ

ಮಳೆ ಮತ್ತು ಪ್ರತಿಕೂಲ ಹವಾಮಾನವನ್ನು ಎದುರಿಸಿ, ಜುಲೈ 26,2022 ರಂದು ನವದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರಾರಂಭವಾದ 'ಅಂಗನವಾಡಿ ಅಧಿಕಾರ ಮಹಾಪಡಾವ್' ಜುಲೈ 28 ರಂದು ಸಮಾಪನ ಗೊಂಡಿತು. ಎಲ್ಲಾ ರಾಜ್ಯಗಳ ಸಾವಿರಾರು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸತತ ಮೂರು ದಿನಗಳ ಕಾಲ ಧರಣಿ ಕುಳಿತರು.

ಜುಲೈ 26 ರಿಂದ 29 ರವರೆಗೆ ನಾಲ್ಕು ದಿನಗಳ ಕಾಲ ಮಹಾಪಡಾವ್ ನಡೆಸಲು ಅಖಿಲ ಭಾರತ ಅಂಗನವಾಡಿ ನೌಕರರು ಮತ್ತು ಸಹಾಯಕಿಯರ ಒಕ್ಕೂಟ (ಎಐಎಫ್‌ಎಡಬ್ಲ್ಯುಹೆಚ್) ನಿರ್ಧರಿಸಿತ್ತು. ಆದರೆ ದಿಲ್ಲಿಯಲ್ಲಿ ಪೊಲೀಸರು 3 ನೇ ಮತ್ತು 4 ನೇ ದಿನದ ಧರಣಿಗೆ ಅನುಮತಿ ನಿರಾಕರಿಸಿದರು. ಎಐಎಫ್‌ಎಡಬ್ಲ್ಯುಹೆಚ್ ಆದೇಶವನ್ನು ಧಿಕ್ಕರಿಸಿ ಮೂರನೇ ದಿನ 'ಸಂಸದ್ ಚಲೋ' ಮತ್ತು 'ಜೈಲ್ ಭರೋ' ನಡೆಸಲು ಹೊಂದಲು ನಿರ್ಧರಿಸಿತು. ನಾಲ್ಕನೇ ದಿನ ಭಾಗವಹಿಸಲಿದ್ದವರನ್ನು ಮೂರನೇ ದಿನವೇ ಕರೆಯಲಾಯಿತು. ಆಗ ದೆಹಲಿ ಪೋಲೀಸರು ಸಂಸದ್ ಚಲೋ ಅನ್ನು ಮುಂದುವರೆಸದಂತೆ ಮತ್ತು ಪಡಾವ್ ಅನ್ನು ಮುಂದುವರಿಸಲು ವಿನಂತಿಸಿದರು. ಆಡಳಿತಾತ್ಮಕ ನಿರ್ಬಂಧದ ಮೇಲಿನ ಈ ವಿಜಯದೊಂದಿಗೆ, ಪಂಜಾಬ್, ತೆಲಂಗಾಣ ಮತ್ತು ಆಂಧ್ರಪ್ರದೇಶದ ಸಾವಿರಾರು ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಬೃಹತ್ ಭಾಗವಹಿಸುವಿಕೆಯೊಂದಿಗೆ ಪಡಾವನ್ನು ಮೂರನೇ ದಿನದ ಮುಕ್ತಾಯಗೊಳಿಸಲಾಯಿತು.

ಮಹಾಪಡಾವ್ ಅನ್ನು ಮುಕ್ತಾಯಗೊಳಿಸಿದ ಎಐಎಫ್‌ಎಡಬ್ಲ್ಯುಎಚ್ ಪ್ರಧಾನ ಕಾರ್ಯದರ್ಶಿ ಎ.ಆರ್. ಸಿಂಧು ಮಾತನಾಡಿ, ಪ್ರಧಾನಿಯವರು ಯಾವುದೇ ಜನಪ್ರತಿನಿಧಿಗಳನ್ನು ಭೇಟಿಯಾಗುವುದಿಲ್ಲ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರು ತಮ್ಮ "ಬೇಟಿ ಬಚಾವೋ" ನಲ್ಲಿ ನಿರತರಾಗಿದ್ದಾರೆ ಎನ್ನುತ್ತ ಹೋರಾಟವನ್ನು ತೀವ್ರಗೊಳಿಸುವಂತೆ ಅಂಗನವಾಡಿ ನೌಕರರಿಗೆ ಕರೆ ನೀಡಿದರು. AIFAWH ತನ್ನ ಭವಿಷ್ಯದ ಕಾರ್ಯಾಚರಣೆಗಳನ್ನು ಘೋಷಿಸಿದೆ. ಅವು ಈ ರೀತಿ ಇವೆ:

- 75 ವರ್ಷಗಳ ಸ್ವಾತಂತ್ರ್ಯದ ಸಂದರ್ಭದಲ್ಲಿ ರಾಷ್ಟ್ರಧ್ವಜವನ್ನು ಮಾರಾಟ ಮಾಡುವಂತೆ ಅಂಗನವಾಡಿ ಕಾರ್ಯಕರ್ತೆಯರಿಗೆ ಸರ್ಕಾರ ನೀಡಿರುವ ನಿರ್ದೇಶನವನ್ನು AIFAWH ಬಹಿಷ್ಕರಿಸಲಿದೆ.
- ಬಡತನ, ಹಸಿವು, ಅನಕ್ಷರತೆ ಮತ್ತು ಅನಾರೋಗ್ಯದಿಂದ ನಿಜವಾದ ಸ್ವಾತಂತ್ರ್ಯಕ್ಕಾಗಿ 14 ಆಗಸ್ಟ್ 2022 ರಂದು CITU, AIKS ಮತ್ತು AIAWU ನಿಂದ ಸಾಮೂಹಿಕ ಜಾಗರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವುದು
- AIFAWH ಪ್ರತಿ ಸಂಸದೀಯ ಕ್ಷೇತ್ರದಲ್ಲಿ ಬೃಹತ್ 'ಜವಾಬ್ ಮಾಂಗೋ ಅಭಿಯಾನ' (ಜವಾಬು ಕೇಳಿ ಅಭಿಯಾನ) ಮತ್ತು ಆಳುವ ಪಕ್ಷದ ಸಂಸದರಿಗೆ ಘೇರಾವ್.
- ಜನವರಿ 2023 ರಲ್ಲಿ ಇತರ ಸ್ಕೀಮ್ ನೌಕರರೊಂದಿಗೆ ಒಂದು ದಿನದ ರಾಷ್ಟ್ರೀಯ ಮುಷ್ಕರ
- ಸಂಸತ್ತಿನಲ್ಲಿ ಮುಂದಿನ ಬಜೆಟ್ ಅಧಿವೇಶನದಲ್ಲಿ ರೈತರು, ಕೃಷಿ ಕಾರ್ಮಿಕರು ಮತ್ತು ಕಾರ್ಮಿಕರ ಜಂಟಿ 'ಸಂಸದ್ ಚಲೋ'ದಲ್ಲಿ ಪೂರ್ಣವಾಗಿ ಭಾಗವಹಿಸುವುದು.

ಬಗರ್ ಹುಕ್ಕುಂ ಸಾಗುವಳಿದಾರರಿಗೆ ಹಕ್ಕುಪತ್ರ ವಿತರಣೆಗೆ ಆಗ್ರಹಿಸಿ ಪ್ರಾಂತ ರೈತ ಸಂಘ ಪ್ರತಿಭಟನೆ

ಪುಟ 4 ರಿಂದ

ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್)ದ ಜಿಲ್ಲಾಧ್ಯಕ್ಷ ಚಿಕ್ಕಣ್ಣೇಗೌಡ, ಫಾರಂ ನಂಬರ್ 50–52 ರಲ್ಲಿ ಅರ್ಜಿ ಸಲ್ಲಿಸಿದ್ದರೂ, ಆ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಅಲ್ಲದೆ ಕರ್ನಾಟಕ ಪ್ರಾಂತ ರೈತ ಸಂಘದ ಹೋರಾಟದ ಒತ್ತಡಕ್ಕೆ ಮಣಿದು ಫಾರಂ ನಂಬರ್ 57 ರಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಿತ್ತು. ಲೋಕಸಭೆ ಚುನಾವಣೆ ಬಂದಿದ್ದರಿಂದ ಸಾಕಷ್ಟು ರೈತರಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗಿಲ್ಲ. ಈಗ ಮತ್ತೊಮ್ಮೆ ಫಾರಂ ನಂಬರ್ 57ರಲ್ಲಿ ಅರ್ಜಿ ಸಲ್ಲಿಸಲು ಸರ್ಕಾರ ಅವಕಾಶ ನೀಡಿದೆ. ಆದರೆ ತಾಲೂಕಿನಲ್ಲಿ ಇನ್ನೂ ಅರ್ಜಿ ಪಡೆಯುತ್ತಿಲ್ಲ. ಮತ್ತೊಂದೆಡೆ ಅರ್ಜಿ ಸಲ್ಲಿಸಿದ ರೈತರಿಗೆ ಇಲ್ಲಿಯವರಿಗೂ ಸಾಗುವಳಿ ಪತ್ರ ನೀಡಿಲ್ಲ ಎಂದರು.

ಅಗತ್ಯ ವಸ್ತುಗಳ ಬೆಲೆ ಕೂಡಲೇ ಇಳಿಸಬೇಕು ಎಂದಿರುವ ಅವರು, ಒಂದೆಡೆ ರೈತರು ಸಾಗುವಳಿ ಪತ್ರ ನೀಡಬೇಕೆಂದು ಒತ್ತಾಯಿಸುತ್ತಿದ್ದರೆ, ಬಿಜೆಪಿ ಸರ್ಕಾರ ಸಾಗುವಳಿ ಪತ್ರ ನೀಡುವ ಬದಲು ಭೂಮಿಯನ್ನು ಗುತ್ತಿಗೆ ಆಧಾರದಲ್ಲಿ ರೈತರಿಗೆ ನೀಡಲು ಹೊರಟಿರುವುದು ರೈತರಿಗೆ ಮಾಡಿರುವ ಅನ್ಯಾಯವಾಗಿದೆ. ಆದ್ದರಿಂದ ಕೂಡಲೇ ಫಾರಂ ನಂಬರ್ 57ರಲ್ಲಿ ಅರ್ಜಿ ಸಲ್ಲಿಸಲು ಸರ್ಕಾರ ಅವಕಾಶ ನೀಡಬೇಕೆಂದು ಆಗ್ರಹಿಸಿದರು.

ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ ಮಾತನಾಡಿ, ಕೇಂದ್ರವು ಹಾಲು ಮತ್ತು ಹಾಲಿನ ಉತ್ಪನ್ನಗಳು ಹಾಗೂ ಯಂತ್ರೋಪಕರಣಗಳ ಮೇಲೆ ಜಿ.ಎಸ್.ಟಿ. ತೆರಿಗೆಯನ್ನು ವಿಧಿಸಿದೆ. ಇದರಿಂದ ದೇಶದ 9 ಕೋಟಿ ಹಾಲು ಉತ್ಪಾದಕರ ಕುಟುಂಬಗಳ ಮೇಲೆ ದೊಡ್ಡ ಹೊರೆ ಬೀಳಲಿದೆ. ಎರಡು ರೀತಿಯ ತೆರಿಗೆಗಳಿಂದಾಗಿ ಶೇ. 17 ರಿಂದ ಶೇ. 30 ಏರಿಕೆ ಕಾಣಲಿದೆ. ರೈತರ ಆದಾಯವನ್ನು ದುಪ್ಪಟ್ಟು ಮಾಡುವ ಭರವಸೆ ನೀಡಿದ್ದ ನರೇಂದ್ರ ಮೋದಿ ಸರ್ಕಾರ ಇದೀಗ ವಂಚಿಸಿದೆ ಎಂದು ಆರೋಪಿಸಿದರು.

ಪ್ರತಿಭಟನಾ ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರವನ್ನು ತಹಸೀಲ್ದಾರ್ ಡಾ. ಅಶೋಕ್‌ರಿಗೆ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಪ್ರಾಂತ ರೈತ ಸಂಘದ ಮುಖಂಡರಾದ ಅಭಿಮಾನ್ ಚಂದರಾಜ್, ಪುಟ್ಟರಾಜು, ಚಂದ್ರಶೇಖರ್, ಮನಹದೇವು, ಅನುಸೂಯ, ಉಪೇಂದ್ರ ಕುಮಾರ್, ವಜೀರ್ ಸಾಬ್, ಚೇತನ್, ಜವರೇಗೌಡ, ವಿನೋದ್, ಸುರೇಶ್ ಸೇರಿದಂತೆ ಅನೇಕರಿದ್ದರು.



ಪ್ರಧಾನಿಗಳ ‘ರೆವ್ಡಿ ಸಂಸ್ಕೃತಿ’ ಗರ್ಜನೆ ಬೂಟಾಟಿಕೆ ಮತ್ತು ಸಂದರ್ಭಸಾಧಕತನದ ಪ್ರದರ್ಶನ

ಒಂದು ಪ್ರತಿಪಕ್ಷವು ವಿದ್ಯುತ್ ಅಥವಾ ನೀರಿನ ಶುಲ್ಕವನ್ನು ಕಡಿತಗೊಳಿಸುವುದಾಗಿ ಘೋಷಿಸಿದರೆ ಅಥವಾ ಸಂಕಷ್ಟದಲ್ಲಿರುವ ಜನರಿಗೆ ಇತರ ಅನುಕೂಲಗಳನ್ನು ನೀಡುವುದಾಗಿ ಹೇಳಿದರೆ, ಮೋದಿ ಅದು ’ರೆವ್ಡಿ ಸಂಸ್ಕೃತಿ’ ಎಂದು ಗರ್ಜಿಸುತ್ತಾರೆ. ತಾವು ಅದನ್ನು ಮಾಡಿದರೆ ಅದು "ಸಬ್ಕಾ ಸಾಥ್, ಸಬ್ಕಾ ವಿಕಾಸ್"! ದೊಡ್ಡ ಉದ್ಯಮಗಳಿಗೆ ಸರಕಾರದ ಹಣವನ್ನು ಖರ್ಚು ಮಾಡಿದರೆ, ತೆರಿಗೆಗಳನ್ನು ಕಡಿತಗೊಳಿಸಿದರೆ, ಅದು "ಅಭಿವೃದ್ಧಿ", ಆದರೆ ಜನರ ಕಷ್ಟಗಳನ್ನು ನಿವಾರಿಸಲು ಖರ್ಚು ಮಾಡುವುದು ಅವರಿಗೆ ಅಸಹ್ಯ. ವಾಸ್ತವವಾಗಿ ಮೋದಿ ಮತ್ತು ಬಿಜೆಪಿ ಸರಕಾರಗಳೇ ಈ ‘ರೆವ್ಡಿ’ಯ ಅತಿ ದೊಡ್ಡ ವಿತರಕರು. ಈ ಬೂಟಾಟಿಕೆ ಮತ್ತು ಸಂದರ್ಭಸಾಧಕತನ ಮೋದಿ ಮತ್ತು ಬಿಜೆಪಿ/ಆರ್‌ಎಸ್‌ಎಸ್ ಅಪ್ಪಿಕೊಂಡಿರುವ ನವ ಉದಾರವಾದಿ ಕುರುಡುಸಿದ್ಧಾಂತ ಮತ್ತು ಪ್ರತಿಗಾಮಿ ಸಾಮಾಜಿಕ ಕಣ್ಣೋಟದಲ್ಲಿರುವ ಸಮಸ್ಯೆ.

“ಸವೇರಾ”


ಇತ್ತೀಚೆಗೆ, ಪ್ರಧಾನಿ ಮೋದಿ ಅವರು ರಾಜಕೀಯ ಪಕ್ಷಗಳು "ರೆವ್ಡಿ ಸಂಸ್ಕೃತಿ" ಯಲ್ಲಿ ತೊಡಗಿವೆ ಎಂದು ಟೀಕಿಸಿದ್ದಾರೆ. ರೆವ್ಡಿ ಎಂದರೆ ಒಂದು ಸಿಹಿತಿಂಡಿ, ಸಾಮಾನ್ಯವಾಗಿ ಭಿಕ್ಷೆಯಾಗಿ ಅದನ್ನು ಹಂಚಲಾಗುತ್ತದೆ. ಹಿಂದಿ ಭಾಷೆಯಲ್ಲಿ "ಅಂಧಾ ಬಾಂಟೆ ರೆವ್ಡಿ, ಅಪ್ನೆ ಅಪ್ನೋಂ ಕೋ ದೇ" ಎಂಬೊಂದು ಗಾದೆಯಿದೆ. ಅಂದರೆ ದೃಷ್ಟಿಹೀನ ವ್ಯಕ್ತಿಯೊಬ್ಬ ತನ್ನ ಹತ್ತಿರದವರಿಗೆ ಮತ್ತು ಆತ್ಮೀಯರಿಗೆ ಮಾತ್ರ ರೆವ್ಡಿಗಳನ್ನು ಹಂಚುತ್ತಾನೆ.

ಕಳೆದ ಎಂಟು ವರ್ಷಗಳಲ್ಲಿ ಹಿಂತಿರುಗಿ ನೋಡಿದರೆ, ಮೋದಿ ಅವರೇ ಈ ರೆವ್ಡಿ ಸಂಸ್ಕೃತಿಯ ಅತ್ಯಂತ ದೊಡ್ಡ ಪ್ರತಿಪಾದಕರಾಗಿರುವುದು ಕಾಣುತ್ತದೆ. ಮತ್ತು, ಅವರು ಪ್ರಧಾನ ಮಂತ್ರಿಯಾಗಿರುವುದರಿಂದ, ಅವರ ರೆವ್ಡಿ ಹಂಚಿಕೆ ಸಣ್ಣ ವಿಷಯವೇನಲ್ಲ – ದೈತ್ಯ ಗಾತ್ರದ್ದು. ಕೇಂದ್ರ ಸರ್ಕಾರವು ಹೊಂದಿರುವ ಅಗಾಧವಾದ ಆರ್ಥಿಕ ಮತ್ತು ರಾಜಕೀಯ ಶಕ್ತಿಯನ್ನು ಸಮಾಜದ ವಿವಿಧ ವರ್ಗಗಳಿಗೆ ರೆವ್ಡಿಗಳನ್ನು ಹಂಚಲು ಹಚ್ಚಲಾಗಿದೆ. ಗುರಿ ಯಾರೆಂಬುದನ್ನು ಅವಲಂಬಿಸಿ ಇದು ವಿವಿಧ ರೂಪಗಳನ್ನು ತೆಗೆದುಕೊಳ್ಳುತ್ತದೆ.

ಕಾರ್ಪೊರೇಟ್ ವಲಯಕ್ಕೆ ರೆವ್ಡಿಗಳು

ಕೆಲವು ಸಂದರ್ಭಗಳಲ್ಲಿ, ಉದಾರ ಕೊಡುಗೆಗಳ ಹಂಚಿಕೆ ಕಾರ್ಪೊರೇಟ್‌ಗಳಿಗೆ ತೆರಿಗೆ ಕಡಿತ, ರಿಯಾಯಿತಿಗಳು ಮತ್ತು ವಿನಾಯಿತಿಗಳ ರೂಪವನ್ನು ತೆಗೆದುಕೊಳ್ಳುತ್ತವೆ. ಇದು ಶುದ್ಧ ಉಡುಗೊರೆ, ಈ "ಸಂಪತ್ತಿನ ಸೃಷ್ಟಿಕರ್ತರು" (ಮೋದಿ ಅವರು ಸೂಪರ್ ಶ್ರೀಮಂತರನ್ನು ಹೀಗೆಂದು ಕರೆಯುತ್ತಾರೆ) ಗಳಿಗೆ ಸರ್ಕಾರದಿಂದ ಸಹಾಯದ ಅಗತ್ಯವಿದೆ ಎಂಬ ಕುಂಟು ವಿವರಣೆಯೊಂದಿಗೆ ಕೊಡಲಾಗುತ್ತದೆ. ಇಲ್ಲಿ ಕೆಲವು ಭವ್ಯ ಮತ್ತು ಪ್ರಸಿದ್ಧ ಉದಾಹರಣೆಗಳಿವೆ;

- **ಕಾರ್ಪೊರೇಟ್ ತೆರಿಗೆ ಕಡಿತ:** 2019 ರಲ್ಲಿ, ಕಾರ್ಪೊರೇಟ್ ತೆರಿಗೆ ದರವನ್ನು 30% ರಿಂದ 22% ಕ್ಕೆ (ಸರ್ಚಾರ್ಜ್‌ಗಳು ಇತ್ಯಾದಿಗಳನ್ನು ಒಳಗೊಂಡಿದ್ದರೆ 35% ರಿಂದ 26%) ಕಡಿತಗೊಳಿಸುವ ಮೂಲಕ ಮೋದಿ ಸರ್ಕಾರ ಕಾರ್ಪೊರೇಟ್ ವಲಯಕ್ಕೆ ದೊಡ್ಡ ಉಡುಗೊರೆಯನ್ನು ನೀಡಿತು. ಇದರರ್ಥ ಸರ್ಕಾರವು ಕಾರ್ಪೊರೇಟ್ ವಲಯಕ್ಕೆ ರೂ.1.45 ಲಕ್ಷ ಕೋಟಿಯ ಉಡುಗೊರೆಯನ್ನು ನೀಡಿದೆ. ಇದು ಹೆಚ್ಚಿನ ಹೂಡಿಕೆಗೆ ಕಾರಣವಾಗುತ್ತದೆ ಮತ್ತು ಅದರಿಂದ ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗುತ್ತವೆ ಎಂಬುದು ಸುಳ್ಳೆಂದು ಸಾಬೀತಾಗಿದೆ – ಉದ್ಯೋಗಗಳ ಪರಿಸ್ಥಿತಿಯು ಹದಗೆಡುತ್ತಲೇ ಬಂದಿದೆ, ಹೂಡಿಕೆಯು ಸಹ ಅಲ್ಲಲ್ಲೇ ಉಳಿದಿದೆ.
- **ಕಾರ್ಪೊರೇಟ್‌ಗಳಿಗೆ ಇತರ ತೆರಿಗೆ ರಿಯಾಯಿತಿಗಳು:** 2014–15 ಮತ್ತು 2020–21 ರ ನಡುವೆ, ಕೇಂದ್ರ ಬಜೆಟ್ ದಾಖಲೆಗಳ ಪ್ರಕಾರ, ಕಾರ್ಪೊರೇಟ್ ತೆರಿಗೆ ಪಾವತಿದಾರರಿಗೆ ಮೋದಿ ಸರ್ಕಾರ ರೂ.6.15 ಲಕ್ಷ ಕೋಟಿ ಮೌಲ್ಯದ ವಿವಿಧ ರಿಯಾಯಿತಿಗಳು, ವಿನಾಯಿತಿಗಳು ಮತ್ತು ಮನ್ನಾಗಳನ್ನು ನೀಡಿದೆ. ಇವುಗಳು ಕಾರ್ಪೊರೇಟ್–ಅಲ್ಲದ ಘಟಕಗಳು ಮತ್ತು ವ್ಯಕ್ತಿಗಳಿಗೆ ನೀಡಲಾದ ರಿಯಾಯಿತಿಗಳಿಂದ ಭಿನ್ನವಾಗಿವೆ ಮತ್ತು ಇದು ಕಸ್ಟಮ್ಸ್ ಸುಂಕದ ರಿಯಾಯಿತಿಗಳ ಕಾರಣದಿಂದಾಗಿ ಬಿಟ್ಟುಕೊಡಲಾದ ಆದಾಯವನ್ನು ಒಳಗೊಂಡಿರುವುದಿಲ್ಲ.
- **ಸಾಲ ವಜಾ:** ಎಂಟು ವರ್ಷಗಳ ಹಿಂದೆ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ, 10.72 ಲಕ್ಷ ಕೋಟಿ ರೂಪಾಯಿ ಮೌಲ್ಯದ ಸಾಲಗಳನ್ನು ಬ್ಯಾಂಕ್‌ಗಳು ಮನ್ನಾ ಮಾಡಿವೆ, ಇವುಗಳಲ್ಲಿ ಬಹುತೇಕ ಸರ್ಕಾರದ ನಿರ್ದೇಶನದಂತೆ ಕಾರ್ಯನಿರ್ವಹಿಸುವ ಸಾರ್ವಜನಿಕ ವಲಯದ ಬ್ಯಾಂಕ್‌ಗಳು, 2021 ರಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಆರ್‌ಟಿಐ ಉತ್ತರದಲ್ಲಿ ಇದು ಬಹಿರಂಗವಾಗಿದೆ. ಇದರ ಪ್ರಯೋಜನ ಪಡೆದವರು ಯಾರು? ಈ ಹೆಚ್ಚಿನ ಸಾಲ ವಜಾಗಳು 100 ಕೋಟಿ ರೂ.ಗಿಂತ ದೊಡ್ಡ ಮೊತ್ತದ ಸಾಲಗಳು. ಅಂದರೆ ಈ ರಿಯಾಯಿತಿಯು ಕೂಡ ಕಾರ್ಪೊರೇಟ್ ವಲಯಕ್ಕೆ ಪ್ರಯೋಜನ ಕೊಟ್ಟಿರುವಂತದ್ದು.



“ಪುಗಸಟ್ಟೆ ಹಂಚಿಕೆಗಳ ಆಮಿಷಗಳಿಗೆ ಒಳಗಾಗಬೇಡಿ”
ವ್ಯಂಗ್ಯಚಿತ್ರ: ಸತೀಶ ಆಚಾರ್ಯ

- **ದೊಡ್ಡ ಸುಸ್ತಿದಾರರು:** ಪುಣೆ ಮೂಲದ ಕಾರ್ಯಕರ್ತನೊಬ್ಬನ ಆರ್‌ಟಿಐ ಪ್ರಶ್ನೆಗೆ ಸ್ಪಂದಿಸುತ್ತ, ಭಾರತೀಯ ರಿಸರ್ವ್ ಬ್ಯಾಂಕ್ 1913 ಉದ್ದೇಶಪೂರ್ವಕ ಸುಸ್ತಿದಾರರಿದ್ದಾರೆ ಎಂದು ಬಹಿರಂಗಪಡಿಸಿದೆ, ಅವರು ಜೂನ್ 2020 ರ ಹೊತ್ತಿಗೆ ಬ್ಯಾಂಕ್‌ಗಳಿಗೆ 1.46 ಲಕ್ಷ ಕೋಟಿ ರೂ.ಸಾಲವನ್ನು ಹೊಂದಿದ್ದಾರೆ. ಇವುಗಳಲ್ಲಿ ಒಟ್ಟು 264 ಉದ್ದೇಶಪೂರ್ವಕ ಸುಸ್ತಿದಾರರು ರೂ. 100 ಕೋಟಿ ಮತ್ತು ಅದಕ್ಕಿಂತ ಹೆಚ್ಚಿನ ಕೆಟ್ಟ ಸಾಲಗಳನ್ನು ಹೊಂದಿರುವವರು, ಬ್ಯಾಂಕ್‌ಗಳಿಗೆ ರೂ. 1,08,527 ಕೋಟಿ ಬಾಕಿ ಉಳಿಸಿಕೊಂಡಿದ್ದಾರೆ ಎಂದು ತಿಳಿಸಿದೆ.
- ಈ ಉಡುಗೊರೆಗಳ ಹೊರತಾಗಿ, ಮೋದಿ ಸರ್ಕಾರ ಬೆಲೆಬಾಳುವ ಕೈಗಾರಿಕಾ ಆಸ್ತಿಗಳು ಮತ್ತು ಮೂಲರಚನೆಗಳನ್ನು ಕಾರ್ಪೊರೇಟ್ ವಲಯಕ್ಕೆ ಭಾರೀ ರಿಯಾಯಿತಿ ಬೆಲೆಗೆ ಅಗ್ಗದಲ್ಲಿ ಮಾರಾಟ ಮಾಡುತ್ತಿದೆ.
- 2014–15 ಮತ್ತು 2021–22 ರ ನಡುವೆ, ಸರ್ಕಾರವು ವಿವಿಧ ಸಾರ್ವಜನಿಕ ವಲಯದ ಉದ್ಯಮಗಳನ್ನು (ಭಾಗಶಃ ಅಥವಾ ಸಂಪೂರ್ಣವಾಗಿ) ವಿವಿಧ ಖಾಸಗಿ ಬಿಡ್ಡರ್‌ಗಳಿಗೆ ರೂ.4.86 ಲಕ್ಷ ಕೋಟಿಗೆ ಮಾರಾಟ ಮಾಡಿದೆ.
- ಇದಲ್ಲದೆ, ಮೋದಿ ಸರ್ಕಾರ ಇನ್ನೂ ಹೆಚ್ಚು ಕುತ್ಸಿತವಾದ ಮಾರಾಟ ಕಾರ್ಯಕ್ರಮವನ್ನು ತಂದಿದೆ – ರೂ.6 ಲಕ್ಷ ಕೋಟಿ ಮೌಲ್ಯದ ಭೌತಿಕ ಆಸ್ತಿಗಳಾದ ರೈಲ್ವೇ ಮಾರ್ಗಗಳು ಮತ್ತು ನಿಲ್ದಾಣಗಳು, ದೂರಸಂಪರ್ಕ ವ್ಯವಸ್ಥೆ, ವಿದ್ಯುತ್ ಪ್ರಸರಣ ಮಾರ್ಗಗಳು, ತೈಲ ಮತ್ತು ಅನಿಲ ಪೈಪ್‌ಲೈನ್‌ಗಳು, ರಸ್ತೆಗಳು, ಸೇತುವೆಗಳು, ಬಂದರುಗಳು ಇತ್ಯಾದಿಗಳನ್ನು ಖಾಸಗಿ ಸಂಸ್ಥೆಗಳಿಗೆ 40 ವರ್ಷಗಳವರೆಗೆ “ಭೋಗ್ಯ’ಕ್ಕೆ ಕೊಡಲಾಗುವುದು ಎನ್ನಲಾಗಿದೆ. ವಾಸ್ತವವಾಗಿ, ಇದು ಭೋಗ್ಯದ ವೇಷ ತೊಡಿಸಿರುವ ಸಾರಾಸಗಟು ಮಾರಾಟವಾಗಿದೆ.

ಮತದಾರರಿಗೆ ರೆವ್ಡಿಗಳು


ಬಿಜೆಪಿ ಅಳವಡಿಸಿಕೊಂಡ ಅತ್ಯಂತ ನಾಚಿಕೆಹೀನ ಚುನಾವಣಾ ತಂತ್ರವೆಂದರೆ ವಿಧಾನಸಭೆಗಳಿಗೆ ಚುನಾವಣೆಗಳು ನಡೆಯುವ ಕೆಲವು ತಿಂಗಳುಗಳ ಮೊದಲು ವಿವಿಧ ಯೋಜನೆಗಳನ್ನು ಉದ್ಘಾಟಿಸುವುದು ಅಥವಾ ಘೋಷಿಸುವುದು. 2014 ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಇದು ಹೆಚ್ಚೆಚ್ಚು ನಿರ್ಲಜ್ಜವಾಗಿ ನಡೆಯುತ್ತಿದೆ. ತೀರಾ ಇತ್ತೀಚೆಗೆ, ಉತ್ತರ ಪ್ರದೇಶ ಚುನಾವಣೆಯ ಮೊದಲು, ಮೋದಿ ಅವರು ರಾಜ್ಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಹಲವಾರು ಕಂತುಗಳಲ್ಲಿ ರೂ.1 ಲಕ್ಷ ಕೋಟಿ ಮೌಲ್ಯದ ಯೋಜನೆಗಳನ್ನು ಘೋಷಿಸಿದರು ಅಥವಾ ಉದ್ಘಾಟಿಸಿದರು. ಈ ಪ್ರಕ್ರಿಯೆಯು ಈಗ ಅವರ ಚುನಾವಣಾ ಕಾರ್ಯಾಚರಣೆಯ ಸ್ಟಾಂಡರ್ಡ್ ವಿಧಾನವಾಗಿದೆ; ಚುನಾವಣಾ ಆಯೋಗವು ಚುನಾವಣೆಗಳ ಮೊದಲ ಅಧಿಸೂಚನೆಯನ್ನು ಪ್ರಕಟಿಸುವ ಕೆಲವು ದಿನಗಳ ಮೊದಲು ಇದು ಕೊನೆಗೊಳ್ಳುತ್ತದೆ. ಈ ಮೂಲಕ ಮಾದರಿ ನೀತಿ ಸಂಹಿತೆ ಉಲ್ಲಂಘನೆಯಿಂದ ತಪ್ಪಿಸಿಕೊಳ್ಳಲಾಗುತ್ತಿದೆ.

ಇಷ್ಟೆಲ್ಲಾ ಯೋಜನೆಗಳನ್ನು ಚುನಾವಣೆಗೆ ಮುನ್ನವೇ ಏಕೆ ಘೋಷಿಸಬೇಕು? ಹಿಂದಿನ ಐದು ವರ್ಷಗಳಲ್ಲಿ ಸರ್ಕಾರ ಏನು ಮಾಡುತ್ತಿತ್ತು? ಐದು ವರ್ಷಗಳ ಕಾಲ ಆಸ್ಪತ್ರೆಗಳು, ರಸ್ತೆಗಳು ಮತ್ತು ಹೆದ್ದಾರಿಗಳು, ಶಿಕ್ಷಣ ಸಂಸ್ಥೆಗಳು ಮತ್ತು ಇತರ ಅಭಿವೃದ್ಧಿ ಪ್ರಯೋಜನಗಳಿಂದ ಜನರನ್ನು ವಂಚಿತರಾಗಿಟ್ಟು, ನಂತರ ಇದ್ದಕ್ಕಿದ್ದಂತೆ, ಮೋದಿ ಮತ್ತು ಅವರ ಮಂತ್ರಿಗಳಿಂದ ಘೋಷಣೆಗಳ ಸುರಿಮಳೆ ನಡೆಯುತ್ತದೆ

ಪುಟ 14 ಕ್ಕೆ



.. .. .ನೇರವಾಗಿ ರೈತರಿಂದ ಖರೀದಿಸುವುದೋ ಅಥವ ಮಂಡಿಯಲ್ಲಿ ದಾಸ್ತಾನುದಾರರಿಂದಲೋ!
ವ್ಯಂಗ್ಯಚಿತ್ರ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್



ಪುಗಸಟ್ಟೆಯ ಸಂಗತಿಯಲ್ಲ, ಸುಗಮ ವ್ಯಾಪಾರದ ಸೌಕರ್ಯವಷ್ಟೇ
ವ್ಯಂಗ್ಯಚಿತ್ರ: ರಾಜೇಂದ್ರ ಧೋಡಪ್‌ಕರ್

ಸೌಹಾರ್ದ ಕಾಪಾಡಲು ಡಿವೈಎಫ್ಐ ಮನೆಮನೆ ಅಭಿಯಾನ

ದಕ್ಷಿಣ ಕನ್ನಡ ನಡೆಯುತ್ತಿರುವ ಕೊಲೆ ರಾಜಕಾರಣದ ವಿರುದ್ಧ ಹಾಗೂ ಕೋಮುವಾದದ ರಾಜಕಾರಣದ ಅನಾಹುತದ ಕುರಿತು ತಳಮಟ್ಟದಲ್ಲಿ ಜಾಗೃತಿ ಮೂಡಿಸುವುದು. ಜಿಲ್ಲೆಯಲ್ಲಿ ಸೌಹಾರ್ದ ಕಾಪಾಡುವುದರ ಮಹತ್ವ ಸಾರುವ ಉದ್ದೇಶದಿಂದ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ) ಮನೆಮನೆ ಅಭಿಯಾನವನ್ನು ಹಮ್ಮಿಕೊಂಡಿತು.

'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದುವರೆಗೆ ನಡೆದಿರುವ ಕೋಮುಹತ್ಯೆಯ ತನಿಖೆಗಳು ಸಮರ್ಪಕವಾಗಿ ನಡೆದಿಲ್ಲ. ಈಚೆಗೆ ನಡೆದ ಕೋಮು ಹತ್ಯೆಗಳಲ್ಲಿ ಕೈಗೊಂಡಿರುವ ತನಿಖೆ ಬಗ್ಗೆಯೂ ಸಾರ್ವಜನಿಕರಲ್ಲಿ ನಂಬಿಕೆ ಇಲ್ಲವಾಗಿದೆ. ಸುರತ್ಕಲ್ ನಲ್ಲಿ ಫಾಝಿಲ್ ಕೊಲೆಯಾದ ಜಾಗದಲ್ಲಿ ಕೆಲವೇ ದಿನ ಮುನ್ನ ಏರ್ಪಡಿಸಿದ್ದ ಕಾರ್ಗಿಲ್ ವಿಜಯೋತ್ಸವ ದಿನಾಚರಣೆಯಲ್ಲಿ ಹತ್ಯೆಯ ನಾಲ್ವರು ಆರೋಪಿಗಳೂ ಭಾಗಿಯಾಗಿದ್ದರು. ಪ್ರವೀಣ್ ನೆಟ್ಟಾರು ಹತ್ಯೆಯಾದಾಗ ಶ್ರದ್ಧಾಂಜಲಿ ಸಲ್ಲಿಸದ ಬಜರಂಗದ ದಳದ ಜಿಲ್ಲೆಯ ಕೆಲವು ನಾಯಕರು ಫಾಝಿಲ್ ಹತ್ಯೆ ನಡೆದ ಅರ್ಧ ಗಂಟೆಯಲ್ಲಿ ಪ್ರವೀಣ್‌ಗೆ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಇವರನ್ನು ಪೊಲೀಸರು ತನಿಖೆಗೆ ಒಳಪಡಿಸಿಲ್ಲ. ಈ ಹತ್ಯೆ ಪ್ರಕರಣಗಳಲ್ಲಿ ನ್ಯಾಯ ಸಿಗಬೇಕಾದರೆ, ದಕ್ಷ ಈಪಿಎಸ್ ಅಧಿಕಾರಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್ಐಟಿ) ರಚಿಸಿ ತನಿಖೆ ನಡೆಸಬೇಕು' ಎಂದು ಡಿವೈಎಫ್ಐ ರಾಜ್ಯ ಘಟಕದ ಅಧ್ಯಕ್ಷ ಮುನೀರ್ ಕಾಟಿಪಳ್ಳ ಒತ್ತಾಯಿಸಿದರು.

ಫಾಝಿಲ್ ಕೊಲೆ ನಡೆದು ಒಂದು ವಾರ ಆಯ್ತು.



ಕೊಲೆಯಲ್ಲಿ ನೇರ ಭಾಗಿಗಳಾದ ಹಂತಕರನ್ನು ಪೊಲೀಸರು ಬಂಧಿಸಿದ್ದಾರೆ. ಕೊಲೆಗೆ ಕಾರಣ ಕೋಮು ದ್ವೇಷ ಎಂಬುದನ್ನೂ ಬಹಿರಂಗ ಪಡಿಸಿದ್ದಾರೆ. ಆದರೆ, ಸರಕಾರ ಫಾಝಿಲ್ ನ ಸಂತ್ರಸ್ತ ಕುಟುಂಬಕ್ಕೆ ನಿಯಮ ಪ್ರಕಾರ ನೀಡಬೇಕಾದ ಪರಿಹಾರ ನೀಡಿಲ್ಲ. ಕೋಮು ದ್ವೇಷದಿಂದ ಕೊಲೆಯಾದ ಪ್ರವೀಣ್ ನೆಟ್ಟಾರು ಸಂತ್ರಸ್ತ ಕುಟುಂಬಕ್ಕೆ ಸರಕಾರ ಒದಗಿಸಿದ ಪರಿಹಾರ ಧನ ಅದೇ ಕಾರಣಕ್ಕೆ ಕೊಲೆಯಾದ ಫಾಝಿಲ್ ಹಾಗೂ ಮಸೂದ್ ಕುಟುಂಬಕ್ಕೂ ದೊರಕಬೇಕಾದದ್ದು ಸಹಜ ನ್ಯಾಯ. ಈ ಕುರಿತು ಮುಖ್ಯಮಂತ್ರಿಗಳಾಗಲಿ, ಉಸ್ತುವಾರಿ ಸಚಿವರು, ಶಾಸಕರುಗಳಾಗಲಿ ಮಾತಾಡದೆ ಮೌನ ವಹಿಸಿರುವುದು, ತಾರತಮ್ಯ ಆಚರಿಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಸರ್ಕಾರದ ಆಡಳಿತ ಯಂತ್ರ, ಶಾಸಕರು ಧರ್ಮಾಧರಿತ ತಾರತಮ್ಯ ನಡೆಸುತ್ತಿದ್ದಾರೆ. ಕೊಲೆಗೀಡಾದ ಯುವಕರ ಪೋಷಕರು ಹಾಗೂ ಜೈಲು ಪಾಲಾದ ಯುವಕರ ಪೋಷಕರು ಕಣ್ಣೀರು ಸುರಿಸುತ್ತಿದ್ದಾರೆ. ಹಿಂದು, ಮುಸ್ಲಿಂ ಸೌಹಾರ್ದದಿಂದ ಮಾತ್ರ ಇಂತಹ ಅಹಿತಕರ ಘಟನೆ ಮರುಕಳಿಸುವುದನ್ನು ತಡೆಯಬಹುದು ಎಂದರು.

ಫಾಝಿಲ್, ಮಸೂದ್ ಮನೆಗೆ ಶಾಸಕರು ಸಾಂತ್ವನದ ಭೇಟಿ ನೀಡಬೇಕು, ಪರಿಹಾರ ಧನ ಒದಗಿಸಬೇಕು, ಪ್ರವೀಣ್ ನೆಟ್ಟಾರು, ಫಾಝಿಲ್ ಕೊಲೆಯ ಹಿಂದಿನ ಸೂತ್ರಧಾರರ ಬಂಧನವಾಗಬೇಕು ಮತ್ತು ರಹಸ್ಯಗಳು ಬಯಲಾಗಬೇಕು. ಧರ್ಮದ ಹೆಸರಿನಲ್ಲಿ ಬಡ ತಾಯಂದಿರ ಮಕ್ಕಳನ್ನು ಕೊಲೆ ಮಾಡಿಸುವ ರಾಜಕಾರಣದ ವಿರುದ್ಧ ಧ್ವನಿ ಎತ್ತಬೇಕು. ಪರಿಹಾರದ ಧನದ ವಿಚಾರದಲ್ಲಿ ಮುಖ್ಯಮಂತ್ರಿ, ಉಸ್ತುವಾರಿ ಸಚಿವರು, ಶಾಸಕರು ಮಾತಾಡದೆ ಮೌನ ವಹಿಸಿದ್ದಾರೆ. ಜಿಲ್ಲಾಡಳಿತ ಕೂಡ ಕರ್ತವ್ಯ ಮರೆತಿದೆ ಎಂದು ತಿಳಿಸಿದ್ದಾರೆ.

ಮೂರು ಕೊಲೆಗಳ ನಂತರ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ತುರ್ತು ಸ್ಥಿತಿ ಘೋಷಿಸಲಾಗಿದೆ. ನಾಗರಿಕ ಹಕ್ಕುಗಳು ನಿಷೇಧಿಸಲ್ಪಟ್ಟಿದೆ. ಅಧಿಕಾರಿಗಳು ದಿನಕ್ಕೊಂದು ಆದೇಶ ಹೊರಡಿಸುತ್ತಿದ್ದಾರೆ. ಲಾಠಿಗಳು ಎಲ್ಲವನ್ನೂ ನಿಯಂತ್ರಿಸಲು ಹೊರಟಿವೆ. ಜನರ ಸಂಕಷ್ಟ ಆಲಿಸಬೇಕಾದ ಶಾಸಕರುಗಳು ಕಾಣೆಯಾಗಿದ್ದಾರೆ. ನಿಷೇಧಾಜ್ಞೆ ನೆಪದಲ್ಲಿ ಬೀದಿಗಿಳಿದು ನ್ಯಾಯ ಕೇಳಲು ಅವಕಾಶಗಳಿಲ್ಲ. ಆದರೂ, ವಿರೋಧ ಪಕ್ಷಗಳು, ಸಾಮಾಜಿಕ ಸಂಘಟನೆಗಳು, ನಾಗರಿಕರು ಮೌನ ವಹಿಸಬಾರದು.

ಬೀದಿಗಿಳಿಯಲು, ಪ್ರತಿಭಟನೆ ನಡೆಸಲು ಅನುಮತಿ ಇಲ್ಲದಿದ್ದರೂ ಮನೆಮನೆಗಳಲ್ಲಿ ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳಲಾಗಿದೆ. ಸಮಾಜದ ಗಮನ ಸಳೆಯಬೇಕು, ಆಳುವವರ ಮೇಲೆ "ರಾಜಧರ್ಮ"ದ ಒತ್ತಡ ಹೇರಬೇಕು. ಇಲ್ಲದಿದ್ದಲ್ಲಿ ಚುನಾವಣೆಯ ಹೊಸ್ತಿಲಲ್ಲಿ ಮತ್ತಷ್ಟು ಅನಾಹುತ, ಮತ್ತಷ್ಟು ಕಣ್ಣೀರಿಗೆ ಸಾಕ್ಷಿಯಾಗಬೇಕಾದೀತು. ಹಿಂದೂ–ಮುಸ್ಲಿಂ ಸೌಹಾರ್ದ ಎತ್ತಿ ಹಿಡಿಯುವ ಸಂದೇಶ ಹರಡಬೇಕು ಎಂದು ಒತ್ತಾಯಿಸಿ ಜಾಗೃತಿ ಅಭಿಯಾನ ಕೈಗೊಳ್ಳಲಾಗಿದೆ.

ತೈವಾನ್ ವಿವಾದ: ಫೆಲೋಸಿ ಭೇಟಿ ಈಗೇಕೆ?

ಪುಟ 9 ರಿಂದ

four miracles ಎಂದು ಉಬ್ಬಿಸಿ ಡಾಲರ್ ಸಹಾಯದ ಮಳೆ ಸುರಿಸಿತು. ಅದರ ಫಲವೇ ಇಂದು ಟೈವಾನ್ ಸೆಮಿಕಂಡಕ್ಟರ್, ಎಲೆಕ್ಟ್ರಾನಿಕ್ಸ್‌ಗಳ ಬೃಹತ್ ರಫ್ತುದಾರನಾಗಿರುವುದು.

ಇವುಗಳ ಜೊತೆಗೆ ಏಷಿಯನ್ ಮಿರಾಕಲ್ಸ್ ಎಂದು ಫಿಲಿಪೈನ್ಸ್, ಇಂಡೋನೇಷ್ಯಾಗಳಲ್ಲೂ ಲಕ್ಷಾಂತರ ಜನರ ಕೊಲೆ ನಡೆಸಿ ಪ್ರಜಾಪ್ರಭುತ್ವ ಸರ್ಕಾರಗಳನ್ನು ಕಿತ್ತೊಗೆದು ಹಲವಾರು ದಶಕ ಮಿಲಿಟರಿ ಸರ್ಕಾರಗಳನ್ನು ಸ್ಥಾಪಿಸಿತು.

* ಟೈವಾನ್‌ಗೆ ಓಡಿ ಹೋದ ಅದಾನಿ, ಅಂಬಾನಿಗಳಂತಹ ಕಾರ್ಪೊರೇಟ್‌ಗಳು ಅಲ್ಲಿಯ ಬಹುಸಂಖ್ಯಾತ ಸಾಮಾನ್ಯ ಜನರನ್ನು ಅಧಿಕಾರದ ಹತ್ತಿರ ಬರಲೂ ಬಿಡದೆ ತಮ್ಮೊಂದಿಗೆ ಚೀನಾದಿಂದ ಓಡಿಬಂದ ಬಾಲಂಗೋಚಿಗಳನ್ನೇ ನೇಮಿಸಿಕೊಂಡು ಮಿಲಿಟರಿ ಸರ್ವಾಧಿಕಾರ ಸ್ಥಾಪಿಸಿದರು.
* ಈ ಸರ್ವಾಧಿಕಾರ ಟೈವಾನ್‌ನ ಜನರ ಹಕ್ಕು ಸಮಸ್ಯೆಗಳಿಗಾಗಿ, ಅಧಿಕಾರದಲ್ಲಿ ಪಾಲಿಗಾಗಿ, ಚೀನಾ ದೇಶದೊಂದಿಗೆ ಒಂದಾಗುವುದಕ್ಕಾಗಿ ದನಿ ಎತ್ತಿದ ಸಾಹಿತಿ, ಬುದ್ಧಿಜೀವಿಗಳು ಸಮಾಜ ಸುಧಾರಕರನ್ನು 1,22,000 ದಷ್ಟು ದೊಡ್ಡ ಸಂಖ್ಯೆಯಲ್ಲಿ ಕೊಂದು ಹಾಕಿತು.
  ಟೈವಾನಿನಲ್ಲಿ ಕೇವಲ ಹತ್ತಿಪ್ಪತ್ತು ವರ್ಷಗಳ ಹಿಂದೆ ಚುನಾವಣೆಗಳನ್ನು ನಡೆಸಲಾರಂಭವಾಯಿತು. ನಂತರ ಅಧಿಕಾರಕ್ಕೆ ಬಂದ ಪ್ರತಿ ಸರ್ಕಾರವೂ ಮಿಲಿಟರಿ ಶಸ್ತ್ರಾಸ್ತ್ರಗಳ ಖರೀದಿ,ಭೂ ಹಗರಣ ಇತ್ಯಾದಿಗಳಲ್ಲಿ ಸಿಲುಕಿ ಹೆಸರು ಕೆಡಿಸಿಕೊಂಡಿದೆ. ಅಲ್ಲಿಯ ಸರ್ಕಾರದ ವಿರುದ್ಧ ಜನರ ಅಸಮಧಾನ ಹೆಚ್ಚುತ್ತಿದೆ.
* ಭಾರತ ಹೈದರಾಬಾದ್ ನಿಜಾಮ, ಗೋವಾ ವಿಷಯದಲ್ಲಿ ಮಾಡಿದಂತೆ ಅಂದೇ ಚೀನಾ ಟೈವಾನನ್ನು ವಶ ಪಡಿಸಿಕೊಳ್ಳುವ ಹಕ್ಕು ಇದ್ದರೂ 1949 ರಿಂದಲೇ ಚೀನಾದೊಂದಿಗೆ ಟೈವಾನ್ ಏಕೀಕರಣ ಶಾಂತಿಯುತ ಮಾರ್ಗದಲ್ಲಿಯೇ ನಡೆಯಬೇಕು ಎಂದು ಪ್ರತಿಪಾದಿಸುತ್ತಾ ಬಂದಿದೆ.
* ಬ್ರಿಟಿಷ್ ವಶದಲ್ಲಿದ್ದ ಹಾಂಗ್‌ಕಾಂಗ್ ಮತ್ತು ಪೋರ್ಚುಗೀಸರ ವಶದಲ್ಲಿದ್ದ ಮಕಾವೋ ಪ್ರದೇಶಗಳನ್ನು ಶಾಂತಿಯುತವಾಗಿಯೇ ಪಡೆದಂತೆ ಟೈವಾನನ್ನೂ ಪಡೆಯಬೇಕೆಂಬುದು ನಮ್ಮ ಗುರಿ ಎಂದು ಬಹಿರಂಗವಾಗಿಯೇ ಘೋಷಿಸಿದೆ.

ಈಗೇಕೆ ಇದ್ದಕ್ಕಿದ್ದಂತೆ ಗದ್ದಲ

ಕೇವಲ ಎಪ್ಪತ್ತು ವರ್ಷಗಳ, ಅದರಲ್ಲಿಯೂ ಕೇವಲ ನಲವತ್ತು ವರ್ಷಗಳ ವೇಗದ ಆರ್ಥಿಕ ಬೆಳವಣಿಗೆ ಕಂಡ ಚೀನಾದ ಆರ್ಥಿಕ ಬೆಳವಣಿಗೆ ನಾನೂರು ವರ್ಷಗಳ ಸುಕ್ಷೇಮವಾದ ಬೆಳವಣಿಗೆ, ವಿಶ್ವದ ಐವತ್ತು ಅರವತ್ತು ದೇಶಗಳ ಮೇಲೆ ಆಕ್ರಮಣ ಮಾಡಿ, ಅಧ್ಯಕ್ಷರ ಕೊಲೆ ಮಾಡಿಸಿ ಗಳಿಸಿದ ಅಮೆರಿಕದ ಸಂಪತ್ತನ್ನು ಮೀರಿ ಹೋಗುತ್ತಿದೆ ಎಂಬ ಸೋಜಿಗವನ್ನು ಅಮೇರಿಕಕ್ಕೆ ಜೀರ್ಣಿಸಿಕೊಳ್ಳಲಾಗದೆ ಒಂದು ಕಡೆ ಆರ್ಥಿಕ ನಿರ್ಬಂಧ, ನಿಷೇಧಗಳ ಯುದ್ಧ ಮತ್ತೊಂದು ಕಡೆ ಟಿಬೆಟ್, ಸಿಂಕಿಯಾಗ್, ಹಾಂಗ್ ಕಾಂಗ್‌ಗಳನ್ನು ಬಳಸಿ ಅಪಪ್ರಚಾರ, ಕಿರುಕುಳಗಳು. ಇಂಡಿಯಾ, ಜಪಾನ್, ಆಸ್ಟ್ರೇಲಿಯಾ, ಅಮೇರಿಕ ಸೇರಿದ ಕೂಟ ಇಂತಹವುಗಳ ಮೂಲಕ ಬೆದರಿಕೆಗಳನ್ನು ಒಡ್ಡುತ್ತಿದೆ.

ಟೈವಾನಿಗೆ ನೀಡುತ್ತಿರುವ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು, ಅಣು ಕ್ಷಿಪಣಿಯುತ ನಾವಿಕ ಸೈನ್ಯದ ನೆಲೆಯನ್ನೂ ಬಳಸಿ ಚೀನಾವನ್ನು ಮಿಲಿಟರಿ ಸ್ಪರ್ಧೆಗೆ ಸೆಳೆಯುವುದು, ಟೈವಾನಿನಲ್ಲಿ ಚೀನಾದ ಸೇರಬೇಕೆಂಬ ಭಾವನೆ ಬಲಿಯುತ್ತಿರುವುದನ್ನು ತಡೆಗಟ್ಟುವುದು ಅಮೆರಿಕದ ಟ್ರಂಪ್–ಬೈಡೆನ್ ಸರ್ಕಾರಗಳ ತಕ್ಷಣದ ಗುರಿ. ಇದರ ಸುಳಿವು ಸಿಕ್ಕಾಗ ಚೀನಾದ ಅಧ್ಯಕ್ಷರು ಶಾಂತಿಯುತ ಮಾರ್ಗದಲ್ಲಿಯೇ ಟೈವಾನನ್ನು ಒಂದುಗೂಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಆದರೆ ಅಗತ್ಯ ಬಿದ್ದರೆ ಬೇರೆ ಮಾರ್ಗಗಳನ್ನು ಬಳಸಲು ಸಿದ್ಧ ಎಂದು.

ಪ್ರಧಾನಿಗಳ 'ರೆವ್ಡಿ ಸಂಸ್ಕೃತಿ' ಗರ್ಜನೆ ಬೂಟಾಟಿಕೆ ....

ಪುಟ 13 ರಿಂದ

ಬಿಜೆಪಿ ಬೆಂಬಲಿಗರಿಗೆ ರೆವ್ಡಿಗಳು

ಮತ್ತೊಂದು ರೆವ್ಡಿ ವಿತರಣಾ ಕಸರತ್ತು ನಿರಂತರವಾಗಿ ನಡೆಯುತ್ತಿದೆ – ಇದು ವಿಶ್ವವಿದ್ಯಾನಿಲಯಗಳು, ಸಂಶೋಧನಾ ಸಂಸ್ಥೆಗಳು, ವಿವಿಧ ಸರ್ಕಾರಿ ಸಂಸ್ಥೆಗಳು, ನಿಯಂತ್ರಣ ಮತ್ತು ಶಾಸನಬದ್ಧ ಸಂಸ್ಥೆಗಳ ಮಂಡಳಿಗಳು ಮತ್ತು ಸಮಿತಿಗಳಲ್ಲಿ ವಿವಿಧ ಹುದ್ದೆಗಳಿಗೆ ಬಿಜೆಪಿ ಬೆಂಬಲಿಗರ ನೇಮಕ. ಇದು ಬಿಜೆಪಿಯ ಬೆಂಬಲಿಗರ ನಡುವೆ ಅವರ ನೆಲೆಯನ್ನು ಕ್ರೋಡೀಕರಿಸುತ್ತದೆ ಮತ್ತು ನಿಷ್ಠಾವಂತರಾಗಿದ್ದವರಿಗೆ ಪ್ರತಿಫಲ ನೀಡುತ್ತದೆ, ಅಷ್ಟೇ ಅಲ್ಲ, ಆರ್‌ಎಸ್‌ಎಸ್–ಬಿಜೆಪಿಯ ಸೈದ್ಧಾಂತಿಕ ಪ್ರಭಾವವನ್ನು ವಿಶೇಷವಾಗಿ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿಸ್ತರಿಸುವ ಒಂದು ಪ್ರಮುಖ ಉದ್ದೇಶವನ್ನೂ ಈಡೇರಿಸುತ್ತದೆ. ಈ ರೀತಿ ರಾಜಕೀಯ ನೇಮಕಾತಿ ಪಡೆದವರು ಆರೆಸ್ಸೆಸ್–ಬಿಜೆಪಿಯ ಕಾಲಾಳುಗಳಾಗಿದ್ದು, ಅವರ ಸಂಘಟನೆಯನ್ನು ವಿಸ್ತರಿಸಲು ಮತ್ತು ಆಳುವವರ ಪರವಾಗಿ ನೀತಿಗಳನ್ನು ರೂಪಿಸಲು ಸಹಾಯ ಮಾಡುತ್ತಾರೆ. ಇಂತಹ ರಾಜಕೀಯ ನೇಮಕಾತಿಗಳು ಸರ್ಕಾರಿ ಸಂಸ್ಥೆಗಳಿಗೂ ವಿಸ್ತರಿಸುತ್ತಿವೆ.

ಮೋದಿ ಮತ್ತು ಬಿಜೆಪಿ ಅತಿ ದೊಡ್ಡ ರೆವ್ಡಿ ವಿತರಕರು

ಮೇಲಿನ ಸಂಕ್ಷಿಪ್ತ ಚಿತ್ರವು ತೋರಿಸುವಂತೆ, ಕೆಲವು ಪ್ರತಿಪಕ್ಷಗಳ ಆಡಳಿತದ ರಾಜ್ಯ ಸರ್ಕಾರಗಳು ನೀಡಿದ ರೆವ್ಡಿಗಳ ವಿರುದ್ಧ ಮೋದಿಯವರ ಗರ್ಜನೆ ಪಕ್ಕಾ ಬೂಟಾಟಿಕೆಯಾಗಿದೆ. ಒಂದು ಪ್ರತಿಪಕ್ಷವು ವಿದ್ಯುತ್ ಅಥವಾ ನೀರಿನ ಶುಲ್ಕವನ್ನು ಕಡಿತಗೊಳಿಸುವುದಾಗಿ ಘೋಷಿಸಿದರೆ ಅಥವಾ ಸಂಕಷ್ಟದಲ್ಲಿರುವ ಜನರಿಗೆ ಇತರ ಅನುಕೂಲಗಳನ್ನು ನೀಡಿದರೆ, ಮೋದಿ ಮತ್ತು ಅವರ ಪಕ್ಷವು ಈ 'ಸಂಸ್ಕೃತಿ'ಗೆ ಆಕ್ಷೇಪ ಎತ್ತುತ್ತದೆ ಮತ್ತು ಅಂತಹ ಪ್ರಯತ್ನಗಳ ಬಗ್ಗೆ ಜಾಗೃತರಾಗಿರಿ ಎಂದು ಯುವಜನರನ್ನು ಎಚ್ಚರಿಸುತ್ತದೆ. ಆದರೆ ಮೋದಿ ಮತ್ತು ಅವರ ಮಂತ್ರಿಗಳು ಅಥವಾ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಗಳು ಅದೇ ರೀತಿ ಮಾಡಿದರೆ ಅದು "ಅಭಿವೃದ್ಧಿ" ಮತ್ತು "ಸಬ್ಕಾ ಸಾಥ್, ಸಬ್ಕಾ ವಿಕಾಸ್" ಆಗಿಬಿಡುತ್ತದೆ!

ವಾಸ್ತವವಾಗಿ, ಇಲ್ಲಿ ಈ ಬೂಟಾಟಿಕೆಯನ್ನೂ ಮೀರಿದ ಸಂಗತಿಯಿದೆ. ಮೋದಿ ಮತ್ತು ಅವರ ಬೆಂಬಲಿಗರು ಆಕ್ಷೇಪಿಸುತ್ತಿರುವುದು ಜನರಿಗೆ ಸರ್ಕಾರದ ನಿಧಿಯಿಂದ ಸ್ವಲ್ಪ ಪರಿಹಾರ ಅಥವಾ ಸಹಾಯವನ್ನು ನೀಡುವುದನ್ನು. ಅವರು ಕಲ್ಯಾಣ ವೆಚ್ಚದ ವಿರೋಧಿಗಳು. ಮೋದಿಯವರ ಸ್ವಂತ ಸರ್ಕಾರವು ದೊಡ್ಡ ಉದ್ಯಮಗಳಿಗೆ ಸಹಾಯ ಮಾಡಲು ಹಣವನ್ನು ಖರ್ಚು ಮಾಡಿದರೆ(ಅಥವಾ ತೆರಿಗೆಗಳನ್ನು ಕಡಿತಗೊಳಿಸಿದರೆ), ಅದು "ಅಭಿವೃದ್ಧಿ", ಅದು ಉತ್ತಮವಾಗಿರುತ್ತದೆ. ಆದರೆ ಜನರ ಕಷ್ಟಗಳನ್ನು ನಿವಾರಿಸಲು ಖರ್ಚು ಮಾಡುವುದು ಅವರಿಗೆ ಅಸಹ್ಯ. ಇದು ಮೋದಿ ಮತ್ತು ಬಿಜೆಪಿ/ಆರ್‌ಎಸ್‌ಎಸ್ ಅಪ್ಪಿಕೊಂಡಿರುವ ಮೂಲಭೂತ ಚಿಂತನೆ.

ಜನರ ಹಕ್ಕು–ಭಿಕ್ಷೆಯಲ್ಲ

ಮೋದಿಯವರ ಈ ಸಂದರ್ಭಸಾಧಕತನಕ್ಕೆ ತದ್ವಿರುದ್ಧವಾಗಿ, ಎಡಪಕ್ಷಗಳು ಜನರಿಗೆ ದೇಶದ ಸಂಪನ್ಮೂಲಗಳ ಮೇಲೆ ಹಕ್ಕಿದೆ ಎಂದು ನಂಬುತ್ತವೆ. ರಾಷ್ಟ್ರೀಯ ಸಂಪನ್ಮೂಲಗಳನ್ನು ಜನರ ಕಲ್ಯಾಣಕ್ಕಾಗಿ ಬಳಸುವುದು ಸರ್ಕಾರದ ಒಂದು ಕರ್ತವ್ಯ. ಸಂವಿಧಾನ, ಕಲಮು 38 (1)ರಲ್ಲಿ ಇದನ್ನು ಸ್ಪಷ್ಟವಾಗಿ ಹೀಗೆ ಹೇಳಿದೆ: "ಪ್ರಭುತ್ವವು ರಾಷ್ಟ್ರೀಯ ಜೀವನದ ಎಲ್ಲ ಸಂಸ್ಥೆಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು ಹೊಂದಿರುವ ಒಂದು ಸಾಮಾಜಿಕ ವ್ಯವಸ್ಥೆಯನ್ನು ಸಾಧ್ಯವಾದಷ್ಟು ಪರಿಣಾಮಕಾರಿಯಾಗಿ ಪಡೆಯುವ ಮತ್ತು ರಕ್ಷಿಸುವ ಮೂಲಕ ಜನರ ಕಲ್ಯಾಣವನ್ನು ಉತ್ತೇಜಿಸಲು ಶ್ರಮಿಸಬೇಕು." ಅದೇ ರೀತಿ, ಕಲಮು 38(2) ಪ್ರಭುತ್ವಕ್ಕೆ "ಆದಾಯದ ಅಸಮಾನತೆಗಳನ್ನು ಕಡಿಮೆ ಮಾಡಬೇಕು" ಮತ್ತು "ಸ್ಥಾನಮಾನ, ಸೌಲಭ್ಯಗಳು ಮತ್ತು ಅವಕಾಶಗಳ ಅಸಮಾನತೆಗಳನ್ನು ತೊಡೆದುಹಾಕಬೇಕು" ಎಂದು ನಿರ್ದೇಶನ ನೀಡುತ್ತದೆ. ಮೋದಿ ಮತ್ತು ಬಿಜೆಪಿ ಸರ್ಕಾರಗಳು ತಮ್ಮ ನೀತಿಗಳಿಗೆ ಅಂಟಿಕೊಳ್ಳುವ ಮೂಲಕ ಸಂವಿಧಾನದ ಆಶಯಕ್ಕೇ ವಿರುದ್ಧವಾಗಿ ನಡೆದುಕೊಳ್ಳುತ್ತಿವೆ. ವಿಶ್ವಾಸಾರ್ಹತೆ ಕಳಕೊಂಡಿರುವ ನವ ಉದಾರವಾದಿ ಕುರುಡುಸಿದ್ಧಾಂತ ಮತ್ತು ಪ್ರತಿಗಾಮಿ ಸಾಮಾಜಿಕ ಕಣ್ಣೋಟವನ್ನು ಎತ್ತಿಹಿಡಿಯುವುದರ ಸಮಸ್ಯೆಗಳಿವು.

"ನಾಲಗೆ ನಾಗರ ಮಾಡಿಕೊಂಡ ರಾಜಕಾರಣದಿಂದ ಪ್ರಜಾಪ್ರಭುತ್ವಕ್ಕೆ ಅಪಾಯ

ಪುಟ 16 ರಿಂದ

ಇಂಥಹ ದುರಿತ ಸಂದರ್ಭದಲ್ಲಿ 23–24ರಂದು ಎರಡು ದಿನ ದಾವಣಗೆರೆಯಲ್ಲಿ ನಡೆದ ಬಂಡಾಯ ಸಾಹಿತ್ಯ ಸಮ್ಮೇಳನ ಸಮಾನತೆ ಹಾಗೂ ಸಹಿಷ್ಣುತೆಯ ಆಶಯಗಳನ್ನು ಲೇಖಕರ ಮನದಲ್ಲಿ ಬೇರೂರಿಸುವಲ್ಲಿ ಯಶಸ್ವಿಯಾಗಿದೆ. ಈ ಯಶಸ್ಸು ಬಹುತೇಕ ಲೇಖಕರ ಮನದಲ್ಲಿ ಮನೆ ಮಾಡಿದ್ದ ನಾನಾ ಸಂದೇಹಗಳನ್ನು ಹೊಡೆದು ಹಾಕಿದೆ.

ಹಲವು ಪ್ರಶ್ನೆಗಳಿಗೆ ಉತ್ತರವಾದ ಸಮ್ಮೇಳನ

1. ಚಳವಳಿಯೊಂದಿಗೆ ಗುರುತಿಸಿಕೊಂಡರೆ ಸೃಜನಶೀಲತೆಗೆ ದಕ್ಕೆ.
2. ನಾವು ಯಾವ ಸಿದ್ಧಾಂತಕ್ಕೂ ಬದ್ಧರಲ್ಲ. ಬದುಕಿಗೆ ಬದ್ಧರು. ನಮ್ಮ ಮನಸ್ಸಿನ ಸಂತೋಷಕ್ಕೆ ಸಾಹಿತ್ಯ ಬರೆಯುತ್ತೇವೆ.
3. ನಾವು ಬಂಡಾಯವನ್ನೇ ಬರೆಯುತ್ತೇವೆ. ಆದರೆ ಬಂಡಾಯ ಸಂಘಟನೆಯೊಂದಿಗೆ ಗುರುತಿಸಿಕೊಳ್ಳುವುದಿಲ್ಲ.
4. ಬಂಡಾಯ ಸಾಹಿತ್ಯ ಎಂದರೇನು?

ಈ ನಾಲ್ಕು ಪ್ರಮುಖ ಪ್ರಶ್ನೆ ಮಾಡಿದ ಕೆಲವರು ಸಮ್ಮೇಳನದಿಂದ ದೂರ ಉಳಿದು ಉತ್ತರ ರೂಪದಲ್ಲಿ ದಕ್ಕಬೇಕಾದ ಜ್ಞಾನದಿಂದ ವಂಚಿತರಾದರು.

ಮೊದಲನೆಯದಾಗಿ, ಜನ ಚಳವಳಿಯೊಂದಿಗೆ ಗುರುತಿಸಿಕೊಂಡ ಪ್ರೇಮ್‌ಚಂದ್, ನಿರಂಜನ, ಬರಗೂರು, ಪೂರ್ಣಚಂದ್ರ ತೇಜಸ್ವಿ, ಚಂಪಾ. ಯು.ಆರ್.ಅನಂತಮೂರ್ತಿ, ಬೆಸಗರಹಳ್ಳಿ ರಾಮಣ್ಣ. ಬೊಳವಾರು ಮಹಮದ್, ರಷ್ಯಾದ ಪ್ರಖ್ಯಾತ ಸಾಹಿತಿ ಲೆಖಕ ಮ್ಯಾಕ್ಸಿಂಗೊರ್ಕಿ, ಪ್ಲೆಖನ್ವೊವ್, ನೊಬೆಲ್ ಪಡೆದ ಚಿಲಿಯ ಪಾಬ್ಲೊ ನೆರೂಡಾ, ಚೀನಾದ ಮಹಾನ್ ಲೇಖಕ ಲು ಷುನ್, ಲಂಕೇಶ್ ಮುಂತಾದವರು ಬರೆದ ಕಥೆ, ಕವಿತೆಗಳಲ್ಲಿ ಸೃಜನಶೀಲತೆ ಇಲ್ಲವೆ?

ಎರಡನೇಯದಾಗಿ, ಯಾವ ಸಿದ್ಧಾಂತಕ್ಕೂ ಬದ್ಧರಲ್ಲ ಎಂದು ಹೇಳಲು ಯಾರೂ ಅತೀತರಲ್ಲ. ಏಕೆಂದರೆ ಇಂಥವರ ಬರವಣಿಗೆ ಯಾವುದಾದರು ಒಂದು ತಾತ್ವಿಕತೆಗೆ ಅಂಟಿಯೇ ಅಂಟಿರುತ್ತದೆ. ನೀವು ಬದುಕಿಗೆ ಬದ್ಧರು ಎಂದರೆ ನಿಮ್ಮ ಬದುಕು ಈ ವ್ಯವಸ್ಥೆಯಲ್ಲಿ ಇಲ್ಲವೆ? ಅದು ರೂಪಿಸಿದ ಯಾತನೆ, ವಿಕೃತ ರಾಜಕಾರಣ, ಸಂಕಷ್ಟ, ಕನಸು, ನಿರೀಕ್ಷೆಗಳಿಂದ ನಿಮ್ಮ ಬದುಕು ಹೊರತಾದದ್ದೇ? ನಿಮ್ಮ ಸಂತೋಷಕ್ಕಾಗಿ ನೀವು ಸಾಹಿತ್ಯ ರಚನೆ ಮಾಡುವುದಾದರೆ ಅದನ್ನೇಕೆ ಜನರು ಓದಲು ಮುದ್ರಿಸುತ್ತೀರಿ? ಎಂಬ ಪ್ರಶ್ನೆ ಕೇಳಬೇಕಾಗುತ್ತದೆ. ಮೂರನೇಯದಾಗಿ, ಬಂಡಾಯ ಯಾರೊಬ್ಬರ ಸೊತ್ತಲ್ಲ. ನೀವು ಬಂಡಾಯ ಬರೆಯುತ್ತೇವೆ ಎಂಬಲ್ಲಿ ಬಂಡಾಯದ ತಾತ್ವಿಕತೆ ಅಡಗಿದೆ. ಆದರೆ ಸಂಘಟನೆಯೊಂದಿಗೆ ಗುರುತಿಸಿಕೊಳ್ಳುವುದಿಲ್ಲ ಎಂಬಲ್ಲಿ ನಿಮ್ಮ ಇಗೋ ಅಡಗಿದೆ. ತಾತ್ವಿಕತೆ ಹಾಗು ಇಗೋ ಪರಸ್ಪರ ವಿರೋಧ ವಿಚಾರಗಳಾಗಿವೆ. ನುಡಿ ಮತ್ತು ನಡೆಯ ಸಾಂಗತ್ಯದಲ್ಲಿನ ಬಿರುಕಿನಿಂದಾಗಿ ಈ ಗೊಂದಲ ಕಾಡುತ್ತದೆ.

ನಾಲ್ಕನೇಯ ಪ್ರಶ್ನೆ ಬಂಡಾಯ ಸಾಹಿತ್ಯದ ಬಗೆಗಿನ ಅರಿವಿಲ್ಲದವರು ಕೇಳುವ ಪ್ರಶ್ನೆ. ಬಂಡಾಯ ಎಂದರೆ ಹಿಡಿ ಬಡಿ ಕಡಿಯಲ್ಲ, ಬಂಡಾಯ ಸಮಾಜ ಬದಲಾವಣೆಯ ಆಶಯ. ಈ ಎಲ್ಲ ಪ್ರಶ್ನೆಗಳಿಗೆ ಸಮ್ಮೇಳನ ಸೂಕ್ತ ಉತ್ತರ ನೀಡಿತು.

ಸತ್ಯದ ಅನ್ವೇಷಣೆ ನಡೆಯಬೇಕಿದೆ

ದಾವಣಗೆರೆಯ ವಿದ್ಯಾ ನಗರದಲ್ಲಿನ ಕುವೆಂಪು ಕನ್ನಡ ಭವನದಲ್ಲಿ ನಗಾರಿ ಬಾರಿಸುವ ಮೂಲಕ ಸಮ್ಮೇಳನ ಉದ್ಘಾಟಿಸಿದ ನಾಡಿನ ಹಿರಿಯ ಚಿಂತಕ ಜಿ.ರಾಮಕೃಷ್ಣ ರವರು, ಅನೇಕ ಯುವಕರು ಬೈರಪ್ಪನವರ ಸಾಹಿತ್ಯದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಕೆಲ ಪ್ರಶ್ನೆಗಳು ಕೆಲವರನ್ನು ಕಾಡಿತು. ಇದಕ್ಕೆ ಉತ್ತರವೆಂಬಂತೆ ಮಾತನಾಡಿದರು ಅವರು,

"ಸಾಹಿತ್ಯದ ಮೂಲಭೂತ ಪ್ರಶ್ನೆ ಎಂದರೆ ಸತ್ಯಾನ್ವೇಷಣೆ. ಈ ಅನ್ವೇಷಣೆಯ ಸತ್ಯವನ್ನು ಜನರಿಗೊಪ್ಪಿಸುವುದು. ಬೈರಪ್ಪನವರ ಸಾಹಿತ್ಯದಲ್ಲಿ ಈ ಕ್ರಮ ಇದೆಯೇ? ಇವರ ಸಾಹಿತ್ಯದಲ್ಲಿ ಸತ್ಯವೂ ಇಲ್ಲ, ಸಿದ್ಧಾಂತವೂ ಇಲ್ಲ. ಯಾವಾಗಲೋ ಆದ ತಪ್ಪಿಗೆ, ಯಾರನ್ನೋ ಗುರಿಯಾಗಿಸಿ ಅವಹೇಳನ ಮಾಡುವ ಸಿದ್ಧಾಂತಗಳನ್ನು ಬೈರಪ್ಪ ಮುಂದಿಡುತ್ತಾರೆ."

ಸಾಹಿತ್ಯದ ನಿಜ ಆಶಯದ ಬಗ್ಗೆ ವೈಜ್ಞಾನಿಕವಾಗಿ ವಿಶ್ಲೇಷಿದ ಅವರು ಮುಂದುವರೆದು ಮಾತಾಡುತ್ತಾ, ಇಂದಿನ

ಶಿಕ್ಷಣದ ಅವ್ಯವಸ್ಥೆಯ ಕುರಿತು ಮತ್ತು ಸಾರ್ವಜನಿಕ ಶಿಕ್ಷಣದಿಂದ ಪಠ್ಯಕ್ಕೆ ಕೋಮುವಾದದ ನಂಟನ್ನು ಕುರಿತು ಅದರಿಂದಾಗಿ ಉಂಟಾಗುವ ವಿಕೃತ ಪರಿಣಾಮದ ಕುರಿತು ಮಾತನಾಡುತ್ತ, "ಪಠ್ಯ ರಚನೆಯಲ್ಲಿ ದಲಿತ ಲೇಖಕರು ಮೀಸಲಾತಿ ಕೇಳಲಿಲ್ಲ ವೇಕೆ?" ಎಂಬ ತಾತ್ವಿಕ ಪ್ರಶ್ನೆಯನ್ನು ಎತ್ತಿದರು.

ಈ ಪ್ರಶ್ನೆಯಲ್ಲಿ ಪಠ್ಯಪುಸ್ತಕದ ಬಗ್ಗೆ ರಾಜ್ಯದಲ್ಲಿ ಮೊಳಗಬೇಕಿದ್ದ ದೊಡ್ಡ ಮಟ್ಟದ ಪ್ರಜಾಸತ್ತಾತ್ಮಕ ಚಳವಳಿಯ ಕನಸು ಅಡಗಿದೆ. ಮುಂದುವರೆದು ಮಾತನಾಡಿದ ಅವರು, "ಬಂಡಾಯ ಸಾಹಿತ್ಯವನ್ನು ಎಲ್ಲರೂ ಬೆಂಬಲಿಸಬೇಕು ಮತ್ತು ಇಲ್ಲಿ ನಡೆಯುವ ಎಲ್ಲ ಚಿಂತನೆಗಳು ಔಪಚಾರಿಕವಾಗದೆ ಕಾರ್ಯರೂಪ ಪಡೆಯಬೇಕು ಎಂದು ಆಶಿಸಿದರು.

ನಾವು ಬಂದೂಕಧಾರಿಗಳಲ್ಲ ಬರಹಧಾರಿಗಳು

ಉದ್ಘಾಟನೆಯ ಅಧ್ಯಕ್ಷತೆ ವಹಿಸಿದ್ದ ಬಂಡಾಯದ ಹಿರಿಯ ಸಾಹಿತಿ, ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪನವರು

ಪ್ರಸ್ತುತ ಸಂದರ್ಭದಲ್ಲಿ ಎದುರಾದ ಪ್ರಶ್ನೆಗಳಿಗೆ ಸ್ಪಷ್ಟನೆ ನೀಡುತ್ತ,, "ಬಂಡಾಯ ಎಂಬ ಪರಿಕಲ್ಪನೆಗೆ ದಕ್ಕೆಯಾಗಿದೆ

ಅಧಿಕಾರ ಲಾಲಸೆಗಾಗಿ. ಎಲ್ಲ ನೈತಿಕತೆಯನ್ನು ಗಾಳಿಗೆ ತೂರಿ, ಲಜ್ಜೆಗೆಟ್ಟು ಪಕ್ಷಾಂತರಗೊಂಡ ಶಾಸಕರನ್ನು "ಬಂಡಾಯ" ಶಾಸಕರು ಎಂದು ಕರೆಯಲಾಗಿದೆ. ಇದು ಬಂಡಾಯದ ಆರ್ಥವ್ಯಾಪ್ತಿಗೆ ಕಳಂಕ ತಂದಿದೆ. ಬಂಡಾಯವೆಂದರೆ ಹೊಡಿ, ಬಡಿ,ಕಡಿ ಅಲ್ಲ. ಪಕ್ಷಾಂತರವೂ ಅಲ್ಲ, ತತ್ವಾಂತರವೂ ಅಲ್ಲ. ಬಂಡಾಯವೆಂದರೆ ಸಾಮಾಜಿಕ ಬದಲಾವಣೆಯ.

ಆಶಯ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಸಾಹಿತ್ಯದಿಂದಲೇ ಸಮಾಜ ಬದಲಾಗುತ್ತದೆ ಎಂಬ ಭ್ರಮೆ ನಮಗಿಲ್ಲ. ಆದರೆ ಬಂಡಾಯ ಸಾಹಿತ್ಯವು, ಬದಲಾವಣೆ ಪ್ರಕ್ರಿಯೆಗೆ ಜನರಲ್ಲಿ ಹೋರಾಟ ನಡೆಸುವ ಪ್ರಜ್ಞೆ ಮೂಡಿಸುವ ಹಾಗೂ ಅದನ್ನು ಬೆಂಬಲಿಸುವ ಮಹತ್ತರ ಪಾತ್ರ ವಹಿಸುತ್ತದೆ." ಎಂದರು ನಂತರ ಮಾತು ಮುಂದುವರೆಸಿ ಬಂಡಾಯ ಸಾಹಿತ್ಯ ಏನು ಮತ್ತದರ ಲೇಖಕರು ಯಾರು ಎಂಬ ಬಗ್ಗೆ ವಿವರಣೆ ನೀಡಿದರು. "ಲಿಂಗ, ಜಾತಿ, ಧರ್ಮ ತಾರತಮ್ಯಗಳಿಂದ ಅಸಮಾನತೆ ಹಾಗೂ ಅಸಹಿಷ್ಣುತೆಗಳನ್ನು ತುಂಬಿದ ಸಮಾಜವನ್ನು ಸಮಾನತೆ ಮತ್ತು ಸಹಿಷ್ಣುತೆಯ ಸಮಾಜವಾಗಿ ರೂಪಾಂತರಿಸಲು ದನಿ ಎತ್ತುವುದು ಹಾಗು ಅಂತಹ ಸಮಾಜ ಕಟ್ಟುವ ಆಶಯವನ್ನು ಎಲ್ಲರೆದೆಯಲ್ಲಿ ಬಿತ್ತುವುದು ಬಂಡಾಯ ಸಾಹಿತ್ಯ ಸಂಘಟನೆಯ ಹಾಗೂ ಲೇಖಕರ ಗುರಿಯಾಗಿದೆ" ಎಂದರು.

ದೇಶದ ಸ್ಥಿತಿಗತಿಯ ಬಗ್ಗೆ ಗಮನ ಸೆಳೆದರು, "ನಾಲಗೆಯನ್ನು ನಾಗರ ಮಾಡಿಕೊಂಡ ರಾಜಕಾರಣ ಪ್ರಜಾಪ್ರಭುತ್ವವನ್ನು ಅಪಾಯಕ್ಕೆ ಸಿಲುಕಿಸಿದೆ. ಹಿಂದಿನ ತುರ್ತು ಪರಿಸ್ಥಿತಿಗಿಂತ ಇಂದಿನ ಸ್ಥಿತಿ ಹೆಚ್ಚು ಅಪಾಯದಲ್ಲಿದೆ. ಕಾರಣ ಜನ ಸಾಮಾನ್ಯರ ಬದುಕು ದುರ್ಬರವಾಗಿದೆ. ಪರಿಸ್ಥಿತಿಗೆ ಮುಖಾಮುಖಿಯಾಗುವುದರೊಂದಿಗೆ ಜನರಲ್ಲಿ ಮನೆ ಮಾಡಿರುವ ಭಯ, ಅತಂಕ, ಯಾತನೆ ಒಟ್ಟಾರೆ ದಾರುಣಸ್ಥಿತಿ ಸಾಹಿತ್ಯದ ದನಿಯಾಗಬೇಕು. ಇದಕ್ಕಾಗಿ ಎಲ್ಲ ಪ್ರಗತಿಪರ ಚಿಂತನೆ ಹಾಗೂ ಚಿಂತಕರನ್ನು ಒಗ್ಗೂಡಿಸಿಕೊಂಡು ಬೆಳೆಯುತ್ತಿರುವ ಏಕೈಕ ಸಾಹಿತ್ಯ ಸಂಘಟನೆ ಬಂಡಾಯ ಸಾಹಿತ್ಯ ಸಂಘಟನೆಯಾಗಿದೆ". ಎಂದರು.

ಖ್ಯಾತ ಕವಿಯತ್ರಿ ಸುಕನ್ಯಾ ಮಾತನಾಡಿ ವೈದಿಕ ಸಂಸ್ಕೃತಿ ಹರಡುತ್ತಿರುವ ವಿಷ ಜಾಲದ ಬಗ್ಗೆ ವಿಷಾಧ ವ್ಯಕ್ತಪಡಿಸಿದರು, "ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಎರಡನೇ ದರ್ಜೆಯ ನಾಗರಿಕಳಾಗಿ ನಾನಾ ಶೋಷಣೆಗೆ ತುತ್ತಾಗಿದ್ದಾಳೆ. ಮಹಿಳೆಯರ ಸ್ವಾತಂತ್ರ್ಯ ದಮನಿಸುವ ಪ್ರವೃತ್ತಿ ಎಗ್ಗಿಲ್ಲದೆ ಸಾಗಿದೆ. ಒಂದೊಂದು ಜಾತಿಯ ಮಹಿಳೆಯರೂ ಒಂದೊಂದು ಕಟ್ಟುಪಾಡಿಗೆ ಸಿಲುಕಿದ್ದಾರೆ. ಈ ಜಾಡ್ಯ 21ನೇ ಶತಮಾನದಲ್ಲೂ ಮುಂದುವರೆದ ಕಾರಣ ದೇವದಾಸಿ ಪದ್ದತಿ, ವರದಕ್ಷಿಣೆ ಕಿರುಕುಳ, ಮಾನಸಿಕ ಹಾಗೂ ದೈಹಿಕ ಹಿಂಸೆಗಳು ಮೆರೆದಿವೆ.

ಇದರ ವಿರುದ್ಧ ಧ್ವನಿ ಮೊಳಗಿಸಬೇಕಾದ ಮಹಿಳೆಯರ ಪ್ರಜ್ಞೆ ಪುರೋಹಿತಶಾಹಿ ವೈದಿಕ ಸಂಸ್ಕೃತಿಯ ಪ್ರಭಾವಕ್ಕೊಳಗಾಗುತ್ತಿರುವುದು ಅಪಾಯದ ಸಂಗತಿಯಾಗಿದೆ. ಇದರಿಂದ ಮಹಿಳೆಯನ್ನು ಹೊರತರುವ ಮಹಿಳಾಪರ ಹೋರಾಟಗಳನ್ನು ರೂಪಿಸುವ ವಾತಾವರಣ ರೂಪಿಸಲು ಲೇಖಕರು ಮುಂದಾಗುವ ಅಗತ್ಯವಿದೆ" ಎಂದರು.

ಜನ ಸಂಸ್ಕೃತಿಯ ಜಾಗೃತಿ ಅಂಬೇಡ್ಕರ್ ಮಾದರಿ

ಸಮಕಾಲಿನ ಸನ್ನಿವೇಶಕ್ಕೆ ಹೊಸಪೀಳಿಗೆಯ ನೋಟ ಎಂಬ ಯುವಜನ ಗೋಷ್ಠಿ ಸಮ್ಮೇಳನದ ಗಮನ ಸೆಳೆದ ಮಹತ್ವದ ಗೋಷ್ಠಿಯಾಗಿದೆ. ಇದಕ್ಕೆ ಕಾರಣವೂ ಇದೆ. ಸಮ್ಮೇಳನದಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡದ್ದು. ಈ ಗೋಷ್ಠಿಯು ಪ್ರಗತಿಪರ ವಿಚಾರಗಳನ್ನು ಜನರತ್ತ ಸೆಳೆವ ಬಗ್ಗೆ ಸೂಕ್ಷ್ಮ ಹಾಗೂ ಪ್ರಯೋಗಿಕ ವಿಧಾನದ ಕುರಿತು ತನ್ನ ವಿಚಾರವನ್ನು ಕೇಂದ್ರೀಕರಿಸಿತು. ಅಲ್ಲದೆ ಪರಂಪರೆಯಿಂದ ಪಾಲಿಸಿಕೊಂಡು ಬಂದ ಜನ ಸಂಸ್ಕೃತಿಯಲ್ಲಿ ಆಳುವ ವರ್ಗದ ಕೋಮುವಾದ ತನ್ನ ಜೀವ ವಿರೋಧಿ ಹಾಗೂ ಜನವಿರೋಧಿ ಮನಸ್ಥಿತಿಯನ್ನು ಹೇಗೆ ಬೇರೂರಿಸುತ್ತಿದೆ ಎಂಬ ಬಗ್ಗೆ ಗಮನ ಸೆಳೆಯಿತು. ಪ್ರಗತಿಪರ ವಿಚಾರವನ್ನು ಜನರ ನಡುವೆ ಹೊತ್ತೊಯ್ಯುವ ಬಗೆಗೆ ಕೆಲವು ಮಾದರಿಗಳನ್ನು ಮುಂದಿಟ್ಟಿತು.

ಈ ಸಂದರ್ಭದಲ್ಲಿ ಸಂಗಾತಿ ಇಲ್ಲ. ಎಮ್.ಎಸ್ ರವರ ಹೇಳಿಕೆ ನೆನಪಾಗುತ್ತದೆ. "ಸಾಂಸ್ಕೃತಿಕ ರೂಪಗಳ ವಾಸ್ತವಿಕ ಬೇರುಗಳು ಸೃಷ್ಟಿ ಜನತೆಯ ನಡುವಿದ್ದರೂ, ಅವು ಶ್ರಮಿಕರ ನಿರ್ಮಿಸಲ್ಪಟ್ಟ ಅಪರಿಷ್ಕೃತ ಹಾಗೂ ಕೆತ್ತದ ಸಾಂಸ್ಕೃತಿಕ ರೂಪಗಳಾಗಿರುತ್ತವೆ. ನಿಧಾನವಾಗಿ ಆಳುವ ವರ್ಗದ ಪ್ರತಿನಿಧಿಗಳು ಅದನ್ನು ಶೃಂಗಾರಗೊಳಿಸಿ' ಅಲಂಕರಿಸಿ ಜನವಿರೋಧಿ ಸಂಸ್ಕೃತಿಯ ಬಿತ್ತನೆಗೆ ಸಾಧನವಾಗಿಸುತ್ತಾರೆ. ಇದು ಜನ ಚಳವಳಿಗೆ ಅಪಾಯ ತಂದೊಡ್ಡುತ್ತದೆ. ಈ ಗೋಷ್ಠಿಯಲ್ಲಿ 10 ಯುವಕರು ತಮ್ಮ ಕ್ಷೇತ್ರದಲ್ಲಿ ಉಂಟಾದ ಅನುಭವದೊಂದಿಗೆ ಇಂದಿನ ಸನ್ನಿವೇಶದ ವಿಷಣ್ಣತೆಯ ಮೇಲೆ ಬೆಳಕು ಚೆಲ್ಲಿದರು.

ಗೋಷ್ಠಿಯಲ್ಲಿ ಮಾತನಾಡಿದ ಡಾ. ಅರುಣ ಜೋಳದ ಕೂಡ್ಲೀಗಿ,"ಜನತೆಯ ನಡುವೆ ನಮ್ಮ ವಿಚಾರಗಳನ್ನು ಕೊಂಡೊಯ್ಯುವ ಮಾದರಿಗಳು ಬದಲಾಗಬೇಕು. ಜನಪದ ವಲಯದಲ್ಲಿ ಬಲಪಂಥೀಯತೆಯನ್ನು ನೆಲೆಗೊಳಿಸಲಾಗುತ್ತಿದೆ. ಮೇಲ್ ಜಾತೀಯತೆ ಕೆಲ ವಿದ್ವಾಂಸರು ಜನಪದವನ್ನು, ಜನ ಸಂಸ್ಕೃತಿಯನ್ನು ತಮ್ಮ ವಿಚಾರಗಳ ಭದ್ರತೆಗೆ ತಕ್ಕಂತೆ ಪರಿಷ್ಕರಿಸುವ ಮೂಲಕ ಅವುಗಳಲ್ಲಿರುವ ಜನಪರ ನಿಲುಗಳನ್ನು ಭ್ರಷ್ಟಗೊಳಿಸುತ್ತಿದ್ದಾರೆ. ಅವುಗಳಲ್ಲಿ ಪುರಾಣ ಪ್ರಜ್ಞೆ ತುಂಬುವ ಪ್ರಯತ್ನ ನಡೆದಿದೆ. ಇದರ ವಿರುದ್ಧ ದನಿಯನ್ನು ಆ ವಲಯದಿಂದಲೇ ರೂಪಿಸುವ ವಿಧಾನ ಬಹಳ ಮಹತ್ವದ್ದಾಗಿದೆ. ಇಂದು ಸ್ವಾತಂತ್ರ್ಯ ಹೇಗೆ ಬಂದಿತು ಎನ್ನುವದಕ್ಕಿಂತ ಬಂದಿರುವ ಸ್ವಾತಂತ್ರ್ಯ ಯಾವ್ಯಾವ ವಲಯದಲ್ಲಿ ಅತಂತ್ರಗೊಳ್ಳುತ್ತಿದೆ ಎನ್ನುವ ಚಿಂತನೆ ಮುಖ್ಯವಾಗಬೇಕೆ. ಅಂದು ವಿದೇಶಿಯರ ಎದುರು ಹೋರಾಡಿ ಸ್ವಾತಂತ್ರ್ಯ ಪಡೆಯಲಾಯಿತು. ಆದರೆ ಈಗ ಸ್ವದೇಶಿ ಮಂತ್ರ ಜಪಿಸಿ ಧರ್ಮಾಂಧತೆಯ ರಾಜಕಾರಣದ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆಯಬೇಕಿದೆ. ಈ ನಿಟ್ಟಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್‌ರವರ ಸಿಟ್ಟು, ಆಕ್ರೋಶ ಹಾಗೂ ಅವರ ತಾತ್ವಿಕತೆ ಮಾದರಿಯಾಗುತ್ತದೆ" ಎಂದರು.

ಮುಸ್ಲಿಂ ಸಮುದಾಯ ಧಾರ್ಮಿಕ ಮೂಲಭೂತವಾದದಿಂದ ಕಳಚಿಕೊಳ್ಳಬೇಕು

ನಂತರ ಮಾತನಾಡಿದ ಡಾ.ಮುಸ್ತಾಪ ಮುಸ್ಲಿಂ ಸಮುದಾಯದ ಆಂತರಿಕದಲ್ಲಿನ ಆತಂಕಗಳನ್ನು ವಿವರಿಸಿದರು. ಅವರು ಮಾತನಾಡುತ್ತ," ಮುಸ್ಲಿಂ ಸಮುದಾಯ ತನ್ನನ್ನು ತಾನು ವಿಮರ್ಶೆಗೊಳಪಡಿಸಿಕೊಳ್ಳಬೇಕಿದೆ. ಇಲ್ಲದಿದ್ದರೆ ಸಂವಿಧಾನದ ಆಶಯಗಳನ್ನು ಸೂಕ್ತವಾಗಿ ಹಾಗೂ ಸಮರ್ಪಕವಾಗಿ ಬಳಸಿ ತನ್ನನ್ನು ಸುಧಾರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅದು ಮೂಲಭೂತವಾದಿಗಳಿಂದ ಕಳಚಿಕೊಳ್ಳಬೇಕಿದೆ. ಸಮುದಾಯದೊಳಗಿನ ಯುವಕರು ಅದರಲ್ಲೂ ಮಹಿಳೆಯರು ಮೂಲಭೂತವಾದದತ್ತ ವಾಲುತ್ತಿರುವುದು ವಿಷಾಧಕರ. ಇದರಿಂದ ಮಹಿಳೆಯನ್ನು ಸಾರ್ವಜನಿಕ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಆರ್.ಎಸ್. ಎಸ್‌ನ ಪ್ರಯೋಗ ಶಾಲೆಯಾದ ಮಂಗಳೂರು(ದ.ಕ)ದಲ್ಲಿ ಯುವ ಬರಹಗಾರರಿದ್ದಾರೆ. ಮಹಿಳಾ ಲೇಖಕಿಯರ ಕೊರತೆ ಇದೆ. ಈ ಸಮುದಾಯದಲ್ಲಿ ಮುಖ್ಯವಾಗಿ ಕರಾವಳಿ ಭಾಗದಲ್ಲಿ ಧಾರ್ಮಿಕ ಶಿಕ್ಷಣ ಬೇರೂರಿದೆ. ಈ ಶಿಕ್ಷಣ ಕನ್ನಡದಲ್ಲಿ ನೀಡುತ್ತಿಲ್ಲ. ಅರೆಬಿಕ್ ಇಲ್ಲವೆ ಮಳೆಯಾಳಂ ಉರ್ದು ಭಾಷೆಯಲ್ಲಿ ನೀಡಲಾಗುತ್ತಿದೆ. ಮದರಸಾದಲ್ಲಿ ಸಂವಿಧಾನದ ಪಾಠಗಳು ನಡೆಯುವಂತಾಗಬೇಕು. ಈ ಆಶಯಗಳ ನೆಲೆಯಲ್ಲಿ ಮುಸ್ಲಿಮ್ ಸಮುದಾಯದ ಯುವಕರು ಹೋರಾಟ ನಡೆಸುವಂತಾಗಬೇಕು" ಎಂದು ಆಶಿಸಿದರು.

ಎಂ.ಜಿ. ಈಶ್ವರಪ್ಪ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ಸಾಹಿತ್ಯದಲ್ಲಿ ಸಮಾನತೆ ಮತ್ತು ಸಹಿಷ್ಣುತೆ ಗೋಷ್ಠಿಯಲ್ಲಿ ರಾಜಪ್ಪ ದಳವಾಯಿ ಪ್ರಾಚೀನ ಸಾಹಿತ್ಯ ಕುರಿತು, ದಾದಾಪೀರ್ ನವಲೆಹಾಳ್ ರವರು ಮಧ್ಯಕಾಲೀನ ಸಾಹಿತ್ಯದ ಬಗ್ಗೆ,ಮಮ್ತಾಜ್ ಬೇಗಂ ಅಧುನಿಕ ಸಾಹಿತ್ಯ ಕುರಿತು, ಜನಪದ ಸಾಹಿತ್ಯ ಬಗ್ಗೆ ಡಾ.ಕರಿಯಪ್ಪ ಮಾಳಿಗೆ ಉಪನ್ಯಾಸ ನೀಡಿದರು.

ನಂತರ ಕರ್ನಾಟಕ ಜನ ಚಳವಳಿಯ ಹಿನ್ನೋಟ – ಮುನ್ನೋಟ ಗೋಷ್ಠಿಯಲ್ಲಿ ಸಣ್ಣರಾಮರವರು ದಲಿತ ಚಳವಳಿ, ಪ್ರಕಾಶ್ ಕಮ್ಮರಡಿ ರೈತ, ಕಾರ್ಮಿಕ ಚಳವಳಿ ಬಗ್ಗೆ ಕೆ.ಮಹಾಂತೇಶ, ಮಹಿಳಾ ಚಳವಳಿಯ ಬಗ್ಗೆ ಎನ್.ಗಾಯತ್ರಿ ಉಪನ್ಯಾಸ ನೀಡಿದರು. ಹಿರಿಯ ಚಿಂತಕ ಸಿದ್ಧನಗೌಡ ಪಾಟೀಲರು ಆಧ್ಯಕ್ಷತೆ ವಹಿಸಿದ್ದರು.

ಶಿಕ್ಷಣ ಕ್ಷೇತ್ರದ ಸ್ಥಿತಿಗತಿ ಗೋಷ್ಠಿಯಲ್ಲಿ ಅಂಗನವಾಡಿ ಅಂಗಳದಲ್ಲಿ ಶಿಕ್ಷಣ ಕುರಿತು ಎಸ್. ವರಲಕ್ಷ್ಮಿ, ಸಾಮಾಜಿಕ ಆರ್ಥಿಕ ನೀತಿ ಕುರಿತಂತೆ ಕಿರಣ್ ಎಂ ಗಾಜನೂರು, ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ ಕುರಿತು ವೈ ಬಿ.ಹಿಮ್ಮಡಿಯವರು ಉಪನ್ಯಾಸ ನೀಡಿದರು. ಹಿರಿಯ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಅಧ್ಯಕ್ಷತೆ ವಹಿಸಿದ್ದರು.

ಸಮಾರೋಪ

ಜಸ್ಟಿಸ್ ನಾಗಮೋಹನ ದಾಸ್ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಸಮಾರೋಪ ನಡೆಯಿತು. ಹಿರಿಯ ಸಾಹಿತಿಗಳಾದ ಭಕ್ತರಳ್ಳಿ ಕಾಮರಾಜ್, ಆರ್.ಜಿ.ಹಳ್ಳಿ. ನಾಗರಾಜ, ಕೆ.ಷರೀಪ ವೇದಿಕೆಯಲ್ಲಿದ್ದರು. ಸಮಾರೋಪ ನುಡಿಯಲ್ಲಿ ಹಿರಿಯ ಸಾಹಿತಿ ಎಲ್.ಹನುಮಂತಯ್ಯ ಮಾತನಾಡಿ "ಪ್ರಗತಿಪರ ಸಿದ್ಧಾಂತಗಳು ಜನರು ನಡೆಸುವ ಐಕ್ಯ ಹೋರಾಟಕ್ಕೆ ಶಕ್ತಿ ನೀಡುವಂತಾಗಬೇಕು. ಇದಕ್ಕೆ ಉದಾಹರಣೆ ಎಂದರೆ ಕೃಷಿನೀತಿಗಳ ವಿರುದ್ಧ ದೆಹಲಿ ಗಡಿಯಲ್ಲಿ ನಡೆದ ಧೀರ್ಘ ಕಾಲದ ರೈತ ಚಳವಳಿಯಾಗಿದೆ. ಈ ನಿಟ್ಟಿನಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಎಲ್ಲ ಪ್ರಗತಿಪರ ಚಿಂತನೆಗಳೊಂದಿಗೆ ಮುಕ್ತ ಸಂವಾದಿಯಾಗಿದೆ. ಅಲ್ಲದೆ ಯವ ಲೇಖಕರ ಹೊಣೆಗಾರಿಕೆ ಏನಾಗಿರಬೇಕು ಎಂಬ ಬಗ್ಗೆ ಸಭೆಯ ಗಮನ ಸೆಳೆದರು.

NEW No. MAG(3)/NPP/205/2021-2022
JANASHAKTHI KANNADA VARA PATRIKE AUGUST 8-14, 2022 Price: Rs. 10/- Date of Publication: 5 AUGUST 2022 RNI No. KARKAN /2006/17926 Posted on 08-08-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

‘ನಾಲಗೆ ನಾಗರ ಮಾಡಿಕೊಂಡ ರಾಜಕಾರಣದಿಂದ ಪ್ರಜಾಪ್ರಭುತ್ವಕ್ಕೆ ಅಪಾಯ–ಬರಗೂರು

ಪಿ.ಆರ್. ವೆಂಕಟೇಶ್



"ಸಾಹಿತಿಗಳಾದ ನೀವು ಜನರಿಂದ ಮನ್ನಣೆ ಬಯಸುತ್ತೀರಿ; ಜನರು ನಿಮ್ಮಿಂದ ಜವಾಬ್ದಾರಿಯನ್ನು ಬಯಸುತ್ತಾರೆ"

-- ಪ್ಲೆಖನೋವ್ (ರಷ್ಯಾದ ಪ್ರಖ್ಯಾತ ಸಾಹಿತಿ)

ಆಗ "ಬಂಧೂಕದ ಬಾಯಲ್ಲಿ ಗುಬ್ಬಚ್ಚಿ ಗೂಡು ಕಟ್ಟುತ್ತವೆ" (ರಂಜಾನ್‌ದರ್ಗಾ) ಎಂದು ಬಂಡಾಯ ಕವಿ ಹಾಡಿದ್ದರು ಆದರೀಗ ಬಾಯಿಗಳೇ ಬಂಧೂಕವಾದ ಸನ್ನಿವೇಶದಲ್ಲಿದ್ದೇವೆ. ಆಗ ಬಂಡಾಯದ ಪ್ರತಿ ಕಾವ್ಯದಲ್ಲೂ ಸಮಾನತೆಯ ನಾಡಕಟ್ಟುವ ಆಶಯ ಮೊಳಗುತ್ತಿತ್ತು. ಈಗ ಸಮಾನತೆಯ ನಾಡ ಕಟ್ಟುವಿಕೆಯಲ್ಲಿ ಒಂದಾಗಬೇಕಾದ ಮನಸುಗಳು ಛಿದ್ರವಾಗಿವೆ. ಆಗ ಸಂಘಟನೆಯ ಯುಗ ಈಗ ವಿಘಟನೆಯ ಯುಗ. ಕಾಲ ಬದಲಾದಂತೆ, ಕಾಲಕ್ಕೆ ಮುಖಾಮುಖಿಯಾದ ಸಾಹಿತ್ಯದ ಆಶಯವು ಬದಲಾಗುತ್ತಿದೆ.

ಕನ್ನಡ ಸಾಹಿತ್ಯದ ಪ್ರತಿ ಘಟ್ಟದ ಹುಟ್ಟಿಗೆ ಆಯಾ ಕಾಲಘಟ್ಟದ ನಿರ್ದಿಷ್ಟ ಸನ್ನಿವೇಶಗಳು ಕಾರಣಗಳಾಗಿವೆ. ಪ್ರಾರಂಭದಲ್ಲಿ ನವ್ಯವು, ನವೋದಯ ಹುಟ್ಟುಹಾಕಿದ ವೈಜ್ಞಾನಿಕ ಮನೋಭಾವದ ಕಾಳಜಿಯೊಂದಿಗೆ ಸಾಮಾಜಿಕ ಪ್ರಜ್ಞೆಯನ್ನು ಮೌಢ್ಯದ ಮುಷ್ಠಿಯಿಂದ ಮುಕ್ತಗೊಳಿಸುವ ಆಶಯವನ್ನು ಹೊಂದಿ, ಕಾಲಾನಂತರ ಆ ಆಶಯದೊಂದಿಗೆ ದೂರ ಸರಿದು ವೈಯಕ್ತಿಕತೆ ನೆಲೆಯ ನಾರುವ ವ್ಯಕ್ತಿತ್ವದ ಹಪಹಪಿಯಲ್ಲಿ ನರಳಲು ಪ್ರಾರಂಭಿಸಿತು.

70ರ ದಶಕದ ಸಂದರ್ಭದಲ್ಲಿ ಬಿ.ಬಸವಲಿಂಗಪ್ಪನವರು ಬೂಸಾ ಸಾಹಿತ್ಯ ಎಂದು ವ್ಯಕ್ತಪಡಿಸಿದ ಆಕ್ರೋಶ ಚಳವಳಿಯ ರೂಪ ಪಡೆದು ಸಾಹಿತ್ಯದಲ್ಲಿ ಹೊಸ ಆಲೋಚನೆ ಸುಳಿಯಲು ಪ್ರಾರಂಭಿಸಿತು. ಆಗಲೆ ನವ್ಯದಲ್ಲಿದ್ದ ಕೆಲ ಸಾಹಿತಿಗಳು ತಮ್ಮ ಜಾಡನ್ನು ಬದಲಿಸಿ ಹೊಸ ಹಾದಿಗೆ ಅಂಟಿಕೊಂಡರು.

70 ಮತ್ತು 80ರ ದಶಕದಲ್ಲಿ ಹಾಗೂ 1995ರವರೆಗೆ ಬಂಡಾಯ ಸಾಹಿತ್ಯ ತನ್ನ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಸಾಹಿತ್ಯ ಜನ ಚಳವಳಿಗೆ ಬೇಕಾದ ಸಾಮಾಜಿಕ ಪ್ರಜ್ಞೆ ರೂಪಿಸುವಲ್ಲಿ ತನ್ನ ಪಾತ್ರವನ್ನು ನಿರ್ವಹಿಸಿದೆ. ಇದಕ್ಕೆ ಅಂದಿನ ಬಂಡಾಯ ಲೇಖಕರು ಬರೆದ ಕಾವ್ಯ, ಕಥೆಗಳು ಸಾಕ್ಷಿಯಾಗಿವೆ. 1995 ನಂತರ ಜಾಗತೀಕರಣದ ಪ್ರಕ್ರಿಯೆ ತೀವ್ರಗೊಳ್ಳುತ್ತಾ ಸಾಗಿದಂತೆ. ಮತ್ತು ಇದರ ಬೆನ್ನಲ್ಲೇ ಮೂಡಿದ ಎಲ್.ಪಿ.ಜಿ (ಲಿಬರಲೈಜೇಷನ್, ಪ್ರವೆಟೈಜೇಷನ್, ಗ್ಲೋಬಲೈಜೇಷನ್) ಗಳನ್ನು, ದೇಶದ ಅಭಿವೃದ್ಧಿಯ ಸಾಧನವಾಗಿಸಿಕೊಂಡ ಆಳುವ ರಾಜಕಾರಣ ಸಮಾಜದ ದಿಕ್ಕನ್ನೇ ಬದಲಿಸಿದವು. ಇದನ್ನೇ ಸಮಾಜದ ಪ್ರಗತಿಗೆ ಹೆದ್ದಾರಿ ಎಂದು ಭಾವಿಸಿತು. ಆದರೆ ಇದು ಸೃಷ್ಟಿಸಿದ ಅವಾಂತರಗಳ ವಿರುದ್ಧ ಎತ್ತಿದ ಬಂಡಾಯ ಸಾಹಿತ್ಯದ ಧನಿ ಜನ ಚಳವಳಿಗೆ ಬೆಂಬಲವಾಗಿ ನಿಂತಿತು.

ನಂತರದಲ್ಲಿ ಬಂದ ತುರ್ತು ಪರಿಸ್ಥಿತಿ, ದಲಿತ ಚಳವಳಿ, ರೈತರ ಬಂಡಾಯ ‘ಎಡ ಚಳವಳಿ, ಸಮುದಾಯ ಸಾಂಸ್ಕೃತಿಕ ಚಳವಳಿ, ಭಾಷಾ ಚಳವಳಿ ಮುಂತಾದವು ಬಂಡಾಯ ಸಾಹಿತ್ಯ ಚಳವಳಿಯ ಹುಟ್ಟಿಗೆ ಸ್ಪಷ್ಟ ಕಾರಣವಾದವು.

"ಖಡ್ಗವಾಗಲಿ ಕಾವ್ಯ; ಜನರ ನೋವಿಗೆ ಮಿಡಿವ ಪ್ರಾಣ ಮಿತ್ರ"

"ಬಂಡಾಯ ಒಂದು ಮನೋಧರ್ಮ – ಮಾನವೀಯತೆ ಒಂದು ಮೌಲ್ಯ" ಎಂಬ ಘೋಷವಾಕ್ಯ ಮೊಳಗಿತು.

ಅಲ್ಲಿವರೆಗಿನ ಕನ್ನಡದ ಒಟ್ಟು ಸಾಹಿತ್ಯದಲ್ಲಿ ಅಡಕವಾಗಿದ್ದ ಕ್ಷೀಣ ನೆಲೆಯಲ್ಲಿದ್ದ ಪ್ರತಿಭಟನೆಯ ಪ್ರಖರ ದನಿಯನ್ನು ಬಂಡಾಯ ಸಾಹಿತ್ಯ ತನ್ನ ಮುಡಿಗೇರಿಸಿಕೊಂಡು ಮುನ್ನಲೆಗೆ ತಂದಿತು. ಸಾಹಿತ್ಯದ ಭಾಷೆ, ಆಶಯ ಬದಲಾದವು. ಅಂದಿನಿಂದ ಇಂದಿನವರೆಗೆ ಸಾಹಿತ್ಯ ಪರೆಯೊಂದಿಗೆ ಹಾಗೂ ಜನ ಸಂಸ್ಕೃತಿಯೊಂದಿಗೆ ಸಂವಾದಿಸುತ್ತಲೇ ಬಂಡಾಯ ತನ್ನ ಕಾಲಘಟ್ಟದ ಸಾಂಸ್ಕೃತಿಕ ಬಿಕ್ಕಟ್ಟಿಗೆ ಸೃಜನಾತ್ಮಕ ಪ್ರತಿರೋಧ ನೀಡುತ್ತಲೆ ಇದೆ.

ಬಂಡಾಯ ಸಾಹಿತ್ಯ ಸಂಘಟನೆ ಹುಟ್ಟಿದ ನಂತರದ ನಾಲ್ಕು ದಶಕದಲ್ಲಿ ಉಂಟಾಗಿರುವ ಬದಲಾವಣೆ ಹಿನ್ನೆಲೆಯಲ್ಲಿ ಬಂಡಾಯವು ಪ್ರಸ್ತುತ ಸ್ಥಿತಿಗೆ ತಕ್ಕಂತೆ ಸಮಾನತೆಯೊಂದಿಗೆ ಸಹಿಷ್ಣುತೆಯ ಆಶಯವನ್ನೂ ಸೇರಿಸಿಕೊಂಡು ತನ್ನ ವ್ಯಾಪ್ತಿಯನ್ನು ಇನ್ನಷ್ಟು ವಿಶಾಲಗೊಳಿಸಿ ಲೇಖಕರ ಹೊಣೆಗಾರಿಕೆಯನ್ನು ಹೆಚ್ಚಿಸಿದೆ. ನಾಲ್ಕು ದಶಕದ ಇದರ ನಡೆಯಲ್ಲಿ ಏರಿಳಿತ ಸಾಮಾನ್ಯ. ಈ ಬಗ್ಗೆ ಕೆಲವರು ಅಪಸ್ವರ ಎತ್ತಿ ಆಡಿಕೊಂಡಿದ್ದಿದೆ.

ಪ್ರಾರಂಭದಲ್ಲಿ ಇದು ಡಂಬಾಯ ಎಂಬ ವ್ಯಂಗದ ಕಟು ಟೀಕೆ ಕೇಳಿ ಬಂದಿತು. ಹೀಗೆ ವ್ಯಂಗವಾಡಿದವರ ಸಾಂಸ್ಕೃತಿಕ ರಾಜಕಾರಣದ ಪ್ರಚಾರಕ್ಕೆ ಬಂಡಾಯವೇ ವೇದಿಕೆಯಾಗಿದ್ದು ಒಂದು ಇತಿಹಾಸ. ಈಗಲೂ ಅಂಥಹ ವ್ಯಂಗ್ಯ ಟೀಕೆಗಳು ನಿಂತಿವೆ ಎನ್ನುವಂತಿಲ್ಲ.

ದಾವಣಗೆರೆಯ ಸಮ್ಮೇಳನದ ಪ್ರಚಾರಕ್ಕೆ ಆಶಯದ ನುಡಿ ನೀಡುವಂತೆ ಕೆಲವರನ್ನು ಕೇಳಿದಾಗ ಎಲ್ಲಿದೆ ಬಂಡಾಯ? ಎಂಬ ವ್ಯಂಗ್ಯ ಪ್ರಶ್ನೆ ಹಾಕಿದ್ದುಂಟು. ಇನ್ನು ಕೆಲವರು ಪ್ರಚಾರ ಮುಖ್ಯವಲ್ಲ ಪ್ರಖರ ಮುಖ್ಯ ಎಂದು ಬಿಗುಮಾನ ತೋರಿದ್ದುಂಟು.





ಇತ್ತೀಚಿನ ಯುವಕರು ಬಂಡಾಯ ಎಂದರೇನು? ಎಂಬ ಕುತೂಹಲದ ಪ್ರಶ್ನೆ ಕೇಳಿದ್ದುಂಟು.

ಕೆಲವರಿಗೆ ಸಮುದ್ರದ ಅಲೆಗಳ ಏರಿತಗಳ ಸಹಜ ಪ್ರಕ್ರಿಯೆಯ ಅರಿವಿನ ಕೊರತೆಯಿದೆ ಎನಿಸಿತು. ಅಲ್ಲದೆ ಪ್ರಖರತೆ ಬಗ್ಗೆ ಮಾತಾಡಿದವರು ಅಮೂರ್ತ ಕಲ್ಪನೆಯ ಸಂಶೋಧಕರಂತೆ ಕಂಡರು. ಇತ್ತೀಚಿನ ಯುವಕರ ಪ್ರಶ್ನೆ ಸಹಜವಾದದ್ದೆ. ಅದೇನೇ ಇರಲಿ ಇಂಥಹ ಪ್ರಶ್ನೆಗಳಿಗೆ ಸಮ್ಮೇಳನ ತಕ್ಕ ಉತ್ತರ ನೀಡುವಲ್ಲಿ ಯಶಸ್ವಿಯಾಯಿತು.

70 ಮತ್ತು 80ರ ದಶಕದಲ್ಲಿ ಹಾಗೂ 1995ರವರೆಗೆ ಬಂಡಾಯ ಸಾಹಿತ್ಯ ತನ್ನ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಸಾಹಿತ್ಯ ಜನ ಚಳವಳಿಗೆ ಬೇಕಾದ ಸಾಮಾಜಿಕ ಪ್ರಜ್ಞೆ ರೂಪಿಸುವಲ್ಲಿ ತನ್ನ ಪಾತ್ರವನ್ನು ನಿರ್ವಹಿಸಿದೆ. ಇದಕ್ಕೆ ಅಂದಿನ ಬಂಡಾಯ ಲೇಖಕರು ಬರೆದ ಕಾವ್ಯ, ಕಥೆಗಳು ಸಾಕ್ಷಿಯಾಗಿವೆ. 1995 ನಂತರ ಜಾಗತೀಕರಣದ ಪ್ರಕ್ರಿಯೆ ತೀವ್ರಗೊಳ್ಳುತ್ತಾ ಸಾಗಿದಂತೆ. ಮತ್ತು ಇದರ ಬೆನ್ನಲ್ಲೇ ಮೂಡಿದ ಎಲ್.ಪಿ.ಜಿ (ಲಿಬರಲೈಜೇಷನ್, ಪ್ರವೆಟೈಜೇಷನ್, ಗ್ಲೋಬಲೈಜೇಷನ್) ಗಳನ್ನು, ದೇಶದ ಅಭಿವೃದ್ಧಿಯ ಸಾಧನವಾಗಿಸಿಕೊಂಡ ಆಳುವ ರಾಜಕಾರಣ ಸಮಾಜದ ದಿಕ್ಕನ್ನೇ ಬದಲಿಸಿದವು. ಇದನ್ನೇ ಸಮಾಜದ ಪ್ರಗತಿಗೆ ಹೆದ್ದಾರಿ ಎಂದು ಭಾವಿಸಿತು. ಆದರೆ ಇದು ಸೃಷ್ಟಿಸಿದ ಅವಾಂತರಗಳ ವಿರುದ್ಧ ಎತ್ತಿದ ಬಂಡಾಯ ಸಾಹಿತ್ಯದ ಧನಿ ಜನ ಚಳವಳಿಗೆ ಬೆಂಬಲವಾಗಿ ನಿಂತಿತು.

ತದನಂತರ ನಂತರ ಆಳ್ವಿಕೆಗೆ ಬಂದ ಧರ್ಮದೊಂದಿಗೆ ಸಂಯೋಜನೆಗೊಂಡ ರಾಜಕಾರಣ ಬಲತ್ಕಾರ ಹಾಗೂ ಬಲತ್ಕಾರವಲ್ಲದ ಅಸ್ತ್ರ ಉಪಯೋಗಿಸಿ. ಜನರ ಹೋರಾಟ ಹಾಗೂ ಅದಕ್ಕೆ ಪೂರಕವಾದ ಸೃಜನಶೀಲತೆಯನ್ನು ದಮನಿಸುವ ನೀತಿಯನ್ನು ಪ್ರಖರಗೊಳಿತು. ಇದಕ್ಕೆ ಉದಾಹರಣೆ ಎಂದರೆ ಶಿಕ್ಷಣ, ಧರ್ಮ, ಸಾಹಿತ್ಯ, ಸಂಶೋಧನೆ ಮತ್ತು ಸಂಸ್ಕೃತಿ ವಲಯಗಳಲ್ಲಿ ವಿಕೃತಿ ಮೆರೆದದ್ದು, ಈ ವಲಯಗಳಲ್ಲಿ ಪ್ರಗತಿಪರ ಚಿಂತಕರ ಕೊಲೆಗಳಾದವು. ಆಳುವವರ ಬಾಲಂಗೋಚಿಗಳು ಚಿಂತಕರ ಸಾವನ್ನು ವಿಜೃಂಭಿಸುವ ಕುಹಕ ಮೆರೆದರು. ಸಂವಿಧಾನವನ್ನು ಬದಲಾಯಿಸುವ ಮಾತುಗಳು ಕೇಳಿಬಂದವು. ಭ್ರಾಮಕತೆಯಿಂದ ಕಣ್ಣು ಮುಚ್ಚಿದ ಆಡಳಿತಕ್ಕೆ ಭ್ರಮೆಯೊಳಗಿನ ಕತ್ತಲು ತೋರಿದ ಸಾಹಿತಿಗಳು, ಚಿಂತಕರು ದೇಶದ್ರೋಹಿಗಳಾದರು. ಸರಳುಗಳ ಬಂಧಿಯಾದರು. ಇದಕ್ಕೆ ಸ್ಪಷ್ಟ ನಿದರ್ಶನವೆಂದರೆ ಈಗಲೂ ಸಾಹಿತಿಗಳಿಗೆ ಬರುವ ಬೆದರಿಕೆ ಪತ್ರಗಳು.

'ದಯೆ' ಕಳಚಿದ 'ಧರ್ಮ', ಕಾರ್ಪೊರೇಟ್ ಆರ್ಥಿಕತೆಯ ಹಿತಾಸಕ್ತಿಯನ್ನು ಆಶಯವಾಗಿಸಿಕೊಂಡ ರಾಜಕಾರಣದ ಕೈಯಲ್ಲಿ ಅಫೀಮಾಗಿ ಅಸಹಿಷ್ಣುತೆ ಬಿತ್ತುವ ತಲುಬಾಯಿತು. ಧರ್ಮ ಹಾಗೂ ದೇವರ ಬಗ್ಗೆ ಮುಗ್ಧ ಭಾವ ಹೊಂದಿದ ಜನರ ಪ್ರಜ್ಞೆಯನ್ನು ಕಬಳಿಸಿ ಕೆರಳಿಸು ಕ್ರಿಯೆ ನಡೆಯಿತು. ದೇಶದ ತುಂಬ ಭೂತ ಪ್ರಜ್ಞೆಯನ್ನು ಆರಾಧಿಸುತ್ತ ವರ್ತಮಾನದ ಕನಸುಗಳಿಗೆ ಬೆಂಕಿ ಹಚ್ಚಲಾಯಿತು. ದ್ವೇಷ, ಭಯ, ಆತಂಕಗಳನ್ನು ಸೃಷ್ಠಿಸಿ ಜನರನ್ನು ಒಟ್ಟಾಗದಂತೆ ಒಡೆದಾಳಲು ಪ್ರಾರಂಭಿಸಿದೆ. ದೇಶಪ್ರೇಮದ, ರಾಷ್ಟ್ರಭಕ್ತಿ, ಒಂದು ಧರ್ಮ, ಒಂದು ದೇಶ, ಒಬ್ಬ ನಾಯಕ, ಒಂದು ಭಾಷೆ, ಎಂಬ ಭಾವನಾತ್ಮಕ ಉನ್ಮಾದದಲ್ಲಿ ಸರ್ವಜನಾಂಗದ ಶಾಂತಿಯ ತೋಟದ ಬುನಾದಿಯನ್ನೇ ಬುಡಮೇಲು ಮಾಡುವ ವಿಕೃತ ಕುಚೇಷ್ಟೆಗಳು ನಡೆದಿವೆ. ಅಧಿಕಾರದಲ್ಲಿರುವ ಧರ್ಮಾಂಧತೆ ಪ್ರಗತಿ ಆಶಯದ ಚಕ್ರದ ಮುನ್ನಡೆಗೆ ಭೂತದ ಸನ್ನೆ ಹಾಕಿ ಹಿಮ್ಮುಖ ಚಲನೆಗೆ ಚಾಲನೆ ನೀಡಿದೆ. ಈ ವಾಸ್ತವತೆಯ ಅರಿವಿನಿಂದ ವಂಚನೆಯಾದವರು ಬಂಡಾಯವನ್ನು ಟೀಕಿಸುವುದು ಸಹಜ.

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**